ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಶಿಕ್ಷಣ
ತುಮಕೂರಿನ ಮೇಳೇಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯ ಕಾಯಕಲ್ಪವಾಗಿದ್ದು ಹೇಗೆ?

ವಿದೇಶ ವಿದ್ಯಮಾನ
ಮಾಲ್ದೀವ್ಸ್: ಭಾರತದಿಂದ ದೂರ, ಚೀನಾಕ್ಕೆ ಹತ್ತಿರ

ಶಿರಸಿ: ಕಾರ್ಮಿಕರನ್ನು ಬಳಸಿ ಶೌಚಗುಂಡಿ ಸ್ವಚ್ಛ 4

ಅರಿವಿಲ್ಲದೆ 'ಐಪಿಒ' ಹಿಂದೆ ಓಡಬೇಡಿ! 8

ಎಐಎಂಎಸ್‌ಎಸ್ 7ನೇ ರಾಜ್ಯಮಟ್ಟದ ಮಹಿಳಾ ಸಮಾವೇಶ
'ಬಿಸಿಯೂಟ: ಕಾಲೇಜುಗಳಿಗೂ ವಿಸ್ತರಿಸಿ' 4B

ಪ್ರಧಾನಿ ನರೇಂದ್ರ ಮೋದಿ ಮತ್ತು ಭಾರತೀಯರ ಬಗ್ಗೆ ಅಪಮಾನಕರ ಮಾತು

ಮಾಲ್ದೀವ್ಸ್ ಸಚಿವರ ಅಮಾನತು

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ, ಭಾರತದ ಬಗ್ಗೆ ಅವಮಾನಕರ ಮಾತುಗಳನ್ನು ಆಡಿದ್ದ ಉಪ ಸಚಿವರಾದ (ಡೆಪ್ಯುಟಿ ಮಿನಿಸ್ಟರ್) ಮರಿಯಂ ಶಿವ್ನ, ಅಬ್ದುಲ್ಲಾ ಎಂ. ಮಾಜಿದ್, ಮಾಲ್ಶಾ ಶರೀಫ್ ಅವರನ್ನು ಮಾಲ್ದೀವ್ಸ್ ಸರ್ಕಾರವು ಭಾನುವಾರ ಅಮಾನತು ಮಾಡಿದೆ. ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು ಅವರ ಚೀನಾ ಭೇಟಿಯ ಒಂದು ದಿನ ಮೊದಲು ದ್ವೀಪರಾಷ್ಟ್ರದಲ್ಲಿ ಈ ಬೆಳವಣಿಗೆ ಆಗಿದೆ.

ಭಾರತದ ಜೊತೆ ರಾಜತಾಂತ್ರಿಕ ಸಂಘರ್ಷ ಉಂಟಾಗುವುದನ್ನು ತಪ್ಪಿಸುವ ಉದ್ದೇಶದಿಂದ ಮಾಲ್ದೀವ್ಸ್ ಈ ಕ್ರಮ ಕೈಗೊಂಡಿದೆ ಎಂದು ವಿಶ್ಲೇಷಣೆ ಇದೆ. ಮಾಲ್ದೀವ್ಸ್‌ನ ಮೂವರು ಉಪ ಸಚಿವರು ಆಡಿದ್ದ ಮಾತುಗಳ ಬಗ್ಗೆ ಕೇಂದ್ರ ಸರ್ಕಾರವು ತನ್ನ ಅಸಮಾಧಾನವನ್ನು ಮಾಲ್ದೀವ್ಸ್ ಸರ್ಕಾರಕ್ಕೆ ತಿಳಿಸಿತ್ತು. ನಂತರದಲ್ಲಿ ಅಲ್ಲಿನ ಸರ್ಕಾರವು, ಈ ಉಪ ಸಚಿವರು ಸಾಮಾಜಿಕ ಜಾಲತಾಣಗಳ ಮೂಲಕ ಆಡಿರುವ ಮಾತುಗಳಿಗೂ ತನಗೂ ಸಂಬಂಧ ಇಲ್ಲ ಎಂದು ತಿಳಿಸಿತ್ತು.

ಅವಮಾನಕರ ಮಾತುಗಳು ಆಯಾ ಉಪ ಸಚಿವರ ವೈಯಕ್ತಿಕ


ಮಾಲ್ಶಾ ಶರೀಫ್


ಮರಿಯಂ ಶಿವ್ನ

ನಿಲುವನ್ನು ಹೇಳುತ್ತಿವೆಯೇ ಹೊರತು, ಆ ಮಾತುಗಳು ಸರ್ಕಾರದ ನಿಲುವನ್ನು ಪ್ರತಿನಿಧಿಸುವುದಿಲ್ಲ ಎಂದು ಮಾಲ್ದೀವ್ಸ್ ಸರ್ಕಾರ ಹೇಳಿತ್ತು.

ಮುಯಿಜು ನೇತೃತ್ವದ ಸರ್ಕಾರದ ಉಪ ಸಚಿವರು ಆಡಿದ್ದ ಮಾತುಗಳನ್ನು ಮಾಲ್ದೀವ್ಸ್‌ನ ವಿರೋಧ ಪಕ್ಷದ ನಾಯಕರು ಕೂಡ ಖಂಡಿಸಿದ್ದರು. ಮಾಲ್ದೀವ್ಸ್‌ನ ಮಾಜಿ ಅಧ್ಯಕ್ಷರಾದ ಮೊಹಮ್ಮದ್ ನಷೀದ್ ಮತ್ತು ಇಬ್ರಾಹಿಂ ಮೊಹಮ್ಮದ್ ಸಾಲಿಹ್ ಅವರು ಈ ಮಾತುಗಳನ್ನು ಖಂಡಿಸಿದ್ದರು. ಮುಯಿಜು ಅವರು ಕೆಲವು ತಿಂಗಳುಗಳ ಹಿಂದಷ್ಟೇ ಅಧಿಕಾರ ಹಿಡಿದಿದ್ದಾರೆ, ಅವರು ಅಧಿಕಾರಕ್ಕೆ ಬರುವ ಮೊದಲೂ ಭಾರತ ವಿರೋಧಿ ನಿಲುವನ್ನು ಪ್ರದರ್ಶಿಸಿದ್ದರು.

ಭಾರತೀಯ ಸೇನೆಯು ಮಾಲ್ದೀವ್ಸ್‌ನಿಂದ ಹೊರನಡೆಯಬೇಕು ಎಂದು ಮುಯಿಜು ಅವರು ಈಚೆಗೆ ಹೇಳಿದ್ದರು. ಭಾರತದ ಜೊತೆಗಿನ ದ್ವಿಪಕ್ಷೀಯ

> ಮಾಲ್ದೀವ್ಸ್ ಸರ್ಕಾರದ ಉಪ ಮಂತ್ರಿಗಳು ಪ್ರಮುಖ ಪಾಲುದಾರ ಹಾಗೂ ಮಾಲ್ದೀವ್ಸ್‌ನ ಭದ್ರತೆಯಲ್ಲಿ ದೊಡ್ಡ ಪಾತ್ರ ವಹಿಸಿರುವ ರಾಷ್ಟ್ರವೊಂದರ ನಾಯಕನ ಬಗ್ಗೆ ಅಸಹ್ಯಕರ ಮಾತುಗಳನ್ನು ಆಡಿದ್ದಾರೆ. ಸರ್ಕಾರವು ಈ ಮಾತುಗಳಿಂದ ಅಂತರ ಕಾಯ್ದುಕೊಳ್ಳಬೇಕು. ಈ ಮಾತುಗಳು ಸರ್ಕಾರದ ನೀತಿಯನ್ನು ಪ್ರತಿನಿಧಿಸುವುದಿಲ್ಲ ಎಂಬ ಭರವಸೆಯನ್ನು ಭಾರತಕ್ಕೆ ನೀಡಬೇಕು
>
> **ಮೊಹಮ್ಮದ್ ನಷೀದ್,** ಮಾಲ್ದೀವ್ಸ್‌ನ ಮಾಜಿ ಅಧ್ಯಕ್ಷ

> ಮಾಲ್ದೀವ್ಸ್‌ನ ಪ್ರಮುಖ ವ್ಯಕ್ತಿಗಳು ಭಾರತದ ಬಗ್ಗೆ ಜನಾಂಗೀಯ ತಾರತಮ್ಯದ ಹೇಳಿಕೆಗಳನ್ನು ನೀಡುತ್ತಿರುವುದು ಗೊತ್ತಾಯಿತು. ತಮ್ಮ ದೇಶಕ್ಕೆ ಅತಿಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಕಳುಹಿಸುವ ದೇಶದ ಅವರು ಹೀಗೆ ಹೇಳುತ್ತಿರುವುದು ಆಶ್ಚರ್ಯಕರ. ನಾನು ಹಲವು ಬಾರಿ ಮಾಲ್ದೀವ್ಸ್‌ಗೆ ಭೇಟಿ ನೀಡಿದ್ದೇನೆ. ಆದರೆ ಘನತೆ ಮುಖ್ಯವಾಗುತ್ತದೆ. ನಮ್ಮ ದೇಶದ ದ್ವೀಪಗಳನ್ನು ಕಾಣುವ ತೀರ್ಮಾನ ಕೈಗೊಳ್ಳೋಣ. ನಮ್ಮ ಪ್ರವಾಸೋದ್ಯಮಕ್ಕೆ ಬೆಂಬಲ ನೀಡೋಣ
>
> **ಅಕ್ಷಯ್ ಕುಮಾರ್,** ಬಾಲಿವುಡ್ ನಟ

ಒಪ್ಪಂದವೊಂದನ್ನು ರದ್ದು ಮಾಡಲು ಮುಂದಾಗಿದ್ದರು. ಈ ನಡೆಗಳು, 'ಭಾರತ ಮೊದಲು' ಎಂಬ ನೀತಿಯನ್ನು ಕೈಬಿಟ್ಟಿದ್ದು, ಮಾಲ್ದೀವ್ಸ್ ದೇಶವನ್ನು ಚೀನಾಕ್ಕೆ ಹೆಚ್ಚು ಹತ್ತಿರವಾಗಿಸಿದ್ದು ಅವರ ಉದ್ದೇಶದ ಬಗ್ಗೆ ಊಹಾಪೋಹಗಳಿಗೆ ದಾರಿ ಮಾಡಿಕೊಟ್ಟಿದ್ದವು.

ಪ್ರಧಾನಿ ಮೋದಿ ಅವರು ಲಕ್ಷದ್ವೀಪಕ್ಕೆ ಈಚೆಗೆ ನೀಡಿದ್ದ ಭೇಟಿಯ ನಂತರ, ಅದಕ್ಕೆ ಸಂಬಂಧಿಸಿದ ಚಿತ್ರಗಳು ಹಾಗೂ ದೃಶ್ಯಗಳಿಗೆ ಈ ಉಪ ಸಚಿವರು ಎಕ್ಸ್ ವೇದಿಕೆಯ ಮೂಲಕ ಪ್ರತಿಕ್ರಿಯೆ ನೀಡಿದ್ದರು. ಯುವ ಸಬಲೀಕರಣ ಖಾತೆಯ ಉಪ ಸಚಿವೆ ಮರಿಯಂ ಶಿವ್ನ ಅವರು, ಮೋದಿ ಅವರನ್ನು 'ವಿದೂಷಕ' ಎಂದು, 'ಇಸ್ರೇಲ್‌ನ ಕೈಗೊಂಬೆ' ಎಂದು ಕರೆದಿದ್ದರು. ಎಕ್ಸ್ ಮೂಲಕ ಹಂಚಿಕೊಂಡಿದ್ದ ಈ ಮಾತುಗಳಿಗೆ ವಿರೋಧ ವ್ಯಕ್ತವಾದ ನಂತರದಲ್ಲಿ ಮರಿಯಂ ಅವರು ತಮ್ಮ ಪೋಸ್ಟ್‌ಅನ್ನು ಅಳಿಸಿಹಾಕಿದ್ದರು.

ಮೋದಿ ಅವರು ತಮ್ಮ ಲಕ್ಷದ್ವೀಪ ಭೇಟಿ ಬಗ್ಗೆ ಹಂಚಿಕೊಂಡ ಚಿತ್ರಗಳಿಗೆ ಪ್ರತಿಕ್ರಿಯಿಸಿದ್ದ ಕೆಲವರು, ಭಾರತದ ಈ ಸಮುದ್ರ ತೀರವು ಮಾಲ್ದೀವ್ಸ್‌ಗೆ ಸ್ಪರ್ಧೆ ನೀಡಬಹುದು ಎಂದು ಹೇಳಿದ್ದರು. 'ಭಾರತದ ಪ್ರವಾಸೋದ್ಯಮಕ್ಕೆ ನಾನು ಯಶಸ್ಸು ಕೋರುತ್ತೇನೆ. ಆದರೆ ಮಾಲ್ದೀವ್ಸ್‌ಅನ್ನು ಗುರಿಯಾಗಿಸಿಕೊಳ್ಳುವುದು ರಾಜತಾಂತ್ರಿಕವಾಗಿ ಸರಿಯಲ್ಲ... ನಮ್ಮಲ್ಲಿನ ರೆಸಾರ್ಟ್ ಮೂಲ ಸೌಕರ್ಯವು ಭಾರತದಲ್ಲಿನ ಅಷ್ಟೂ ದ್ವೀಪಗಳಿಗಿಂತ ಹೆಚ್ಚಿದೆ' ಎಂದು ಉಪ ಸಚಿವ ಅಬ್ದುಲ್ಲಾ ಎಂ. ಮಾಜಿದ್ ಎಕ್ಸ್‌ನಲ್ಲಿ ಬರೆದಿದ್ದರು.

'ನಮ್ಮ ಜೊತೆ ಸ್ಪರ್ಧಿಸುವುದು ಭ್ರಮೆ. ನಾವು ಕೊಡುವಂತಹ ಸೇವೆಯನ್ನು ಅವರು ಹೇಗೆ ನೀಡುತ್ತಾರೆ. ಅವರು ಅಷ್ಟು ಸ್ವಚ್ಛವಾಗಿ ಇರುವುದು ಹೇಗೆ? ಕೊಠಡಿಯಲ್ಲಿ ಯಾವಾಗಲೂ ಇರುವ ದುರ್ಗಂಧವು ದೊಡ್ಡ ಹಿನ್ನಡೆಯಂತೆ ಆಗಲಿದೆ' ಎಂದು ರಾಜಕಾರಣಿ ಜಾಹಿದ್ ರಮೀಜ್ ಹೇಳಿದ್ದರು.

9ನೇ ಪುಟ ನೋಡಿ

'ಇಂಡಿಯಾ' ಸೀಟು ಹಂಚಿಕೆ ಮಾತುಕತೆ ಆರಂಭಿಸಿದ ಕಾಂಗ್ರೆಸ್

ನವದೆಹಲಿ (ಪಿಟಿಐ): ಪಕ್ಷದೊಳಗೆ ವ್ಯಾಪಕ ಚರ್ಚೆ ನಡೆಸಿದ ನಡೆದ ಬಳಿಕ ಕಾಂಗ್ರೆಸ್, 'ಇಂಡಿಯಾ' ಮೈತ್ರಿಕೂಟದ ಕೆಲ ಪಕ್ಷಗಳ ಜೊತೆ ಕೆಲವು ರಾಜ್ಯಗಳಲ್ಲಿ ಲೋಕಸಭೆ ಚುನಾವಣೆಗೆ ಸೀಟು ಹಂಚಿಕೆ ಕುರಿತ ಮಾತುಕತೆಗೆ ಚಾಲನೆ ನೀಡಿದೆ. 9

ಹುಲಿ ಸಂರಕ್ಷಿತ ಪ್ರದೇಶ, ಆನೆ ಕಾರಿಡಾರ್‌ನಲ್ಲಿ ಲೇಔಟ್‌ಗೆ ಸಿದ್ಧತೆ

ಬಫರ್ ವಲಯಕ್ಕೆ ರಿಯಲ್ ಎಸ್ಟೇಟ್

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ಬೆಂಗಳೂರಿನಂತಹ ದೊಡ್ಡ ನಗರಗಳಲ್ಲಿ ಲೇಔಟ್, ವಿಲ್ಲಾಗಳನ್ನು ನಿರ್ಮಿಸುತ್ತಿದ್ದ ರಿಯಲ್ ಎಸ್ಟೇಟ್ ಕಂಪನಿಗಳು ಈಗ ಕಾಫಿನಾಡಿನ ಪರಿಸರ ಸೂಕ್ಷ್ಮಪ್ರದೇಶಗಳಿಗೆ ಲಗ್ಗೆ ಇಟ್ಟಿವೆ. 'ಜೈನ್ ಕಾಫಿ ಬೈ ದಿ ಸ್ಟ್ರೀಮ್' ಮತ್ತು 'ದಿ ರೈನ್‌ಬೊ' ಎಂಬ ಹೆಸರುಗಳಲ್ಲಿ ಹುಲಿ ಸಂರಕ್ಷಿತ ಪ್ರದೇಶ ಮತ್ತು ಆನೆ ಕಾರಿಡಾರ್‌ನ ಬಫರ್ ವಲಯದಲ್ಲೇ ಲೇಔಟ್ ನಿರ್ಮಿಸಲು ಮುಂದಾಗಿವೆ.

ಚಿಕ್ಕಮಗಳೂರು ತಾಲ್ಲೂಕಿನ ಜಾಗರ ಹೋಬಳಿಯ ಗೋಣಕಲ್ ಮತ್ತು ಮೇಲಿನಹುಲುವತ್ತಿ ಸರ್ವೆ ನಂಬರ್‌ನಲ್ಲಿ ಇರುವ 242 ಎಕರೆ ಜಾಗವನ್ನು ತುಂಡು ಭೂಮಿಯಾಗಿ ವಿಭಜಿಸಿ ಲೇಔಟ್ ನಿರ್ಮಿಸಲು ಆರು ಕಂಪನಿಗಳು ಮುಂದಾಗಿವೆ. ಪಶ್ಚಿಮ ಘಟ್ಟದ ಗುಡ್ಡಗಳ ನಡುವೆ, ನದಿ, ಝರಿಗಳಿಗೆ ಹೊಂದಿಕೊಂಡಂತೆ ನಿವೇಶನಗಳು ಲಭ್ಯ ಇರುವ ಬಗ್ಗೆ ಬ್ರೋಚರ್‌ಗಳನ್ನು ಮುದ್ರಿಸಲಾಗಿದೆ. ಆನ್‌ಲೈನ್‌ನಲ್ಲಿ ಲೇಔಟ್ ನಕ್ಷೆ ಸಹಿತ ಪ್ರಕಟಣೆಯನ್ನೂ ಹೊರಡಿಸಿವೆ.


ಲೇಔಟ್ ಬಗ್ಗೆ ಕಂಪನಿಗಳು ತಮ್ಮ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ನಕ್ಷೆ

ಪ್ರಜಾವಾಣಿ ವಿಶೇಷ

ಅರಣ್ಯ ಇಲಾಖೆ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಸೇರಿ ಸಂಬಂಧಿಸಿದ ಯಾವುದೇ ಇಲಾಖೆಯಿಂದ ಅನುಮತಿ ಪಡೆದಿಲ್ಲ. ಈ ಬಗ್ಗೆ ಎಲ್ಲರಿಂದ ವರದಿಯನ್ನು ಜಿಲ್ಲಾಡಳಿತ ಪಡೆದುಕೊಂಡಿದೆ. ಆರು ಕಂಪನಿಗಳ ಎಲ್ಲಾ ಜಾಹೀರಾತುಗಳು ಮತ್ತು ಲೇಔಟ್ ನಿರ್ಮಿಸಲು ಹೊರಟಿರುವ ಜಾಗವನ್ನು ಕೂಲಂಕಶವಾಗಿ ಪರಿಶೀಲಿಸಿ ನೋಟಿಸ್ ಜಾರಿ ಮಾಡಿದೆ.

4ನೇ ಪುಟ ನೋಡಿ

ಮಾಲಿನ್ಯ ನಿಯಂತ್ರಣ ಮಂಡಳಿ ಆಕ್ಷೇಪ

'ಕ್ಲಬ್ ಹೌಸ್, ಹಾಲಿಡೇ ಹೋಮ್ಸ್ ಹಾಗೂ ಲೇಔಟ್‌ಗಳ ನಿರ್ಮಾಣದಿಂದ ಜಲ ಮಾಲಿನ್ಯ ಮತ್ತು ವಾಯು ಮಾಲಿನ್ಯ ಉಂಟಾಗುವ ಅಪಾಯ ಇದೆ. ಆದ್ದರಿಂದ ಅನುಮತಿ ನೀಡಬಾರದು' ಎಂದು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಚೇರಿಯ ಅಧಿಕಾರಿಗಳು ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಿದ್ದಾರೆ.

ಅನಿಯಂತ್ರಿತ ಅಭಿವೃದ್ಧಿಯಿಂದ ನೀರಿನ ಸೆಲೆಗಳು ಬತ್ತಿ ಹೋಗುವ ಸಂಭವ ಇದೆ. ಕಾಡಾನೆ ಮತ್ತು ಹುಲಿ ಕಾರಿಡಾರ್‌ಗೆ ಸಹ ಧಕ್ಕೆ ಉಂಟಾಗಲಿದ್ದು, ಮಾನವ ಮತ್ತು ವನ್ಯಜೀವಿ ಸಂಘರ್ಷ ಹೆಚ್ಚಾಗಲಿದೆ ಎಂದು ಅರಣ್ಯ ಇಲಾಖೆ ಅಭಿಪ್ರಾಯಪಟ್ಟಿದೆ.ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಮರಗಳನ್ನು ಕಡಿದು ರಸ್ತೆ ನಿರ್ಮಿಸುವುದರಿಂದ ಮಾಲಿನ್ಯ ಮತ್ತು ಅಸಮತೋಲನ ಉಂಟಾಗಲಿದೆ. ಮಣ್ಣು ಹಾಗೂ ಗುಡ್ಡ ಕುಸಿತ ಉಂಟಾಗುವ ಸಂಭವ ಇದೆ ಎಂದು ಹೇಳಿದೆ.

'ಪಿ.ಜಿ ವೈದ್ಯಕೀಯ ಪ್ರವೇಶಕ್ಕೆ ಆನ್‌ಲೈನ್ ಕೌನ್ಸೆಲಿಂಗ್ ಕಡ್ಡಾಯ'

ನವದೆಹಲಿ (ಪಿಟಿಐ): ಸ್ನಾತಕೋತ್ತರ ವೈದ್ಯಕೀಯ ಪದವಿ ಕೋರ್ಸ್ ಪ್ರವೇಶವು ಈಗ ಆನ್‌ಲೈನ್ ಕೌನ್ಸೆಲಿಂಗ್ ಮೂಲಕ ಮಾತ್ರವೇ ನಡೆಯಬೇಕು. ಯಾವುದೇ ಕಾಲೇಜುಗಳು ನೇರ ದಾಖಲಾತಿ ಮಾಡಿಕೊಳ್ಳುವಂತಿಲ್ಲ. ಅಲ್ಲದೆ, ಪ್ರತಿ ಕೋರ್ಸ್‌ನ ಶುಲ್ಕವನ್ನು ಮುಂಚಿತವಾಗಿಯೇ ಪ್ರಕಟಿಸಬೇಕು ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಹೇಳಿದೆ.

ವೈದ್ಯಕೀಯ ಶಿಕ್ಷಣ ನಿಯಂತ್ರಕ ಸಂಸ್ಥೆ ಎನ್‌ಎಂಸಿಯು ಇತ್ತೀಚೆಗೆ ಹೊರಡಿಸಿರುವ ಅಧಿಸೂಚನೆಯಲ್ಲಿನ 'ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ನಿಯಮಾವಳಿಗಳು–2023' ಪ್ರಕಾರ, ಆಯಾ ಪರೀಕ್ಷೆಗಳ ಮೆರಿಟ್ ಪಟ್ಟಿಯ ಆಧಾರದ ಮೇಲೆ, ಎಲ್ಲ ಪಿಜಿ ಸೀಟುಗಳಿಗೆ ಎಲ್ಲ ಸುತ್ತಿನ ಸಾಮಾನ್ಯ ಕೌನ್ಸೆಲಿಂಗ್ ಅನ್ನು ಆನ್‌ಲೈನ್ ವಿಧಾನದಲ್ಲಿ ರಾಜ್ಯ ಅಥವಾ ಕೇಂದ್ರೀಯ ಕೌನ್ಸೆಲಿಂಗ್ ಪ್ರಾಧಿಕಾರಗಳು ನಡೆಸಲಿವೆ.

4ನೇ ಪುಟ ನೋಡಿ

ರಮೇಶ ಜಾರಕಿಹೊಳಿ ಸೇರಿ ಮೂವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಕಾರ ಬ್ಯಾಂಕ್‌ಗಳಲ್ಲಿ ಹಂತ ಹಂತವಾಗಿ ₹232.88 ಕೋಟಿ ಸಾಲ ಪಡೆದು, ಮರುಪಾವತಿಸದೆ ವಂಚಿಸಿದ ಆರೋಪದ ಅಡಿ ಗೋಕಾಕ್ ಶಾಸಕ ರಮೇಶ ಎಲ್. ಜಾರಕಿಹೊಳಿ ಹಾಗೂ ಇಬ್ಬರು ಸಕ್ಕರೆ ಕಾರ್ಖಾನೆ ಕಂಪನಿಯ ನಿರ್ದೇಶಕರ ವಿರುದ್ಧ ಇಲ್ಲಿನ ವಿ.ವಿ. ಪುರಂ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.



ನಗರದ ಚಾಮರಾಜಪೇಟೆಯ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕ ರಾಜಣ್ಣ ಅವರು ನೀಡಿದ ದೂರು ಆಧರಿಸಿ, ಬೆಳಗಾವಿ ಜಿಲ್ಲೆಯ ಗೋಕಾಕ್‌ನ ಸೌಭಾಗ್ಯ ಲಕ್ಷ್ಮಿ ಶುಗರ್ಸ್ ಕಂಪನಿ ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕರೂ ಆಗಿರುವ ರಮೇಶ ಎಲ್. ಜಾರಕಿಹೊಳಿ, ಕಂಪನಿ ನಿರ್ದೇಶಕರಾದ ವಸಂತ್ ವಿ. ಪಾಟೀಲ ಹಾಗೂ ಶಂಕರ್ ವಿ. ಪಾವಡೆ ವಿರುದ್ಧ ಪ್ರಕರಣ ದಾಖಲಾಗಿದೆ.

'ಸಕ್ಕರೆ ಕಾರ್ಖಾನೆ ಸ್ಥಾಪನೆ, ವಿಸ್ತರಣೆ ಹಾಗೂ ನಿರ್ವಹಣೆಗಾಗಿ ಅವಧಿ ಸಾಲ, ದುಡಿಯುವ ಬಂಡವಾಳ ಸಾಲ ಪಡೆದುಕೊಂಡಿದ್ದರು. ಬ್ಯಾಂಕ್ ವಿಧಿಸಿದ್ದ ಷರತ್ತುಗಳಿಗೆ ಒಪ್ಪಿ ಸಾಲ ಪಡೆದುಕೊಂಡಿದ್ದ ಮೂವರು ಸಾಲ ಮರುಪಾವತಿಸಿಲ್ಲ. ಮೂವರ ವಿರುದ್ಧ ವಂಚನೆ, ಮೋಸ, ನಂಬಿಕೆ ದ್ರೋಹ ಆರೋಪದ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.


4ನೇ ಪುಟ ನೋಡಿ

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಆದಾಯಕ್ಕಿಂತ 3 ಪಟ್ಟು ಹೆಚ್ಚು ವೆಚ್ಚ

• ಆರ್. ಮಂಜುನಾಥ್

ಬೆಂಗಳೂರು: ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಂಸ್ಥೆಯ ನಿರೀಕ್ಷಿತ ಆದಾಯಕ್ಕಿಂತ ಮೂರು ಪಟ್ಟು ಹೆಚ್ಚಿನ ಮೊತ್ತದ ಕ್ರಿಯಾಯೋಜನೆಗೆ ಮಂಡಳಿ ಸಭೆ ಅನುಮೋದನೆ ನೀಡಿದೆ.

ಮುಂದಿನ ಮೂರು ವರ್ಷಗಳಲ್ಲಿ ₹600 ಕೋಟಿ ಮಾತ್ರ ನಿರೀಕ್ಷಿತ ಆದಾಯವಾಗಿದ್ದರೂ, ₹1,546.44 ಕೋಟಿಯ ಕ್ರಿಯಾಯೋಜನೆಗೆ 243ನೇ ಮಂಡಳಿ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. 2023ರ ಆರ್ಥಿಕ ವರ್ಷದಲ್ಲಿ ಉಳಿಯಲಿರುವ ₹1,050 ಕೋಟಿಯನ್ನು ಕೂಡಲೇ ವೆಚ್ಚ ಮಾಡುವ ಯೋಜನೆ ಇದಾಗಿದ್ದು, ಇದರಿಂದ ಮಂಡಳಿ ದಿವಾಳಿಯಾಗಲಿದೆ ಎಂಬ ಆರೋಪ ವ್ಯಕ್ತವಾಗಿದೆ.

'ಒಂದು ಸಾವಿರ ಕೋಟಿಯನ್ನು ಈಗಲೇ ತಮ್ಮಿಷ್ಟದಂತೆ ವೆಚ್ಚ ಮಾಡಿಕೊಳ್ಳಲು ಇಂತಹ ನಿರ್ಣಯ ಕೈಗೊಳ್ಳಲಾಗಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಮಂಡಳಿ ಸದಸ್ಯರೊಬ್ಬರು ದೂರಿದರು.

ಬಿಬಿಎಂಪಿಯ ₹53 ಕೋಟಿ ದುಂದುವೆಚ್ಚ!

ಕೇಂದ್ರ ವಾಯುಮಾಲಿನ್ಯ ನಿಯಂತ್ರಣ ಮಂಡಳಿಯ 'ಪ್ರಾಣ' ಪೋರ್ಟಲ್‌ನಲ್ಲಿ ಆಯ್ಕೆ ಮಾಡಲಾಗಿದ್ದ 64 ಚಟುವಟಿಕೆಗಳ 'ವಾಯು ಯೋಜನೆ'ಯ ಕ್ರಿಯಾಯೋಜನೆಯನ್ನು ಬದಲಿಸಿ, ಬಿಬಿಎಂಪಿ ನೀಡಿರುವ ₹53 ಕೋಟಿ ವೆಚ್ಚ ಮಾಡಲು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿರ್ಣಯಿಸಿದೆ.

'ವಾಯು ಮಾಲಿನ್ಯ ನಿಗಾವಹಿಸುವುದು, ರಸ್ತೆ ದೂಳಿನ ಅಧ್ಯಯನ, ಪ್ರಯೋಗಾಲಯಗಳ ಉನ್ನತೀಕರಣ, ವಾಹನಗಳ ವಾಯುಮಾಲಿನ್ಯದ ನಿಗಾವಹಿಸುವುದು ಸೇರಿದಂತೆ ಸರ್ವೆ, ಅಧ್ಯಯನ, ವರದಿ ಸಿದ್ಧಪಡಿಸಲೆಂದೇ 15ನೇ ಹಣಕಾಸು ಯೋಜನೆಯಲ್ಲಿ ಬಿಬಿಎಂಪಿಗೆ ಮಂಜೂರಾಗಿರುವ ಹಣವನ್ನು ವೆಚ್ಚ ಮಾಡಲಾಗುತ್ತಿದೆ. ಇದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ' ಎಂದು ಮಂಡಳಿ ಸದಸ್ಯರು ದೂರಿದ್ದಾರೆ.

8ನೇ ಪುಟ ನೋಡಿ

ನಂಬಿ ನಾರಾಯಣನ್, ಅನಂತನಾಗ್‌ಗೆ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಯಲಹಂಕ: ರೇವಾ ವಿಶ್ವವಿದ್ಯಾಲಯದ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ 2024ನೇ ಸಾಲಿನ 'ರೇವಾ ಜೀವಮಾನ ಸಾಧನೆ' ಪ್ರಶಸ್ತಿಯನ್ನು ಇಸ್ರೊ ವಿಜ್ಞಾನಿ ನಂಬಿ ನಾರಾಯಣನ್ ಹಾಗೂ ನಟ ಅನಂತನಾಗ್ ಅವರಿಗೆ ನೀಡಿ ಗೌರವಿಸಲಾಯಿತು.

ನಿರೂಪಕಿ ಅನುಶ್ರೀ ಅವರಿಗೆ 'ರೇವಾ ಎಕ್ಸಲೆನ್ಸ್' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ನಂಬಿ ನಾರಾಯಣನ್, 'ಇಸ್ರೊ ಇಂದು ಜಾಗತಿಕ ಮಟ್ಟದಲ್ಲಿ ಇಷ್ಟೊಂದು ಸಾಧನೆ ಮಾಡಲು ವಿಕ್ರಮ್ ಸಾರಾಭಾಯಿ, ಡಾ.ಎಪಿಜೆ ಅಬ್ದುಲ್ ಕಲಾಂ, ಸತೀಶ್ ಧವನ್, ಯು.ಆರ್. ರಾವ್ ಕೊಡುಗೆ ಅಪಾರವಾಗಿದೆ' ಎಂದರು.



ಕಾರ್ಯಕ್ರಮದಲ್ಲಿ ಅನಂತನಾಗ್ ಅವರಿಗೆ 'ರೇವಾ ಜೀವಮಾನ ಸಾಧನೆ' ಪ್ರಶಸ್ತಿ ಪ್ರದಾನ ಮಾಡಲಾಯಿತು. ನಂಬಿ ನಾರಾಯಣನ್, ಅನುಶ್ರೀ, ಪಿ. ಶ್ಯಾಮರಾಜು, ಎಂ. ಧನಂಜಯ, ಸಹಕುಲಪತಿ ಉಮೇಶ್ ಎಸ್. ರಾಜು ಭಾಗವಹಿಸಿದ್ದರು

ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಪಿ. ಶ್ಯಾಮರಾಜು ಮಾತನಾಡಿ, 'ವಿ.ವಿ.ಯು ಮೌಲ್ಯಯುತ ಶಿಕ್ಷಣದ ಜೊತೆಗೆ ನಾಯಕತ್ವದ ಗುಣಗಳನ್ನು ಬೆಳೆಸಲು ಶ್ರಮಿಸುತ್ತಿದೆ' ಎಂದು ಹೇಳಿದರು.

ರೇವಾ ವಿಶ್ವವಿದ್ಯಾಲಯದ ಕುಲಪತಿ ಎಂ. ಧನಂಜಯ, ಸಹಕುಲಪತಿ ಉಮೇಶ್ ಎಸ್. ರಾಜು, ಕುಲಸಚಿವ ಎನ್. ರಮೇಶ್ ಪಾಲ್ಗೊಂಡಿದ್ದರು.

ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಕಾರಿಡಾರ್–2

31 ಮೀ. ಉದ್ದದ ಯು–ಗರ್ಡರ್ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಕಾರಿಡಾರ್-2ರಲ್ಲಿ ಅಳವಡಿಸಲು 31 ಮೀಟರ್ ಉದ್ದದ ಯು-ಗರ್ಡರ್ ಸಿದ್ಧಗೊಂಡಿದೆ. ಭಾರತದಲ್ಲಿಯೇ ಅತಿ ಉದ್ದದ ಗರ್ಡರ್ ಇದಾಗಿದೆ.

ದೇವನಹಳ್ಳಿಯಲ್ಲಿರುವ ತಯಾರಿಕಾ ಯಾರ್ಡ್‌ನಲ್ಲಿ (ಕಾಸ್ಟಿಂಗ್ ಯಾರ್ಡ್) ಇದನ್ನು ತಯಾರಿಸಲಾಗಿದೆ.

ದೇಶದ ಮೆಟ್ರೊ ಮಾರ್ಗಗಳಲ್ಲಿ 28 ಮೀಟರ್ ಉದ್ದದ 'ಯು' ಗರ್ಡರ್ (ಯು ಆಕಾರದ ಸಿಮೆಂಟ್–ಕಬ್ಬಿಣದ ತೊಲೆ) ಅಳವಡಿಸಿರುವುದೇ ಇಲ್ಲಿವರೆಗಿನ ಉದ್ದದ ಯು ಗರ್ಡರ್ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಕಾರಿಡಾರ್-2 (ಮಲ್ಲಿಗೆ ಮಾರ್ಗ) ಕಾಮಗಾರಿ ಭರದಿಂದ ಸಾಗುತ್ತಿದ್ದು, ಈ ಮಾರ್ಗದಲ್ಲಿ ಯಶವಂತಪುರ–ಹೆಬ್ಬಾಳ ನಡುವಿನ 8 ಕಿ.ಮೀ.ನಲ್ಲಿ 450 ಯು-ಗರ್ಡರ್ ಅಳವಡಿಕೆಯಾಗಲಿದೆ ಎಂದು ಮಾಹಿತಿ ನೀಡಿದ್ದಾರೆ.

ಪ್ರತಿ ಗರ್ಡರ್ ತಯಾರಿಕೆಗೆ ಎಂ60 ಗುಣಮಟ್ಟದ 69.5 ಕ್ಯೂಬಿಕ್ ಮೀಟರ್ ಕಾಂಕ್ರೀಟ್ ಬೇಕಾಗುತ್ತದೆ. ಒಂದು ಗರ್ಡರ್ 178 ಟನ್ ಭಾರವಿರುತ್ತದೆ. ಕಾಸ್ಟಿಂಗ್ ಯಾರ್ಡ್‌ನಲ್ಲಿ ತಯಾರಿಸಿ ಬಳಿಕ ತಂದು ಅಳವಡಿಸುವುದರಿಂದ ಕಾಮಗಾರಿಗೆ ತಗುಲುವ ಸಮಯ ಉಳಿತಾಯ ಆಗುತ್ತದೆ. ಇದನ್ನು ಆಸ್ ಸಿಸ್ಟಮ್ ಕಂಪನಿಯು ಬೆಂಗಳೂರು ಉಪನಗರ ರೈಲು ಯೋಜನೆಗಾಗಿ ವಿನ್ಯಾಸಗೊಳಿಸಿದ್ದು, ಚೆನ್ನೈನ ಐಐಟಿ ಮತ್ತು ಜನರಲ್ ಕನ್ಸಲ್ಟೆಂಟ್ ಕಂಪನಿಗಳು ಕೂಡ ಇದರಲ್ಲಿ ಸಕ್ರಿಯ ಪಾತ್ರ ವಹಿಸಿವೆ. ಗುಣಮಟ್ಟವನ್ನು ಖಾತ್ರಿಪಡಿಸಿವೆ ಎಂದು ವಿವರಿಸಿದ್ದಾರೆ.

ಸರ್ಕಾರಿ ಸ್ವಾಮ್ಯದ ಕೆ-ರೈಡ್ ಇದರ ಉಸ್ತುವಾರಿ ಮತ್ತು ಗುಣಮಟ್ಟ ನಿಯಂತ್ರಣಗಳನ್ನು ನೋಡಿಕೊಂಡಿದೆ. ಗರ್ಡರ್ ಅಳವಡಿಸುವುದರಿಂದ ನೇರವಾಗಿ ಹಳಿಗಳನ್ನು ಅಳವಡಿಸಲು ಸಾಧ್ಯವಾಗಲಿದೆ ಎಂದು ಸಚಿವರು ಹೇಳಿದ್ದಾರೆ.


ಬೆಂಗಳೂರು ಉಪನಗರ ರೈಲು ಯೋಜನೆಯ ಕಾರಿಡಾರ್–2 ಮಾರ್ಗದಲ್ಲಿ ಅಳವಡಿಸಲು ಯು–ಗರ್ಡರ್ ಸಿದ್ಧಗೊಳಿಸಲಾಯಿತು

ಠಾಣೆ ಎದುರು ಕೆರೆಹಳ್ಳಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳುವಂತೆ ಆಗ್ರಹಿಸಿ, ಬಸವನಗುಡಿ ಪೊಲೀಸ್ ಠಾಣೆ ಎದುರು ರಾಷ್ಟ್ರ ರಕ್ಷಣಾ ಪಡೆ ಮುಖಂಡ ಪುನೀತ್ ಕೆರೆಹಳ್ಳಿ ಭಾನುವಾರ ರಾತ್ರಿ ಪ್ರತಿಭಟನೆ ನಡೆಸಿದರು.

ಪುನೀತ್ ಕೆರೆಹಳ್ಳಿ ಅವರು ದೂರು ನೀಡಲು ಠಾಣೆಗೆ ಬಂದಿದ್ದರು. ಇಲ್ಲಿ ದೂರು ಸ್ವೀಕರಿಸಲು ಸಾಧ್ಯವಿಲ್ಲ. ಸೈಬರ್ ಠಾಣೆಗೆ ತೆರಳುವಂತೆ ಪೊಲೀಸರು ಸೂಚಿಸಿದರು. ಇದರಿಂದ ಸಿಟ್ಟಿಗೆದ್ದ ಪುನೀತ್, ಠಾಣೆ ಎದುರು ಪ್ರತಿಭಟನೆ ನಡೆಸಿ ಆಕ್ರೋಶ ಹೊರಹಾಕಿದರು.

'ಹರಿಪ್ರಸಾದ್ ಅವರು 'ಎಕ್ಸ್' ಖಾತೆಯಲ್ಲಿ ನನ್ನ ಹೆಸರು ಹಾಕಿ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ' ಎಂದು ಪುನೀತ್ ದೂರಿದರು.

ಸರ್ ಎಂ.ವಿ ಪುತ್ಥಳಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಜ್ಜನ್‌ರಾವ್ ಸರ್ಕಲ್‌ನಲ್ಲಿದ್ದ ಸರ್ ಎಂ.ವಿಶ್ವೇಶ್ವರಯ್ಯ ಅವರ ಪುತ್ಥಳಿಯನ್ನು ಬಿಬಿಎಂಪಿ ತೆರವುಗೊಳಿಸಿದ್ದು, ವೇದಿಕೆಯನ್ನು ಧ್ವಂಸಗೊಳಿಸಿದೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ವಿ.ವಿ. ಪುರಂ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಶನ್ ಪದಾಧಿಕಾರಿಗಳು ಪೊಲೀಸ್ ಉಪ ಆಯುಕ್ತರಿಗೆ ದೂರು ನೀಡಿದ್ದಾರೆ.

ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಯ ಮಂಜೂರಾತಿ ಪಡೆದು 2006ರಲ್ಲಿ ಪುತ್ಥಳಿ ನಿರ್ಮಿಸಲಾಗಿತ್ತು. ರಾಜ್ಯಪಾಲರು ಅನಾವರಣಗೊಳಿಸಿದ್ದರು. ಅಂದಿನಿಂದ ಪ್ರತಿವರ್ಷ ಸೆ.15ಕ್ಕೆ ಎಂಜಿನಿಯರ್ ದಿನವನ್ನು ಇಲ್ಲಿ ಆಚರಿಸಲಾಗುತ್ತಿತ್ತು. ಶನಿವಾರ ಇದ್ದಕ್ಕಿದ್ದಂತೆ ತೆರವುಗೊಳಿಸಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಪುತ್ಥಳಿಯ ಹಿಂಭಾಗದಲ್ಲಿರುವ ಭಾರತ್ ಗ್ಯಾಸ್ ಏಜೆನ್ಸಿಯವರ ಅನುಕೂಲಕ್ಕಾಗಿ ಈ ರೀತಿ ಧ್ವಂಸಗೊಳಿಸಿದ್ದಾರೆ. ಇದರಿಂದ ಸಾರ್ವಜನಿಕರ ಭಾವನೆಗೆ ಧಕ್ಕೆಯಾಗಿದೆ. ಸಾರ್ವಜನಿಕ ಆಸ್ತಿ ಹಾನಿ ಮಾಡಿದ್ದಕ್ಕಾಗಿ ಹಾಗೂ ಭಾವನೆಗಳಿಗೆ ಧಕ್ಕೆ ತಂದಿದ್ದಕ್ಕಾಗಿ ಸಂಬಂಧಪಟ್ಟವರನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅಸೋಸಿಯೇಶನ್ ಅಧ್ಯಕ್ಷ ಎಸ್. ವೆಂಕಟೇಶ್ ದೂರಿನಲ್ಲಿ ಆಗ್ರಹಿಸಿದ್ದಾರೆ.

ಅಭಿವೃದ್ಧಿಗಾಗಿ ತೆರವು: ವಿ.ವಿ. ಪುರ ಫುಡ್‌ಸ್ಟ್ರೀಟ್ ಅಭಿವೃದ್ಧಿಪಡಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ಅವರ ಪುತ್ಥಳಿಯನ್ನು ಅಲ್ಲಿಂದ ತೆಗೆದು ಸಂರಕ್ಷಿಸಲಾಗಿದೆ. ಕಾಮಗಾರಿ ಪೂರ್ಣಗೊಂಡ ಬಳಿಕ ಮತ್ತೆ ಅಳವಡಿಸಲಾಗುವುದು ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಆದರೆ, ಬಿಬಿಎಂಪಿ ದಕ್ಷಿಣ ವಲಯ ಆಯುಕ್ತರಿಗೆ ಈ ಬಗ್ಗೆ ಮಾಹಿತಿ ಇಲ್ಲ. 'ಏನಾಗಿದೆ ಎಂದು ಪರಿಶೀಲಿಸುತ್ತೇನೆ' ಎಂದು ವಲಯ ಆಯುಕ್ತೆ ವಿನೋತ್ ಪ್ರಿಯಾ ಆರ್. ಪ್ರತಿಕ್ರಿಯಿಸಿದ್ದಾರೆ.



ಸಜ್ಜನ್‌ರಾವ್ ಸರ್ಕಲ್‌ನಲ್ಲಿ ಸರ್ ಎಂ.ವಿ. ಪ್ರತಿಮೆ ಇದ್ದ ಸ್ಥಳ ಧ್ವಂಸಗೊಂಡಿರುವುದು

ಸ್ಪಾ ಮೇಲೆ ದಾಳಿ 44 ಯುವತಿಯರ ರಕ್ಷಣೆ

ಬೆಂಗಳೂರು: ಮಹದೇವಪುರ ಪೊಲೀಸ್ ಠಾಣೆ ವ್ಯಾಪ್ತಿಯ ಓಲ್ಡ್ ಮದ್ರಾಸ್ ರಸ್ತೆಯಲ್ಲಿರುವ ನಿರ್ವಾಣ ಸ್ಪಾದ ಮೇಲೆ ನಗರ ಕೇಂದ್ರ ವಿಭಾಗದ ಪೊಲೀಸರು, ದಾಳಿ ನಡೆಸಿ, 44 ಮಹಿಳೆಯರನ್ನು ರಕ್ಷಿಸಿದ್ದಾರೆ.

ಸ್ಪಾದಲ್ಲಿ ಅಕ್ರಮ ಚಟುವಟಿಕೆ ನಡೆಸುತ್ತಿದ್ದ ಆರೋಪದ ಮೇರೆಗೆ ಆರೋಪಿ ಅನಿಲ್ ಎಂಬಾತನನ್ನು ಬಂಧಿಸಲಾಗಿದೆ. 34 ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ಹೇಳಿವೆ.

ಹೊರ ರಾಜ್ಯ ಹಾಗೂ ವಿದೇಶದ ಯುವತಿಯರನ್ನು ಕರೆಸಿ ದಂಧೆ ನಡೆಸಲಾಗುತ್ತಿತ್ತು ಎಂಬ ಆರೋಪದ ಮೇರೆಗೆ ದಾಳಿ ನಡೆಸಲಾಗಿದೆ. ಬಹುಮಹಡಿ ಕಟ್ಟಡದ 1 ಮತ್ತು 6ನೇ ಮಹಡಿಯಲ್ಲಿ ಸ್ಪಾ ನಡೆಯುತ್ತಿತ್ತು. ದಾಳಿ ವೇಳೆ ಅಕ್ರಮ ಚಟುವಟಿಕೆ ನಡೆಯುತ್ತಿರುವುದು ಪತ್ತೆಯಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಮಹದೇವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಿಸಿಪಿಯಿಂದ ತನಿಖೆ: ಸ್ಪಾ ಮೇಲೆ ದಾಳಿ ನಡೆಸಿದಾಗ, ಅದರ ಮಾಲೀಕನಿಗೆ ಮಹಿಳಾ ಎಸಿಪಿಯೊಬ್ಬರ ಪತಿಯ ಬೆಂಬಲ ಇರುವುದು ಗೊತ್ತಾಗಿತ್ತು. ಜತೆಗೆ ಕೆಲವು ಪೊಲೀಸರು ಸಹಕಾರ ನೀಡುತ್ತಿದ್ದಾರೆ ಎಂಬ ಬಗ್ಗೆ ನಗರ ಪೊಲೀಸ್ ಆಯುಕ್ತ ಬಿ. ದಯಾನಂದ್ ಅವರಿಗೂ ದೂರು ಬಂದಿತ್ತು. ಹೀಗಾಗಿ, ಪ್ರಕರಣವನ್ನು ಕೇಂದ್ರ ವಿಭಾಗದ ಸಿಎಆರ್ ಡಿಸಿಪಿ ನೇತೃತ್ವದಲ್ಲಿ ತನಿಖೆ ನಡೆಸಲಾಗುವುದು. ಸದ್ಯ ಮಾರತ್ತಹಳ್ಳಿ ಎಸಿಪಿ ನೇತೃತ್ವದಲ್ಲಿ ತನಿಖೆ ಮುಂದುವರಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಬ್ಬಿಣದ ರಾಡು ಹೊಕ್ಕಿ ಕಾರ್ಮಿಕ ಸಾವು

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿಯಲ್ಲಿ ಕಟ್ಟಡದ ಕಾಮಗಾರಿ ನಡೆಯುತ್ತಿದ್ದ ಸ್ಥಳದಲ್ಲಿ ಕಬ್ಬಿಣದ ಸರಳು ಕಾರ್ಮಿಕನ ತಲೆಯ ಮೇಲೆ ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ತ್ರಿಪುರದ ದೀಪಾಂಕಾರ ಚಾಸ (21) ಮೃತಪಟ್ಟ ಕಾರ್ಮಿಕ.

'ಕಾಮಗಾರಿ ನಡೆಯುತ್ತಿದ್ದ ವೇಳೆ 20 ಅಡಿ ಉದ್ದದ ಕಬ್ಬಿಣದ ರಾಡು 100 ಅಡಿ ಮೇಲಿಂದ ನೇರವಾಗಿ ಕಾರ್ಮಿಕನ ಮೇಲೆ ಬಿದ್ದು, ಅದು ತಲೆಗೆ ಹೊಕ್ಕಿದ ಪರಿಣಾಮ ರಕ್ತಸ್ರಾವಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಮೂಲಗಳು ಹೇಳಿವೆ.

'ಕೆಲವು ತಿಂಗಳ ಹಿಂದಷ್ಟೇ ಕೆಲಸ ಹುಡುಕಿಕೊಂಡು ದೀಪಾಂಕಾರ ನಗರಕ್ಕೆ ಬಂದಿದ್ದರು. ಎಲೆಕ್ಟ್ರಾನಿಕ್ ಸಿಟಿ ಹೊಸ ರಸ್ತೆಯಲ್ಲಿರುವ ಗಣೇಶ್ ದೇವಸ್ಥಾನದ ಬಳಿ ನೆಲೆಸಿದ್ದರು. ಇವರ ಚಿಕ್ಕಪ್ಪ ಅಭಿಮನ್ಯು ಜ.4ರಂದು ಸಹ ಅದೇ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದರು. ಆಗ, ಏಕಾಏಕಿ ಕಬ್ಬಿಣದ ರಾಡು ಮೇಲಿಂದ ಕೆಳಕ್ಕೆ ಬಿದ್ದಿದೆ' ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

'ಮೇಸ್ತ್ರಿ ಮೊಹಮ್ಮದ್ ಅತ್ತಾವುಲ್ಲಾ ಮತ್ತು ಇತರರ ವಿರುದ್ಧ ದೂರು ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು.

ಎಸ್‌ಪಿಗೆ ಬೆದರಿಕೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಸ್ ಅಧಿಕಾರಿ ಪ್ರಯಾಣಿಸುತ್ತಿದ್ದ ಕಾರಿಗೆ ಹಿಂದಿನಿಂದ ಡಿಕ್ಕಿ ಹೊಡೆದು ಬಳಿಕ ಅವಾಚ್ಯ ಶಬ್ದಗಳಿಂದ ನಿಂದಿಸಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ದ್ವಿಚಕ್ರ ವಾಹನ ಸವಾರನನ್ನು ಆರ್‌ಎಂಸಿ ಯಾರ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಬಾಣಾವಾರದ ಎಜಿಬಿ ಲೇಔಟ್ ನಿವಾಸಿ ಜಿ.ಅಭಿಷೇಕ್(22) ಬಂಧಿತ ಸವಾರ.

ಜನವರಿ 3ರಂದು ಬೆಳಿಗ್ಗೆ 10.15ರ ಸುಮಾರಿಗೆ ಗೊರಗುಂಟೆಪಾಳ್ಯ ಟ್ರಾಫಿಕ್ ಸಿಗ್ನಲ್ ಬಳಿ ಈ ಘಟನೆ ನಡೆದಿತ್ತು.

'ಬಿ.ಬಿ.ಎಂ.ಪಿ ಬೆಂಗಳೂರು ಮಹಾನಗರ ಕಾರ್ಯಪಡೆಯ ಎಸ್.ಪಿ ಆಗಿರುವ ಶೋಭಾರಾಣಿ ಅವರು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಆರೋಪಿ ಜಾಮೀನಿನ ಮೇಲೆ ಬಿಡುಗಡೆ ಆಗಿದ್ದಾನೆ' ಎಂದು ಪೊಲೀಸರು ತಿಳಿಸಿದರು.

'ಶೋಭಾರಾಣಿ ಅವರು ಸರ್ಕಾರಿ ಕಾರಿನಲ್ಲಿ ಅಂದು ಮನೆಯಿಂದ ಕಚೇರಿಗೆ ಹೊರಟಿದ್ದರು. ಗೊರಗುಂಟೆಪಾಳ್ಯದ ಟ್ರಾಫಿಕ್ ಸಿಗ್ನಲ್ ಬಳಿ ಹೋಗುವಾಗ ಹಿಂದಿನಿಂದ ವೇಗವಾಗಿ ಬಂದ ದ್ವಿಚಕ್ರ ವಾಹನ ಸವಾರ ಅಭಿಷೇಕ್ ಎಂಬಾತ ಎಸ್‌ಪಿ ಅವರ ಕಾರಿಗೆ ಡಿಕ್ಕಿ ಹೊಡೆದಿದ್ದಾನೆ. ಈ ವೇಳೆ ಕಾರು ನಿಲ್ಲಿಸಿದ ಚಾಲಕ, ಕೆಳಗೆ ಇಳಿದು ಪರಿಶೀಲಿಸುವಾಗ, ದ್ವಿಚಕ್ರ ವಾಹನ ಸವಾರ ಚಾಲಕನನ್ನು ನಿಂದಿಸಲು ಆರಂಭಿಸಿದ್ದ. ಇದನ್ನು ಗಮನಿಸಿದ ಶೋಭಾರಾಣಿ ಅವರು ದ್ವಿಚಕ್ರ ವಾಹನ ಸವಾರನಿಗೆ ಬುದ್ಧಿವಾದ ಹೇಳಲು ಮುಂದಾಗಿದ್ದಾರೆ. ಆಗ ಕೆರಳಿದ ಆರೋಪಿ, ಮಹಿಳಾ ಅಧಿಕಾರಿಯೊಂದಿಗೆ ಅನುಚಿತವಾಗಿ ವರ್ತಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ. ಕರ್ತವ್ಯಕ್ಕೆ ಹೋಗದಂತೆ ಅಡ್ಡಿಪಡಿಸಿದ್ದ. ಅಧಿಕಾರಿ ನೀಡಿದ ದೂರು ಆಧರಿಸಿ ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಶಿಕ್ಷಣ ಪುರವಣಿ ಓದಿರಿ...

ಕುಂದು ಕೊರತೆ

ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಅಹವಾಲುಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು: ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.


ಮಲ್ಲತ್ತಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯ ಸ್ಥಿತಿ

'ರಸ್ತೆ ಗುಂಡಿಗಳನ್ನು ಮುಚ್ಚಿ'

ರಾಜರಾಜೇಶ್ವರಿ ವಿಧಾನಸಭೆ ಕ್ಷೇತ್ರದ ಜ್ಞಾನಭಾರತಿ ವಾರ್ಡ್‌ನಿಂದ ಮಲ್ಲತ್ತಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಇದರಿಂದ ವಾಹನಗಳ ಸಂಚಾರಕ್ಕೆ ಅನನುಕೂಲವಾಗಿದೆ. ನಿತ್ಯ ಸಾವಿರಾರು ವಾಹನಗಳು ಸಂಚರಿಸುವ ಈ ರಸ್ತೆಯಲ್ಲಿ ಗುಂಡಿಗಳಿಂದಾಗಿ ಸುಗಮ ಸಂಚಾರಕ್ಕೂ ಸಮಸ್ಯೆಯಾಗಿದೆ. ಬಿಬಿಎಂಪಿ ಅಧಿಕಾರಿಗಳು, ಶಾಸಕರು ದುರಸ್ತಿಗೆ ಗಮನಹರಿಸಲಿ.

ಎಂ.ಲಿಂಗರಾಜು ಗೌಡ, ಸ್ಥಳೀಯ ನಿವಾಸಿ

'ಪಾದಚಾರಿ ಮಾರ್ಗ ನಿರ್ಮಿಸಿ'

ಗೊರಗುಂಟೆಪಾಳ್ಯ ಸಿಗ್ನಲ್‌ನಿಂದ ತುಮಕೂರು ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಪಾದಚಾರಿ ಮಾರ್ಗವೇ ಇಲ್ಲ. ಸಾರ್ವಜನಿಕರು ಮುಖ್ಯರಸ್ತೆಯಲ್ಲೇ ಸಂಚರಿಸಬೇಕಾಗಿದ್ದು, ವಾಹನದಟ್ಟಣೆ ಇರುವ ರಸ್ತೆಯಲ್ಲಿ ಜೀವಭಯದಲ್ಲಿ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ರಾತ್ರಿ ವೇಳೆ ಶರವೇಗದಲ್ಲಿ ಬರುವ ವಾಹನಗಳ ಜೊತೆಗೆ ರಸ್ತೆಯಲ್ಲಿ ಸಾಗಬೇಕು. ಸ್ಥಳೀಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಕೂಡಲೇ ಈ ಭಾಗದಲ್ಲಿ ಪಾದಚಾರಿ ಮಾರ್ಗವನ್ನು ನಿರ್ಮಿಸಬೇಕು.

ಶಿವಾಜಿ, ಸ್ಥಳೀಯ ನಿವಾಸಿ


ಗೊರಗುಂಟೆಪಾಳ್ಯದಿಂದ ತುಮಕೂರು ರಸ್ತೆಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲೇ ಪಾದಚಾರಿ ಸಂಚರಿಸುತ್ತಿರುವುದು

'ಕುಡಿಯುವ ನೀರು ಪೋಲು'

ಗಾಂಧಿನಗರದ ಕಾಳಿದಾಸ ಮುಖ್ಯರಸ್ತೆಯಲ್ಲಿ, ಪಾದಚಾರಿ ಮಾರ್ಗದ ಕೆಳಗಡೆ ಇರುವ ಕುಡಿಯುವ ನೀರು ಪೂರೈಕೆ ಪೈಪ್ ಒಡೆದು ನೀರು ರಸ್ತೆಯ ಮೇಲೇ ಹರಿಯುತ್ತಿದೆ. ಬೆಂಗಳೂರು ಜಲಮಂಡಳಿಯ ಅಧಿಕಾರಿಗಳಿಗೆ ಈ ಬಗ್ಗೆ ಮಾಹಿತಿ ನೀಡಲಾಗಿದೆ. ಆದರೆ, ಅಧಿಕಾರಿಗಳು ಮಾತ್ರ ತಲೆಕೆಡಿಸಿಕೊಳ್ಳುತ್ತಿಲ್ಲ. ಇದರಿಂದ, ಪ್ರತಿದಿನ ಕುಡಿಯುವ ನೀರು ಪೋಲಾಗುತ್ತಿದೆ.


ಗಾಂಧಿನಗರದ ಕಾಳಿದಾಸ ಮುಖ್ಯರಸ್ತೆಯಲ್ಲಿ ನೀರು ಹರಿಯುತ್ತಿರುವುದು

ಶಿವಪ್ರಸಾದ್, ಸ್ಥಳೀಯ ನಿವಾಸಿ

'ಪಾದಚಾರಿ ಮಾರ್ಗದಲ್ಲಿ ಗುಂಡಿಗಳು'

ಮೇಖ್ರಿ ವೃತ್ತದಿಂದ ಅರಮನೆ ಮೈದಾನದ ಮೂಲಕ ಕಾವೇರಿ ಜಂಕ್ಷನ್‌ಗೆ ಹೋಗುವ ಪಾದಚಾರಿ ಮಾರ್ಗದಲ್ಲಿ (ಬಸ್ ನಿಲುಗಡೆ ತಾಣ) ಬಳಿ ಕಾಮಗಾರಿಗಾಗಿ ಗುಂಡಿಗಳನ್ನು ತೆಗೆದಿದ್ದು, ಹಾಗೇ ಬಿಡಲಾಗಿದೆ. ಪಾದಚಾರಿಗಳ ಓಡಾಟಕ್ಕೆ ತೊಡಕಾಗಿದೆ. ಅರಮನೆ ಮೈದಾನದಲ್ಲಿನ ಕಾರ್ಯಕ್ರಮಕ್ಕೆ ಬಂದವರು ಹಿಂದಿರುಗುವಾಗ ಬಸ್‌ನಿಲುಗಡೆ ತಾಣಕ್ಕೆ ಇದೇ ಮಾರ್ಗದಲ್ಲಿ ಬರಬೇಕು. ಆಗ ಈ ಗುಂಡಿಗಳಲ್ಲಿ ಬೀಳುವ ಸಂಭವವಿದೆ. ರಾತ್ರಿ ವೇಳೆಯಲ್ಲಂತೂ ಅಪಾಯದ ಮಾರ್ಗವೇ. ಆದ್ದರಿಂದ, ಬಿಬಿಎಂಪಿ ಕೂಡಲೇ ಇಲ್ಲಿ ಕೈಗೊಂಡಿರುವ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ, ಗುಂಡಿಗಳನ್ನು ಮುಚ್ಚಲು ಕ್ರಮಕೈಗೊಳ್ಳಬೇಕು.

ಸಿದ್ಧಾರ್ಥ, ಪಾದಚಾರಿ


ಮೇಖ್ರಿ ವೃತ್ತದಿಂದ ಅರಮನೆ ಮೈದಾನದ ರಸ್ತೆಯಲ್ಲಿರುವ ಪಾದಚಾರಿ ಮಾರ್ಗದಲ್ಲಿ ಗುಂಡಿಗಳಿರುವುದು

'ವಾಲಿದ ವಿದ್ಯುತ್ ಕಂಬ'

ವಿಜಯನಗರ ವಿಧಾನಸಭೆ ಕ್ಷೇತ್ರದ ಕೆಂಪಾಪುರ ಅಗ್ರಹಾರದ 5ನೇ ಮುಖ್ಯರಸ್ತೆ ಸಂಗೊಳ್ಳಿ ರಾಯಣ್ಣ ರಸ್ತೆಯಲ್ಲಿ, ಮಹದೇಶ್ವರ ದೇವಸ್ಥಾನ ಪಕ್ಕದಲ್ಲಿರುವ ವಿದ್ಯುತ್ ಕಂಬ ರಸ್ತೆಗೆ ವಾಲಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಅಪಾಯ ಸಂಭವಿಸುವ ಮುನ್ನ ಬೆಸ್ಕಾಂ ಅಧಿಕಾರಿಗಳು ಈ ವಿದ್ಯುತ್ ಕಂಬವನ್ನು ತೆರವುಗೊಳಿಸಬೇಕು

ಎಂ.ಉಮಾಶಂಕರ ಬಾಬು, ಸ್ಥಳೀಯ ನಿವಾಸಿ


ಸಂಗೊಳ್ಳಿ ರಾಯಣ್ಣ ರಸ್ತೆಯಲ್ಲಿ ವಿದ್ಯುತ್ ಕಂಬ ವಾಲಿರುವುದು

ಚಿತ್ರಸಂತೆಗೆ ಹರಿದು ಬಂದ ಕಲಾಸಕ್ತರ ದಂಡು • ಚಿತ್ತಾಕರ್ಷಕ ಕಲಾಕೃತಿಗಳ ಪ್ರದರ್ಶನ, ಮಾರಾಟ

ಕಲಾವಿದರ ಸಂಗಮ, ಕಲಾವೈಭವ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎತ್ತ ಕಣ್ಣುಹಾಯಿಸಿದರೂ ಬಣ್ಣ ಬಣ್ಣದ ಚಿತ್ತಾರ. ಸ್ಥಳದಲ್ಲಿಯೇ ತಮ್ಮ ಕೈಚಳಕ ತೋರುವ ಕಲಾವಿದರು. ಕಲಾರಸಿಕರ ಬೆರಗು ಹೆಚ್ಚಿಸುವ ವಿಭಿನ್ನ ಪ್ರಕಾರಗಳ ಕಲಾಕೃತಿಗಳು. ರಸ್ತೆಯುದ್ದಕ್ಕೂ ಕಿಕ್ಕಿರಿದು ಸೇರಿದ ಕಲಾಸಕ್ತರ ದಂಡು.

ಈ ದೃಶ್ಯ ಕಂಡದ್ದು ಕುಮಾರಕೃಪಾ ರಸ್ತೆಯಲ್ಲಿ. ಕರ್ನಾಟಕ ಚಿತ್ರಕಲಾ ಪರಿಷತ್ತು ನಗರದಲ್ಲಿ ಭಾನುವಾರ ಹಮ್ಮಿಕೊಂಡ 21ನೇ ಚಿತ್ರಸಂತೆಯಲ್ಲಿ ಕಲಾಲೋಕವೇ ಅನಾವರಣಗೊಂಡಿತ್ತು. ಈ ಚಿತ್ರಸಂತೆಯು ಕಲಾವಿದರ ಪ್ರತಿಭೆಗೆ ವೇದಿಕೆ ಕಲ್ಪಿಸುವುದರ ಜೊತೆಗೆ ಅವರು ರಚಿಸಿದ ಕಲಾಕೃತಿಗಳ ಮಾರಾಟಕ್ಕೂ ಅವಕಾಶ ಒದಗಿಸಿತ್ತು. ಚಿತ್ರಸಂತೆಯು ಕಲಾವಿದರ ಮತ್ತು ಕಲಾಸಕ್ತರ ನಡುವೆ ಬಾಂಧವ್ಯ ಬೆಸೆಯುವ ಸೇತುವೆಯಾಯಿತು. ರಂಗುರಂಗಿನ ಕಲಾಕೃತಿಗಳು ಕಲಾರಸಿಕರ ಸಂಭ್ರಮವನ್ನೂ ಇಮ್ಮಡಿಗೊಳಿಸಿದವು.

ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ಮಾಡಿದ ಸಾಧನೆ ಹಾಗೂ ಚಂದ್ರಯಾನ–3ರ ಯಶಸ್ಸಿನಿಂದಾಗಿ ಈ ಬಾರಿಯ ಚಿತ್ರಸಂತೆಯನ್ನು ಭಾರತೀಯ ವಿಜ್ಞಾನಿಗಳಿಗೆ ಸಮರ್ಪಣೆ ಮಾಡಲಾಗಿತ್ತು. ಪರಿಷತ್ತಿನ ಆವರಣದಲ್ಲಿ ಚಂದ್ರಯಾನ–3ರ ಪ್ರತಿಕೃತಿಯನ್ನೂ ಮಾಡಲಾಗಿತ್ತು. ಇದು ನೆರೆದಿದ್ದವರ ಗಮನಸೆಳೆಯುವಲ್ಲಿ ಯಶಸ್ವಿಯಾಯಿತು. ಪರಿಷತ್ತಿನ ಆವರಣದಲ್ಲಿ ಕಲಾಕೃತಿಗಳ ಜತೆಗೆ ಕರಕುಶಲ ವಸ್ತುಗಳು ಹಾಗೂ ಕಲಾಕೃತಿ ರಚನೆಗೆ ಅಗತ್ಯವಿರುವ ಬಣ್ಣ ಮತ್ತು ಅಗತ್ಯ ವಸ್ತುಗಳನ್ನೂ ಮಾರಾಟಕ್ಕೆ ಇರಿಸಲಾಗಿತ್ತು.

ನಾನಾ ಪ್ರಕಾರದ ಕಲಾಕೃತಿ: ಮರಳಿನ ಚಿತ್ರಕಲೆ, ಜಲವರ್ಣ, ಆ್ಯಕ್ರಿಲಿಕ್, ಮಧುಬನಿ, ತೈಲವರ್ಣ, ಡಿಜಿಟಲ್ ಪೇಂಟಿಂಗ್, ತಂಜಾವೂರು ಶೈಲಿ, ರಾಜಸ್ಥಾನಿ ಶೈಲಿ, ಕಾಫಿ ಪೇಂಟಿಂಗ್ ಸೇರಿ ನಾನಾ ಪ್ರಕಾರದ ಕಲಾಕೃತಿಗಳು ಗಮನಸೆಳೆದವು. ಒಂದಕ್ಕಿಂತ ಮತ್ತೊಂದು ಕಲಾಕೃತಿಗಳು ಬೇರೊಂದು ಆಲೋಚನೆಗೆ ಹಚ್ಚಿದವು. ಅನುಪಯುಕ್ತ ವಸ್ತುಗಳೂ ಕಲಾಕೃತಿಯ ರೂಪ ಪಡೆದಿದ್ದವು. ಒಡೆದು ಹೋದ ಗಿಟಾರ್, ಕಾರ್ಯನಿರ್ವಹಿಸದ ವೀಣೆ ಸೇರಿ ವಿವಿಧ ಸಂಗೀತ ಉಪಕರಣಗಳಿಗೂ ಕಲಾವಿದರು ಬಣ್ಣದ ಸ್ಪರ್ಶದೊಂದಿಗೆ ಹೊಸ ರೂಪ ನೀಡಿದ್ದರು.

ದೈವ ಕೋಲ, ಯಕ್ಷಗಾನ ವೇಷಧಾರಿಗಳು, ಮಹಿಳೆಯರ ವಿವಿಧ ಭಂಗಿಗಳು, ಪರಿಸರ, ವನ್ಯಜೀವಿಗಳು, ಐತಿಹಾಸಿಕ ದೇವಸ್ಥಾನಗಳು, ಗ್ರಾಮೀಣ ಸೊಗಡು, ಪೌರಾಣಿಕ ಪಾತ್ರಧಾರಿಗಳು, ಜಾನಪದ ನೃತ್ಯ, ಉತ್ಸವ ಹಾಗೂ ಧಾರ್ಮಿಕ ಆಚರಣೆಗಳು, ವಿಷ್ಣು, ಗಣಪತಿ ಸೇರಿ ವಿವಿಧ ದೇವರು, ನಾಟ್ಯರಾಣಿ ಶಾಂತಲೆ, ಗೌತಮ ಬುದ್ಧ ಹಾಗೂ ಕಾಡು ಹಣ್ಣುಗಳ ಕಲಾಕೃತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದವು.

ರಸ್ತೆಯ ಉದ್ದಕ್ಕೂ ವ್ಯಕ್ತಿಯ ಭಾವಚಿತ್ರ ಹಾಗೂ ವ್ಯಂಗ್ಯ ಚಿತ್ರಗಳನ್ನು ಬಿಡಿಸುವವರು ಕಾಣಸಿಗುತ್ತಿದ್ದರು. ಪುಟ್ಟ ಮಕ್ಕಳು ಭಾವಚಿತ್ರ ಬಿಡಿಸಿಕೊಂಡು ಸಂಭ್ರಮಿಸಿದರೆ, ಯುವಕ ಯುವತಿಯರು ಹಚ್ಚೆ ಹಾಕಿಸಿಕೊಂಡು ಖುಷಿ ಪಟ್ಟರು.

ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ವತಿಯಿಂದ ಸಂಚಾರಿ ಎಟಿಎಂ ವ್ಯವಸ್ಥೆ ಮಾಡಲಾಗಿತ್ತು. ಯುಪಿಐ ಆಧಾರಿತ ಆ್ಯಪ್‌ಗಳಿಂದಲೂ ಖರೀದಿ ವಹಿವಾಟು ನಡೆಯುತ್ತಿದ್ದುದು ಕಂಡುಬಂತು. ಸಂತೆಗೆ ಬಂದವರ ಹಸಿವು ನೀಗಿಸಲು ರುಚಿರುಚಿ ಆಹಾರದ ಮಳಿಗೆಗಳೂ ಇದ್ದವು.





1. ಚಿತ್ರಸಂತೆ ವೀಕ್ಷಿಸಲು ಕುಮಾರಕೃಪಾ ರಸ್ತೆಯಲ್ಲಿ ಸೇರಿದ್ದ ಜನಸ್ತೋಮ 2. ಮಹಿಳೆಯೊಬ್ಬರು ಮಗುವನ್ನು ಹೊತ್ತುಕೊಂಡು ಕಲಾಕೃತಿಗಳನ್ನು ವೀಕ್ಷಿಸಿದ ಬಗೆ ಹೀಗೆ... –ಪ್ರಜಾವಾಣಿ ಚಿತ್ರಗಳು/ ಎಂ.ಎಸ್.ಮಂಜುನಾಥ್

ಚಿತ್ರಸಂತೆಗೆ ಹದಿನೈದು ವರ್ಷಗಳಿಂದ ಬರುತ್ತಿದ್ದೇನೆ. ಹೆಚ್ಚಾಗಿ ಉತ್ಸವಗಳ ಕಲಾಕೃತಿ ರಚಿಸುತ್ತಿದ್ದು, ಕಲಾಸಕ್ತರಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ

ಮೀನಾಕ್ಷಿ ಸದಲಗಿ, ಕಲಾವಿದೆ

ಕಲಾ ಗ್ಯಾಲರಿಗಳಲ್ಲಿ ದುಬಾರಿ ಶುಲ್ಕ ನೀಡಿ ಪ್ರದರ್ಶನ ನೀಡುವುದು ಕಷ್ಟ. ಇಲ್ಲಿ ಎಲ್ಲ ರೀತಿಯ ಕಲಾಸಕ್ತರ ಜತೆ ಸಂಪರ್ಕ, ಬಾಂಧವ್ಯ ಬೆಳೆಯುತ್ತದೆ

ಪರಶುರಾಮ್, ಕಲಾವಿದ

ಕಲಾವಿದರಿಗೆ ಚಿತ್ರಸಂತೆ ಉತ್ತಮ ವೇದಿಕೆ. ಹಲವು ವರ್ಷಗಳಿಂದ ಪಾಲ್ಗೊಳ್ಳುತ್ತಿದ್ದೇನೆ. ವರ್ಷದಿಂದ ವರ್ಷಕ್ಕೆ ಇಲ್ಲಿಗೆ ಭೇಟಿ ನೀಡುವವರ ಸಂಖ್ಯೆಯೂ ಹೆಚ್ಚುತ್ತಿದೆ

ಚೈತ್ರ ಮಂದಾರ, ಕಲಾವಿದೆ

1,500 ಕಲಾವಿದರು ಭಾಗಿ

ದೇಶದ ವಿವಿಧ ಭಾಗಗಳಿಂದ 1,500 ಕಲಾವಿದರು ಚಿತ್ರಸಂತೆಯಲ್ಲಿ ಭಾಗವಹಿಸಿ, ಕಲಾಕೃತಿಗಳನ್ನು ಪ್ರದರ್ಶಿಸಿದರು. ಕರ್ನಾಟಕದ ಜತೆಗೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗೋವಾ, ಮಹಾರಾಷ್ಟ್ರ, ಪಂಜಾಬ್, ಪಶ್ಚಿಮ ಬಂಗಾಳ, ಒಡಿಶಾ ಸೇರಿದಂತೆ ವಿವಿಧ ರಾಜ್ಯಗಳ ಕಲಾವಿದರು ಪಾಲ್ಗೊಂಡಿದ್ದರು. 1,300ಕ್ಕೂ ಅಧಿಕ ಮಳಿಗೆಗಳು ಮೇಳದಲ್ಲಿ ಇದ್ದವು. ವೃತ್ತಿನಿರತ ಕಲಾವಿದರ ಜತೆಗೆ ಹವ್ಯಾಸಿ ಕಲಾವಿದರು ಹಾಗೂ ಕಲಾ ವಿದ್ಯಾರ್ಥಿಗಳು ಪಾಲ್ಗೊಂಡು, ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದರು.

ಶಿವಾನಂದ ಸರ್ಕಲ್‌ನಿಂದ ವಿಂಡ್ಸನ್ ಮ್ಯಾನರ್‌ವರೆಗೆ ಕುಮಾರಕೃಪಾ ರಸ್ತೆಯಲ್ಲಿ, ಕ್ರೆಸೆಂಟ್ ರಸ್ತೆಯ ಆಯ್ದ ಸ್ಥಳದಲ್ಲಿ, ಶಿವಾನಂದ ವೃತ್ತದಿಂದ ಗುರುರಾಜ ಕಲ್ಯಾಣ ಮಂಟಪದವರೆಗೆ ಸ್ಟೀಲ್ ಮೇಲ್ಸೇತುವೆ ಕೆಳಭಾಗ ಹಾಗೂ ಭಾರತ ಸೇವಾದಳದ ಆವರಣದಲ್ಲಿ ಕಲಾಕೃತಿಗಳ ಪ್ರದರ್ಶನ ನಡೆಯಿತು. ಪರಿಷತ್ತು ಸಂಗ್ರಹಿಸಿರುವ ತೊಗಲು ಗೊಂಬೆ ಹಾಗೂ ಮೈಸೂರಿನ ಸಾಂಪ್ರದಾಯಿಕ ಕಲಾಕೃತಿಗಳ ಪ್ರದರ್ಶನ ಪರಿಷತ್ತಿನ ಗ್ಯಾಲರಿಗಳಲ್ಲಿ ಹಮ್ಮಿಕೊಳ್ಳಲಾಗಿತ್ತು.

ಫೀಡರ್ ಬಸ್ ಕಾರ್ಯಾಚರಣೆ

ಚಿತ್ರಸಂತೆಗೆ ತೆರಳುವವರಿಗೆ ಅನುಕೂಲಕ್ಕಾಗಿ ಇದೇ ಮೊದಲ ಬಾರಿ ಮೆಟ್ರೊ ಫೀಡರ್ ಬಸ್ ಕಾರ್ಯಾಚರಣೆ ನಡೆಸಿದವು. ಕೆಂಪೇಗೌಡ ಬಸ್ ನಿಲ್ದಾಣ–ಆನಂದರಾವ್ ಸರ್ಕಲ್–ಶಿವಾನಂದ ಸ್ಟೋರ್ಸ್ ರಸ್ತೆಯಲ್ಲಿ ನಾಲ್ಕು ಬಿಎಂಟಿಸಿ ಬಸ್‌ಗಳು ಮತ್ತು ಮಂತ್ರಿ ಮಾಲ್ ಮೆಟ್ರೊ ನಿಲ್ದಾಣ-ವಿಧಾನಸೌಧ ಸೆಂಟ್ರಲ್ ಟಾಕೀಸ್, ಲಿಂಕ್ ರಸ್ತೆ, ಶಿವಾನಂದ ಸ್ಟೋರ್ಸ್ ರಸ್ತೆಯಲ್ಲಿ ನಾಲ್ಕು ಬಸ್‌ಗಳು ಪ್ರತಿ 10 ನಿಮಿಷಕ್ಕೆ ಒಂದರಂತೆ ಸಂಚರಿಸಿದವು.



₹ 15 ಲಕ್ಷ ಮೌಲ್ಯದ ಜಲ್ಲಿಕಟ್ಟು ಕ್ರೀಡೆಯ ಕಲಾಕೃತಿ

‘₹5 ಕೋಟಿ ವಹಿವಾಟು’

‘ಚಿತ್ರಸಂತೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ವರ್ಷದಿಂದ ವರ್ಷಕ್ಕೆ ಭೇಟಿ ನೀಡುವವರ ಸಂಖ್ಯೆಯೂ ಹೆಚ್ಚಳವಾಗುತ್ತಿದೆ. ಸುಮಾರು 5 ಲಕ್ಷ ಕಲಾಸಕ್ತರು ಈ ಬಾರಿ ಭೇಟಿ ನೀಡಿದ್ದಾರೆ. ಅಂದಾಜು ₹ 5 ಕೋಟಿ ಮೌಲ್ಯದ ಕಲಾಕೃತಿಗಳು ಮಾರಾಟವಾಗಿವೆ. ಕಳೆದ ಬಾರಿಯ ಚಿತ್ರಸಂತೆಗೆ ಹೋಲಿಸಿದರೆ ಈ ಬಾರಿ ಶೇ 20 ರಷ್ಟು ವಹಿವಾಟು ಹೆಚ್ಚಳವಾಗಿದೆ’ ಎಂದು ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ತಿಳಿಸಿದರು.

₹15 ಲಕ್ಷದವರೆಗಿನ ಕಲಾಕೃತಿ

ಚಿತ್ರಸಂತೆಯಲ್ಲಿ ₹ 1 ಸಾವಿರದಿಂದ ₹15 ಲಕ್ಷದವರೆಗಿನ ಕಲಾಕೃತಿಗಳಿದ್ದವು. ಕೆಲವರು ದುಬಾರಿ ಬೆಲೆ ಕೇಳಿ ಅಚ್ಚರಿಪಟ್ಟರೂ, ಕಲಾವಿದರ ಪ್ರತಿಭೆ ಮತ್ತು ಶ್ರಮಕ್ಕೆ ತಲೆದೂಗಿದರು. ಆಂಧ್ರಪ್ರದೇಶದ ಕಲಾವಿದ ಹನುಮಂತ ಅವರು ಲೆದರ್ ಶೀಟ್‌ನಲ್ಲಿ ರಾಮಾಯಣದ ಸುಂದರ ಕಾಂಡದ ಘಟನೆಗಳನ್ನು ಚಿತ್ರಿಸಿದ್ದು, ಇದನ್ನು ಪ್ರದರ್ಶನಕ್ಕೆ ಇರಿಸಿದ್ದರು. ಬೆಳಗಾವಿಯ ಮೀನಾಕ್ಷಿ ಸದಲಗಿ ಅವರು ಮೈಸೂರಿನ ರಾಜ ವೈಭವವನ್ನು ನೆನಪಿಸುವ ಹಲವು ಕಲಾಕೃತಿಗಳನ್ನು ಪ್ರದರ್ಶನಕ್ಕೆ ತಂದಿದ್ದರು. ಹೈದರಾಬಾದ್ ಕಲಾವಿದ ಪರಶುರಾಮ್ ಅವರು ತೈಲವರ್ಣ ಬಳಸಿ ಜಲ್ಲಿಕಟ್ಟು ಕ್ರೀಡೆಯನ್ನು ಚಿತ್ರಿಸಿದ್ದು, ಇದಕ್ಕೆ ₹ 15 ಲಕ್ಷ ನಿಗದಿಪಡಿಸಿದ್ದರು. ಇದು ಎಂಟು ಅಡಿ ಉದ್ದ ಹಾಗೂ ಆರು ಅಡಿ ಅಗಲವಿದ್ದು, ಇದಕ್ಕೆ ತೇಗದ ಮರದ ಚೌಕಟ್ಟು ಬಳಸಲಾಗಿದೆ.

‘ಚಿತ್ರಕಲೆಯ ಅಭಿವೃದ್ಧಿಗೆ ಸರ್ಕಾರ ಬದ್ಧ’

ಬೆಂಗಳೂರು: ‘ಚಿತ್ರಕಲೆಯ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದ್ದು, ಈ ಬಾರಿ ಕರ್ನಾಟಕ ಚಿತ್ರಕಲಾ ಪರಿಷತ್ತಿಗೆ ₹ 50 ಲಕ್ಷ ಅನುದಾನ ಒದಗಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಕರ್ನಾಟಕ ಚಿತ್ರಕಲಾ ಪರಿಷತ್ತು ನಗರದಲ್ಲಿ ಭಾನುವಾರ ಹಮ್ಮಿಕೊಂಡ 21ನೇ ಚಿತ್ರಸಂತೆ ಉದ್ಘಾಟಿಸಿ, ಮಾತನಾಡಿದರು. ‘ಚಿತ್ರಸಂತೆಗೆ ₹ 10 ಲಕ್ಷ ಅನುದಾನ ನೀಡಲಾಗಿತ್ತು. ಪರಿಷತ್ತಿನ ಮನವಿ ಮೇರೆಗೆ ಈ ಅನುದಾನವನ್ನು ₹ 50 ಲಕ್ಷಕ್ಕೆ ಹೆಚ್ಚಿಸಿ, ಈ ವರ್ಷ ನೀಡುತ್ತೇವೆ. ಮುಂದಿನ ವರ್ಷ ಇನ್ನೂ ಹೆಚ್ಚಿನ ಅನುದಾನ ನೀಡಲಾಗುವುದು. ಚಿತ್ರಸಂತೆಗೆ ವಿವಿಧ ರಾಜ್ಯಗಳಿಂದ ಸಾವಿರಾರು ಕಲಾವಿದರು ಬರುತ್ತಿರುವುದು ಹೆಮ್ಮೆಯ ಸಂಗತಿ’ ಎಂದು ಹೇಳಿದರು.

‘ಎಲ್ಲ ಜಿಲ್ಲೆಗಳಲ್ಲಿ ವಸ್ತು ಸಂಗ್ರಹಾಲಯ ಹಾಗೂ ಆರ್ಟ್ ಗ್ಯಾಲರಿ ಸ್ಥಾಪಿಸಲು ರಾಜ್ಯ ಸರ್ಕಾರ ಎಲ್ಲ ರೀತಿಯ ಸಹಾಯ ಮಾಡಲಿದೆ’ ಎಂದು ಭರವಸೆ ನೀಡಿದರು.

ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ‘ವರ್ಷಕ್ಕೆ ಒಮ್ಮೆ ನಡೆಸುತ್ತಿರುವ ಚಿತ್ರಸಂತೆಯು ಕಲಾವಿದರ ಪ್ರತಿಭೆಗೆ ವೇದಿಕೆ ಕಲ್ಪಿಸಿಕೊಡುತ್ತಿದೆ. ರಸ್ತೆ ಬದಿಯಲ್ಲಿ ಚಿತ್ರಸಂತೆ ಮಾಡುವುದು ಗ್ರಾಮೀಣ ಸೊಗಡನ್ನು ತೋರುತ್ತದೆ. ಈ ಚಿತ್ರಸಂತೆಯನ್ನು ಅರಮನೆ ಮೈದಾನದಲ್ಲಿ ಮಾಡಬಹುದು. ಆದರೆ, ರಸ್ತೆ ಬದಿಯ ಈ ಸಂಭ್ರಮವನ್ನು ಅಲ್ಲಿ ಕಾಣಲು ಸಾಧ್ಯವಿಲ್ಲ’ ಎಂದು ಹೇಳಿದರು.

ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, ‘ಚಿತ್ರಕಲಾವಿದರನ್ನು ಪ್ರೋತ್ಸಾಹಿಸಲು ಹಾಗೂ ಕಲೆಯನ್ನು ಜನರಿಗೆ ತಲುಪಿಸಲು ಚಿತ್ರಸಂತೆಯನ್ನು ಆಯೋಜಿಸಲಾಗುತ್ತಿದೆ. ಇದು ಕಲ್ಯಾಣ ಕರ್ನಾಟಕ ಸೇರಿ ರಾಜ್ಯದ ವಿವಿಧೆಡೆ ನಡೆಯುವಂತಾಗಬೇಕು. ಈ ಸಂಬಂಧ ಸರ್ಕಾರ ಹೆಚ್ಚಿನ ಅನುದಾನವನ್ನು ನೀಡಬೇಕು. ರಾಜ್ಯದ ಪ್ರತಿ ಜಿಲ್ಲೆಯಲ್ಲಿಯೂ ವಸ್ತುಸಂಗ್ರಹಾಲಯ ಹಾಗೂ ಕಲಾ ಗ್ಯಾಲರಿಯನ್ನು ಸರ್ಕಾರ ಸ್ಥಾಪಿಸಬೇಕು’ ಎಂದು ಮನವಿ ಮಾಡಿದರು.

ಉಚಿತ ವಿದ್ಯುತ್: ಸೌರ ಚಾವಣಿ ಅಳವಡಿಕೆಗೆ ನಾಗರಿಕರ ನಿರಾಸಕ್ತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ‘ಗೃಹಜ್ಯೋತಿ’ ಉಚಿತ ವಿದ್ಯುತ್ ಯೋಜನೆ ಜಾರಿಯಿಂದಾಗಿ ಮನೆಗಳಿಗೆ 'ಸೌರ ಚಾವಣಿ' ಅಳವಡಿಕೆಗೆ ನಗರದ ಜನರು ನಿರಾಸಕ್ತಿ ತೋರುತ್ತಿದ್ದಾರೆ.

‘ಗೃಹಜ್ಯೋತಿ’ ಯೋಜನೆಯಿಂದ ಕೆಲವರು ವಿದ್ಯುತ್ ಬಳಕೆಯಲ್ಲಿ ಶೂನ್ಯ ಬಿಲ್ ಪಡೆದರೆ, ಹಲವರು ಶುಲ್ಕದಲ್ಲಿ ಸಬ್ಸಿಡಿ ಪಡೆಯುತ್ತಿದ್ದಾರೆ. ಇದರಿಂದಾಗಿ ಗೃಹಬಳಕೆ ವಿದ್ಯುತ್‌ಗಾಗಿ ಸೌರ ಚಾವಣಿ ಅಳವಡಿಸುವವರ ಸಂಖ್ಯೆ ಕಡಿಮೆಯಾಗಿದೆ. ಕರ್ನಾಟಕ ನವೀಕರಿಸಬಹುದಾದ ಇಂಧನ ಉಪಕರಣಗಳ ತಯಾರಕರ ಸಂಘದ ಪ್ರಕಾರ ಗೃಹಜ್ಯೋತಿ ಯೋಜನೆ ಪ್ರಾರಂಭವಾದಾಗಿನಿಂದ ಸೌರ ಮೇಲ್ಛಾವಣಿ ಅಳವಡಿಕೆಗೆ ನಗರದ ಜನರು ಆಸಕ್ತಿ ತೋರುತ್ತಿಲ್ಲ.

‘ಸೌರ ಚಾವಣಿ ಅಳವಡಿಕೆಗೆ ಸಂಬಂಧಿಸಿದಂತೆ ಹಲವು ಯೋಜನೆಗಳು ಅಂತಿಮ ಹಂತದಲ್ಲಿದ್ದರೆ, ಇನ್ನೂ ಕೆಲವು ಮಾತುಕತೆಯ ಹಂತದಲ್ಲಿದ್ದವು. ಈಗ ಗೃಹಜ್ಯೋತಿ ಯೋಜನೆ ಪ್ರಾರಂಭವಾದ ಬಳಿಕ ಈ ಎಲ್ಲ ಯೋಜನೆಗಳಿಗೂ ಹಿನ್ನಡೆಯಾಗಿದೆ. ಶೂನ್ಯ ಬಿಲ್‌ನಿಂದಾಗಿ ಸೌರ ಚಾವಣಿ ಅಳವಡಿಕೆ ಅಗತ್ಯವಿಲ್ಲವೆಂದು ಗ್ರಾಹಕರು ತಿಳಿಸುತ್ತಿದ್ದಾರೆ’ ಎಂದು ಕರ್ನಾಟಕ ನವೀಕರಿಸಬಹುದಾದ ಇಂಧನ ಉಪಕರಣಗಳ ತಯಾರಕರ ಸಂಘದ ಉಪಾಧ್ಯಕ್ಷ ಕೆ.ಎಲ್.ಎಚ್ ರಾಯ ಬೇಸರ ವ್ಯಕ್ತಪಡಿಸಿದರು.

‘ಕಳೆದ ನಾಲ್ಕು ತಿಂಗಳಲ್ಲಿ ಕನಿಷ್ಠ 15 ಮಂದಿ ಸೌರ ಮೇಲ್ಛಾವಣಿ ಅಳವಡಿಕೆಯಿಂದ ಹಿಂದೆ ಸರಿದಿದ್ದಾರೆ’ ಎಂದು ಸೌರ ಮೇಲ್ಛಾವಣಿ ಮಾರಾಟಗಾರರೊಬ್ಬರು ತಿಳಿಸಿದರು.

‘ಈ ಉದ್ಯಮವು ಶೇ 30ರಷ್ಟು ಕುಸಿತ ಕಂಡಿದೆ. ಈಗ ಉಚಿತ ವಿದ್ಯುತ್‌ನಿಂದಾಗಿ ಅಂತಹ ಗ್ರಾಹಕರು ಸೌರ ಮೇಲ್ಛಾವಣಿ ಅಳವಡಿಕೆಗೆ ಆಸಕ್ತಿ ತೋರುತ್ತಿಲ್ಲ’ ಎಂದು ನವೀಕರಿಸಬಹುದಾದ ಇಂಧನ ಉಪಕರಣಗಳ ತಯಾರಕರು ಕಳವಳ ವ್ಯಕ್ತಪಡಿಸಿದರು.

‘ಪೋಷಣ್‌ಗೆ ಸಿರಿಧಾನ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ, ‘ಪೋಷಣ್’ ಯೋಜನೆಯಡಿ ಸಿರಿಧಾನ್ಯಗಳ ಆಹಾರ ಪೂರೈಸುವ ಕುರಿತು ಚಿಂತನೆ ನಡೆದಿದೆ ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಅರ್ಜುನ್ ಮುಂಡಾ ಹೇಳಿದರು.

ನಗರದ ಅರಮನೆ ಆವರಣದಲ್ಲಿ ಭಾನುವಾರ ಕೃಷಿ ಇಲಾಖೆ ಆಯೋಜಿಸಿದ್ದ ಸಾವಯವ ಮತ್ತು ಸಿರಿಧಾನ್ಯ ಅಂತರರಾಷ್ಟ್ರೀಯ ವಾಣಿಜ್ಯ ಮೇಳದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಪೋಷಣ್ ಯೋಜನೆಗೆ ಸಿರಿಧಾನ್ಯ ಬಳಕೆ ಮಾಡುವುದರಿಂದ, ಮಹಿಳೆಯರು ಮತ್ತು ಮಕ್ಕಳಿಗೆ ಪೌಷ್ಟಿಕ ಆಹಾರ ಲಭ್ಯವಾಗುತ್ತದೆ. ಧಾನ್ಯಗಳಿಗೆ ಬೇಡಿಕೆ ಹೆಚ್ಚುತ್ತದೆ. ರೈತರಿಗೂ ಸಹಾಯವಾಗುತ್ತದೆ ಎಂದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, 'ಕರ್ನಾಟಕದಲ್ಲಿ 2016 ರಲ್ಲೇ ಸಿರಿಧಾನ್ಯಗಳ ಜಾಗೃತಿ ಅಭಿಯಾನ ಶುರುವಾಯಿತು. ಅದರ ಫಲವಾಗಿಯೇ 2023ನ್ನು ಅಂತರಾಷ್ಟ್ರೀಯ ಸಿರಿಧಾನ್ಯ ವರ್ಷ ಎಂದು ಘೋಷಿಸಲಾಯಿತು' ಎಂದರು.

'ಸಿರಿಧಾನ್ಯಕ್ಕೆ ರಾಜ್ಯದಲ್ಲಿ ಉತ್ತಮ ಪ್ರೋತ್ಸಾಹ ದೊರೆತಿದೆ. ಆ ಕಾರಣದಿಂದ ಜಾಗತಿಕ ಮಟ್ಟದಲ್ಲಿ ಸಿರಿಧಾನ್ಯ ಮಾರುಕಟ್ಟೆ ವೃದ್ಧಿಯಾಗಿದೆ. ಉದ್ಯೋಗ ಸೃಷ್ಟಿಯಾಗುತ್ತಿದೆ. ರೈತರೂ ಆರ್ಥಿಕ ಲಾಭಗಳಿಸುವಂತಾಗಿದೆ' ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ಸಿರಿಧಾನ್ಯ ನಮ್ಮ ಪರಂಪರೆಯ ಆಹಾರವಾಗಿದ್ದು, ಅದನ್ನು ಬೆಳೆಸಿ, ಬಳಸಬೇಕು' ಎಂದರು.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿ, 'ಮೂರು ದಿನಗಳ ಮೇಳದಲ್ಲಿ 16 ರಾಜ್ಯಗಳ ರೈತರು, ಉದ್ದಿಮೆದಾರರು ಭಾಗವಹಿಸಿದ್ದರು. ದೇಶ ವಿದೇಶಗಳ ಪ್ರತಿನಿಧಿಗಳೂ ಪಾಲ್ಗೊಂಡಿದ್ದರು. 147 ಮಾರುಕಟ್ಟೆದಾರರು, ರಫ್ತುದಾರರು, 275 ಉತ್ಪದಕರು/ಮಾರಾಟಗಾರರು ಬಿ2ಬಿ (ವ್ಯಾಪಾರ- ವ್ಯವಹಾರ ಒಡಂಬಡಿಕೆ) ಸಭೆಯಲ್ಲಿ ಪಾಲ್ಗೊಂಡಿದ್ದರು. ₹150 ಕೋಟಿ ಮೌಲ್ಯದ 27 ಒಡಂಬಡಿಕೆಯಾಗಿವೆ' ಎಂದು ಮಾಹಿತಿ ನೀಡಿದರು.

ಎಸ್‌ಸಿ, ಎಸ್‌ಟಿ ನೌಕರರ ಸಮಸ್ಯೆ: ಮುಖ್ಯಮಂತ್ರಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು:‘ಬಡ್ತಿ ಮೀಸಲಾತಿಗೆ ಸಂಬಂಧಿಸಿದಂತೆ ‘ಬಿ.ಕೆ. ಪವಿತ್ರ- 2’ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 2019ರ ಮೇ 19ರಂದು ನೀಡಿರುವ ತೀರ್ಪಿನ ನಂತರ ರಾಜ್ಯ ಸರ್ಕಾರ ಜ್ಯೇಷ್ಠತೆ ಸಂರಕ್ಷಣಾ ಕಾಯ್ದೆ ಜಾರಿಗೆ ತಂದಿದೆ. ಆದರೆ, ಈ ಕಾಯ್ದೆಯ ಅನ್ವಯ ಬಹುತೇಕ ಇಲಾಖೆಗಳು ಜ್ಯೇಷ್ಠತೆ ನಿಗದಿಪಡಿಸಿ ಮುಂಬಡ್ತಿ ನೀಡುತ್ತಿಲ್ಲ. ಈ ಬಗ್ಗೆ ಸಭೆ ನಡೆಸಬೇಕು ಎಂಬ ಮನವಿಗೆ ಸಿ.ಎಂ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ’ ಎಂದು ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ತಿಳಿಸಿದ್ದಾರೆ.

‘ಬಿ.ಕೆ. ಪವಿತ್ರ- 1ರ ತೀರ್ಪಿನ ಅನ್ವಯ 3,898 ಎಸ್‌ಸಿ, ಎಸ್‌ಟಿ ನೌಕರರಿಗೆ ಹಿಂಬಡ್ತಿ ನೀಡಲಾಗಿತ್ತು. ಸಾಮಾನ್ಯ ವರ್ಗದ 5,002 ನೌಕರರಿಗೆ ಮುಂಬಡ್ತಿ ನೀಡಿ, ಸುಮಾರು 65 ಸಾವಿರ ನೌಕರರ ಜ್ಯೇಷ್ಠತೆಯನ್ನು ಕೆಳಹಂತದಲ್ಲಿ ನಿಗದಿಪಡಿಸಲಾಗಿತ್ತು. ಇದರಿಂದ ಮಾನಸಿಕವಾಗಿ ತೀವ್ರವಾಗಿ ನೊಂದ ಕೆಲವು ಪರಿಶಿಷ್ಟ ನೌಕರರು ಆತ್ಮಹತ್ಯೆ ಮಾಡಿಕೊಂಡಿದ್ದರು. ಕೆಲವರು ಹೃದಯಾಘಾತಕ್ಕೆ ಒಳಗಾಗಿದ್ದರು. ಈ ಹಿನ್ನೆಲೆಯಲ್ಲಿ ಜ್ಯೇಷ್ಠತೆ ಸಂರಕ್ಷಣಾ ಕಾಯ್ದೆ ತಂದರೂ ಅದರಲ್ಲಿರುವ ಸೌಲಭ್ಯಗಳು ಪರಿಶಿಷ್ಟ ನೌಕರರಿಗೆ ಲಭ್ಯವಾಗುತ್ತಿಲ್ಲ’ ಎಂದು ಮುಖ್ಯಮಂತ್ರಿಗೆ ಸಲ್ಲಿಸಿದ ಮನವಿಯಲ್ಲಿ ಅವರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಡ್ರಗ್ಸ್ ವಿರುದ್ಧ ಜಾಗೃತಿಗಾಗಿ ವಾಕಥಾನ್: ಅತಿಥಿಗಳು: ಗಣೇಶ್, ಬಿ. ದಯಾನಂದ್, ಎನ್. ಸತೀಶ್ ಕುಮಾರ್, ಎಸ್. ಗಿರೀಶ್, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ನಾಗರಬಾವಿ ವೃತ್ತದಿಂದ ಜ್ಞಾನಭಾರತಿ ಆವರಣದ ಪೊಲೀಸ್ ಠಾಣೆವರೆಗೆ, ಬೆಳಿಗ್ಗೆ 7.30

ಕಾಲೇಜು ವಾರ್ಷಿಕೋತ್ಸವ ಸಮಾರಂಭ: ಉದ್ಘಾಟನೆ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಅತಿಥಿ: ದಯಾನಂದ್, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಸ್ವತಂತ್ರ ಪದವಿ ಪೂರ್ವ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10

ಎಸ್.ಎನ್. ಸುಶೀಲ ಅವರಿಗೆ ಅಭಿನಂದನಾ ಸಮಾರಂಭ: ಉದ್ಘಾಟನೆ: ಬಿ. ತಿಮ್ಮೇಗೌಡ, ಅಧ್ಯಕ್ಷತೆ: ಜಯಕರ ಎಸ್.ಎಂ., ಅಭಿನಂದನಾ ಗ್ರಂಥ ಬಿಡುಗಡೆ: ನಾಗೇಶರ್ ವಿ. ಬೆಟ್ಟಕೋಟೆ, ಅಭಿನಂದನೆ ಸಮರ್ಪಣೆ: ಸಿ. ಚಲುವರಾಜು, ಅತಿಥಿಗಳು: ಶೇಖ್ ಲತೀಫ್, ಶ್ರೀನಿವಾಸ ಸಿ., ಕೆ.ವಿ. ನಾಗರಾಜ ಮೂರ್ತಿ, ಉಪಸ್ಥಿತಿ: ಉಷಾ ದಾತಾರ್, ಕೆ.ಆರ್. ಸುಧೀಂದ್ರ ಶರ್ಮ, ಡಿ.ಎಸ್. ಕಾಮತ್, ಕೆ. ರಾಮಕೃಷ್ಣಯ್ಯ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗ ಮತ್ತು ಯೋಗ ಅಧ್ಯಯನ ಕೇಂದ್ರ, ಸ್ಥಳ: ಕೆ. ವೆಂಕಟಗಿರಿಗೌಡ ಸಭಾಂಗಣ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30

ಕರ್ನಾಟಕ ಸಂಭ್ರಮ–50: ಉಪನ್ಯಾಸ: ಮನು ಬಳಿಗಾರ್, ಅಧ್ಯಕ್ಷತೆ: ವೈ. ವೆಂಕಟೇಶಪ್ಪ, ಪ್ರಾಸ್ತಾವಿಕ ನುಡಿ: ಡಿ.ಕೆ. ಚಿತ್ತಯ್ಯ ಪೂಜಾರ್, ಉಪಸ್ಥಿತಿ: ಕೆ. ಬೈರಪ್ಪ, ಆಯೋಜನೆ ಮತ್ತು ಸ್ಥಳ: ಕನ್ನಡ ಸಂಘ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಳಿಗ್ಗೆ 11

ತಾಂತ್ರಿಕ ದಿನಚರಿ 2024 ಬಿಡುಗಡೆ, 2023ರಲ್ಲಿ ನಿವೃತ್ತರಾದ ಅಭಿಯಂತರರಿಗೆ ಸನ್ಮಾನ: ಅತಿಥಿಗಳು: ಪದ್ಮಾಕ್ಷಿ ಲೋಕೇಶ್, ಎಸ್. ವಿಶ್ವನಾಥ್, ಅಧ್ಯಕ್ಷತೆ: ರಾಮಪ್ರಸಾತ್ ಮನೋಹರ್ ವಿ., ಆಯೋಜನೆ: ಬೆಂಗಳೂರು ಜಲಮಂಡಳಿ ಅಭಿಯಂತರರ ಸಂಘ, ಸ್ಥಳ: ಜಲಮಂಡಳಿಯ ಸಭಾಂಗಣ, ಕಾವೇರಿಭವನ, ಕೆ.ಜಿ. ರಸ್ತೆ, ಮಧ್ಯಾಹ್ನ 3.30

ಮಾಸಿಕ ಸಮಾವೇಶ, ರಮಣಶ್ರೀ ಪ್ರತಿಷ್ಠಾನದ ದತ್ತಿಯ ಸ್ನೇಹ ಸಂಜೆ: ‘ಕನ್ನಡ ರಾಜ್ಯೋತ್ಸವ’ ಕುರಿತು ಉಪನ್ಯಾಸ: ಮನು ಬಳಿಗಾರ್, ಅಭಿನಂದನೆ: ಮೃತ್ಯುಂಜಯ ದೊಡ್ಡವಾಡ, ವಾಣಿ ಮರಡೂರು, ಅಧ್ಯಕ್ಷತೆ: ಎಸ್. ಷಡಕ್ಷರಿ, ಆಯೋಜನೆ: ಸದಾಶಿವನಗರ ವೀರಶೈವ ಸಮಾಜ, ಸ್ಥಳ: ಬೃಂದಾವನ್ ಹಾಲ್, ಸದಾಶಿವನಗರ ಕ್ಲಬ್, ಸಂಜೆ 6.30

ಪ್ರವಚನ ವಾಹಿನಿ: ‘ಭಗವದ್ಗೀತೆ’ ಕುರಿತು ಉಪನ್ಯಾಸ: ಎಲ್.ಎಸ್. ವಾದಿರಾಜಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

‘ಸದ್ಯಕ್ಕೆ ಹೆಚ್ಚುವರಿ ಅಕ್ಕಿ ವಿತರಣೆ ಇಲ್ಲ’

ದೊಡ್ಡಬಳ್ಳಾಪುರ: ಅನ್ನಭಾಗ್ಯ ಯೋಜನೆ ಅಡಿ ಘೋಷಿಸಿದಂತೆ ಹೆಚ್ಚುವರಿ ಅಕ್ಕಿ ವಿತರಿಸಲು ಎಲ್ಲಿಯೂ ಅಕ್ಕಿ ಸಿಗುತ್ತಿಲ್ಲ. ಹಾಗಾಗಿ ಸದ್ಯಕ್ಕೆ ಹೆಚ್ಚುವರಿ ಅಕ್ಕಿ ಬದಲು ಹಣ ಕೊಡುವುದನ್ನೆ ಮುಂದುವರಿಸಲಾಗುವುದು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಹೇಳಿದ್ದಾರೆ.

ಅಕ್ಕಿ ಖರೀದಿಗೆ ಆಂಧ್ರಪ್ರದೇಶದೊಂದಿಗೆ ಚರ್ಚೆ ನಡೆದಿದೆ. ಮಾತುಕತೆ ಇನ್ನೂ ಅಂತಿಮವಾಗಿಲ್ಲ. ಹಾಗಾಗಿ ಹೆಚ್ಚುವರಿ ಅಕ್ಕಿ ವಿತರಿಸುವುದು ಕಷ್ಟವಾಗಲಿದೆ ಎಂದು ಭಾನುವಾರ ಗೂಳ್ಯ ಗ್ರಾಮದಲ್ಲಿ ಹೇಳಿದರು.

ಫಲಾನುಭವಿಗಳಿಗೆ ಹೆಚ್ಚುವರಿ ಐದು ಕೆ.ಜಿ ಅಕ್ಕಿ ಬದಲು ಬ್ಯಾಂಕ್ ಖಾತೆಗಳಿಗೆ ಹಣ ಜಮೆ ಮಾಡಲಾಗುತ್ತಿದೆ. ರಾಜ್ಯದಲ್ಲಿ ಮುಂಗಾರು ಮಳೆ ಕೊರತೆ ನಂತರ ಬರ ಪರಿಸ್ಥಿತಿ ಇದ್ದು, ಸಾಕಷ್ಟು ಜನ ಅಕ್ಕಿಯನ್ನೇ ನೀಡುವಂತೆ ಕೇಳುತ್ತಿದ್ದಾರೆ. ಆದರೆ, ಸದ್ಯದ ಸ್ಥಿತಿಯಲ್ಲಿ ಹೆಚ್ಚುವರಿ ಅಕ್ಕಿ ವಿತರಣೆ ಕಷ್ಟ ಎಂದರು.

ತುಮಕೂರು ಜಿಲ್ಲೆ ವೆಂಕಟಮ್ಮನಹಳ್ಳಿಯಲ್ಲಿ 19 ವರ್ಷದ ಹಿಂದೆ ನಡೆದಿದ್ದ ದಾಳಿ

ನಕ್ಸಲ್ ಹತ್ಯಾಕಾಂಡ: ಐವರ ಸೆರೆ

ಪ್ರಜಾವಾಣಿ ವಾರ್ತೆ

ಪಾವಗಡ: ಸುಮಾರು 19 ವರ್ಷಗಳ ಹಿಂದೆ ತಾಲ್ಲೂಕಿನ ನಾಗಲಮಡಿಕೆ ಹೋಬಳಿ ವೆಂಕಟಮ್ಮನಹಳ್ಳಿಯಲ್ಲಿ ನಕ್ಸಲರು ನಡೆಸಿದ್ದ ಪೊಲೀಸ್ ಹತ್ಯಾಕಾಂಡ ಪ್ರಕರಣದಲ್ಲಿ ಮಹಿಳೆ ಸೇರಿದಂತೆ ಐವರು ಆರೋಪಿಗಳನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಗಂತಿಮೇರಿಯ ನಾಗರಾಜು (40), ಧರ್ಮಾವರಂನ ಪದ್ಮ (35), ರಾಮಗಿರಿ ತಲ್ಲಿಮಡುಗುವಿನ ಬೋಯ ಓಬಳೇಶ್ (40), ರಾಮ ಮೋಹನ್ (42) ಮತ್ತು ಆಂಜನೇಯುಲು (44) ಅವರನ್ನು ಆಂಧ್ರಪ್ರದೇಶದಲ್ಲಿ ಬಂಧಿಸಿ ಕರೆ ತಂದಿದ್ದಾರೆ.

ಭಾರಿ ಭದ್ರತೆಯ ನಡುವೆ ಪೊಲೀಸರು ಆರೋಪಿಗಳನ್ನು ಪಾವಗಡ ಠಾಣೆಗೆ ಕರೆ ತಂದು ರಾತ್ರಿವರೆಗೆ ಪ್ರಶ್ನಿಸಿದ್ದಾರೆ. ಠಾಣೆಯ ಮುಖ್ಯ ಗೇಟ್‌ಗೆ ಬೀಗ ಹಾಕಿ, ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ. ಸೋಮವಾರ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಸಾಧ್ಯತೆ ಇದೆ.

ವೆಂಕಟಮ್ಮನಹಳ್ಳಿ ಪೊಲೀಸ್ ಹತ್ಯಾಕಾಂಡ ಪ್ರಕರಣದ ಕುರಿತು ಪಾವಗಡ ಮತ್ತು ಮಧುಗಿರಿ ನ್ಯಾಯಾಲಯದಲ್ಲಿ ಇನ್ನೂ ವಿಚಾರಣೆ ನಡೆಯುತ್ತಿದೆ. ಬಹುತೇಕ ಆರೋಪಿಗಳ ವಿರುದ್ಧ ನ್ಯಾಯಾಲಯ ಜಾಮೀನುರಹಿತ ವಾರಂಟ್ ಹೊರಡಿಸಿದೆ. ಕೆಲವು ಆರೋಪಿಗಳು ಆಂಧ್ರಪ್ರದೇಶದ ವಿವಿಧೆಡೆ ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಪೊಲೀಸರು ಆರೋಪಿಗಳನ್ನು ಹಂತ ಹಂತವಾಗಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದಾರೆ.

ರಾತ್ರಿ ಲಾರಿಯಲ್ಲಿ ಬಂದಿದ್ದ ನಕ್ಸಲರು

ಆಂಧ್ರಪ್ರದೇಶ-ಕರ್ನಾಟಕದ ಗಡಿ ಭಾಗದಲ್ಲಿ ಹೆಚ್ಚಾಗಿದ್ದ ನಕ್ಸಲರ ಹಾವಳಿ ನಿಗ್ರಹಿಸಲು ನಕ್ಸಲ್ ನಿಗ್ರಹ ಪಡೆ ವೆಂಕಟಮ್ಮನಹಳ್ಳಿಯಲ್ಲಿ ಬಿಡಾರ ಹೂಡಿತ್ತು. 2005ರ ಫೆಬ್ರವರಿ 11ರಂದು ರಾತ್ರಿ ಲಾರಿಯಲ್ಲಿ ಬಂದಿಳಿದ ನಕ್ಸಲರ ಗುಂಪು ವೆಂಕಟಮ್ಮನಹಳ್ಳಿ ಶಾಲೆಯ ಆವರಣದಲ್ಲಿದ್ದ ಪೊಲೀಸ್ ಕ್ಯಾಂಪ್ ಮೇಲೆ ಏಕಾಏಕಿ ದಾಳಿ ನಡೆಸಿತ್ತು.

ಕ್ಯಾಂಪ್‌ಗೆ ನುಗ್ಗಿದ ನಕ್ಸಲೀಯರು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ದೋಚಿದ ನಂತರ ಪೊಲೀಸರ ಮೇಲೆ ಗುಂಡಿನ ಮಳೆಗರೆದಿದ್ದರು. ದಾಳಿಯಲ್ಲಿ ಏಳು ಪೊಲೀಸರು ಮತ್ತು ಒಬ್ಬ ನಾಗರಿಕ ಸ್ಥಳದಲ್ಲಿಯೇ ಮೃತಪಟ್ಟಿದ್ದರು.

ಪೊಲೀಸರು ನ್ಯಾಯಾಲಯಕ್ಕೆ ಹೊಸದಾಗಿ ಸಲ್ಲಿಸಿದ್ದ ದೋಷಾರೋಪ ಪಟ್ಟಿಯಲ್ಲಿ 42 ಆರೋಪಿಗಳನ್ನು ಹೆಸರಿಸಲಾಗಿತ್ತು. ಈ ಪ್ರಕರಣದ 11ನೇ ಆರೋಪಿ, ಕ್ರಾಂತಿಕಾರಿ ಗಾಯಕ ಗದ್ದರ್ 2019ರ ನವೆಂಬರ್‌ನಲ್ಲಿ ಪಾವಗಡ ನ್ಯಾಯಾಲಯಕ್ಕೆ ಹಾಜರಾಗಿದ್ದರು. ಇತ್ತೀಚೆಗೆ ಅವರು ಮೃತಪಟ್ಟಿದ್ದಾರೆ. ಪ್ರಕರಣದ ಮತ್ತೊಬ್ಬ ಆರೋಪಿ ವರವರರಾವ್ ಅವರನ್ನು ಮಹಾರಾಷ್ಟ್ರದ ಜೈಲಿನಿಂದ ಕರೆತಂದು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು.

ನಿಧನವಾರ್ತೆ

ಕೆ.ವಿ.ಗುರುಸ್ವಾಮಿ



ಬೆಂಗಳೂರು: ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್‌ನ (ಟಿಪಿಎಂಎಲ್) ಸಾರಿಗೆ ವಿಭಾಗದ ನಿವೃತ್ತ ಚಾಲಕ ಕೆ.ವಿ ಗುರುಸ್ವಾಮಿ (95) ಭಾನುವಾರ ನಿಧನರಾದರು. ಅವರಿಗೆ ಪತ್ನಿ, ಐವರು ಪುತ್ರಿಯರು ಇದ್ದಾರೆ.

ಟಿಪಿಎಂಎಲ್ ಸಂಸ್ಥಾಪಕರಾದ ಕೆ.ಎನ್.ಗುರುಸ್ವಾಮಿ ಅವರಿಗೆ ಕಾರು ಚಾಲಕರಾಗಿ ಕೆ.ವಿ. ಗುರುಸ್ವಾಮಿ ಅವರು ದೀರ್ಘ ಕಾಲದವರೆಗೆ ಕಾರ್ಯನಿರ್ವಹಿಸಿದ್ದರು.

ಮೃತರ ಅಂತ್ಯಕ್ರಿಯೆ ಭಾನುವಾರ ಸಂಜೆ ಬನಶಂಕರಿ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ₹750 ಕೋಟಿ ಬಿಡುಗಡೆ • ಇನ್ನೂ ಅಂತಿಮವಾಗದ ಕ್ರಿಯಾ ಯೋಜನೆ

‘ಕಲ್ಯಾಣ’ ಅಭಿವೃದ್ಧಿ: ವೆಚ್ಚವಾಗದ ನಿಧಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯ ಸರ್ಕಾರ ಕಲ್ಯಾಣ ಕರ್ನಾಟಕ ಭಾಗದ ಸರ್ವಾಂಗೀಣ ಅಭಿವೃದ್ಧಿ ಉದ್ದೇಶದಿಂದ 'ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ'ಗೆ (ಕೆಕೆಆರ್‌ಡಿಬಿ) ಕೋಟ್ಯಂತರ ರೂಪಾಯಿ ಅನುದಾನ ನೀಡಿದರೂ ಕಾಮಗಾರಿಗಳ ಕ್ರಿಯಾ ಯೋಜನೆ ಅನುಮೋದನೆ, ಅಂದಾಜು ಪಟ್ಟಿ ತಯಾರಿ ಮತ್ತು ಟೆಂಡರ್ ಪ್ರಕ್ರಿಯೆ ವಿಳಂಬವೂ ಸೇರಿದಂತೆ ನಾನಾ ಕಾರಣಗಳಿಂದ ನಿರೀಕ್ಷೆಯಂತೆ ವೆಚ್ಚ ಆಗಿಲ್ಲ.

ಪ್ರಸಕ್ತ ಸಾಲಿನಲ್ಲಿಯೂ (2023–24) ಕೆಕೆಆರ್‌ಡಿಬಿಗೆ ಸರ್ಕಾರ ₹3 ಸಾವಿರ ಕೋಟಿ ಅನುದಾನ ಮೀಸಲಿಟ್ಟಿದೆ. ಈ ಮೊತ್ತದಲ್ಲಿ ₹750 ಕೋಟಿಯನ್ನು ಆರ್ಥಿಕ ಇಲಾಖೆಯು 2023ರ ಡಿಸೆಂಬರ್‌ನಲ್ಲಿ ಬಿಡುಗಡೆ ಮಾಡಿದೆ. ಆದರೆ, ಕೆಲವು ಜಿಲ್ಲೆಗಳಲ್ಲಿ ಡಿಸೆಂಬರ್ ಅಂತ್ಯವಾದರೂ ಇನ್ನೂ ಪ್ರಸಕ್ತ ವರ್ಷದ ಕಾಮಗಾರಿಗಳ ಕ್ರಿಯಾ ಯೋಜನೆ ಅಂತಿಮಗೊಂಡಿಲ್ಲ.

ವಿಧಾನಸಭೆ ಚುನಾವಣೆಯ ಪ್ರಚಾರದ ವೇಳೆ ನೀಡಿದ್ದ ಭರವಸೆಯಂತೆ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ₹5 ಸಾವಿರ ಕೋಟಿಯನ್ನು ಜುಲೈನಲ್ಲಿ ಮಂಡಿಸಿದ್ದ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದರು. ಅಲ್ಲದೆ, ಕಲಬುರಗಿಯಲ್ಲಿ ಕಳೆದ ಸೆ. 17ರಂದು ಮಾತನಾಡಿದ್ದ ಮುಖ್ಯಮಂತ್ರಿ, ಕಲ್ಯಾಣ ಕರ್ನಾಟಕದ ಭಾಗದ ಬೆಳವಣಿಗೆಗೆ ನೀಲನಕ್ಷೆ ಸಿದ್ಧಪಡಿಸಲು ಸೂಚಿಸಲಾಗಿದ್ದು, ನಕ್ಷೆ ತಯಾರಾಗುತ್ತಿದೆ ಎಂದಿದ್ದರು.

ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಕಾರ್ಯದರ್ಶಿ ಮನೋಜ್ ಜೈನ್ ಅವರ ಅಧ್ಯಕ್ಷತೆಯಲ್ಲಿ ಕಳೆದ ಡಿ. 27ರಂದು ಕೆಕೆಆರ್‌ಡಿಬಿ ಪ್ರಗತಿ ಪರಿಶೀಲನೆ ಕಲಬುರಗಿಯಲ್ಲಿ ನಡೆದಿದೆ. ವ್ಯಾಪ್ತಿಯ ಎಲ್ಲ ಜಿಲ್ಲೆಯ ಜಿಲ್ಲಾಧಿಕಾರಿಗಳು ಮೈಕ್ರೋ ಹಾಗೂ ಮ್ಯಾಕ್ರೋ ಯೋಜನೆಯ ಕ್ರಿಯಾ ಯೋಜನೆಗಳನ್ನು ಜ. 10ರ ಒಳಗೆ ಕಡ್ಡಾಯವಾಗಿ ಮಂಡಳಿಗೆ ಸಲ್ಲಿಸುವಂತೆ ಸೂಚಿಸಿದ್ದಾರೆ. ಪ್ರಗತಿ ಕುಂಠಿತವಾಗಲು ಕಾರಣರಾಗುವ ಅಧಿಕಾರಿಗಳು, ಎಂಜಿನಿಯರ್‌ಗಳ ವಿವರಗಳನ್ನು ಪಡೆದು ಸೂಕ್ತ ಕ್ರಮ ತೆಗೆದುಕೊಳ್ಳಲು ಮುಖ್ಯಮಂತ್ರಿ ಮತ್ತು ಮುಖ್ಯ ಕಾರ್ಯದರ್ಶಿಗೆ ಕಳುಹಿಸಲಾಗುವುದು ಎಂದೂ ಎಚ್ಚರಿಕೆ ನೀಡಿದ್ದಾರೆ ಎಂದು ಮಂಡಳಿಯ ಮೂಲಗಳು ತಿಳಿಸಿವೆ.

ಶೇ 30ರಷ್ಟು ಮಾತ್ರ ವೆಚ್ಚ: ಹಿಂದಿನ ಸಾಲಿನಲ್ಲಿ ವೆಚ್ಚವಾಗದ ₹2,655.89 ಕೋಟಿ ಕೆಕೆಆರ್‌ಡಿಬಿ ಖಾತೆಯಲ್ಲಿದೆ. ಪ್ರಸಕ್ತ ಸಾಲಿನ ನವೆಂಬರ್ ಅಂತ್ಯದವರೆಗೆ ಈ ವ್ಯಾಪ್ತಿಯ ಏಳು (ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ) ಜಿಲ್ಲೆಗಳಿಗೆ ಒಟ್ಟು ₹2,113.81 ಕೋಟಿ ಅನುದಾನ ಹಂಚಿಕೆ ಮಾಡಲಾಗಿದ್ದು, ಅದರಲ್ಲಿ ₹642.33 ಕೋಟಿ (ಶೇ 30) ಮಾತ್ರ ವೆಚ್ಚವಾಗಿದೆ.

ಕಳೆದ ಸಾಲಿನಲ್ಲಿ (2022–23) ವೆಚ್ಚ ಮಾಡಲು, ಅದಕ್ಕೂ ಹಿಂದಿನ ಸಾಲಿನ ಬಾಕಿ ₹783.59 ಕೋಟಿ ಮತ್ತು ಬಿಡುಗಡೆಯಾದ ₹2,900 ಕೋಟಿ ಸೇರಿ ಒಟ್ಟು ₹ 3,683.59 ಕೋಟಿ ಅನುದಾನ ಲಭ್ಯ ಇತ್ತು. ಆ ಸಾಲಿನಲ್ಲಿ ಮೈಕ್ರೋ ಯೋಜನೆಗಳಡಿ ನಿಗದಿಪಡಿಸಿದ್ದ ಕ್ರಿಯಾ ಯೋಜನೆಗಳಿಗೆ ₹1,500 ಕೋಟಿಯಲ್ಲಿ ₹786.09 (ಶೇ 52) ಕೋಟಿ ವೆಚ್ಚವಾಗಿದೆ. ಮ್ಯಾಕ್ರೋ ಯೋಜನೆಗಳಡಿ ₹1,400 ಕೋಟಿಯಲ್ಲಿ ವೆಚ್ಚವಾಗಿರುವುದು ₹241.61 ಕೋಟಿ (ಶೇ 17) ಮಾತ್ರ.

ಹೀಗೆ ಒಟ್ಟು ಕೇವಲ ₹1,027.70 ಕೋಟಿ (ಶೇ 27.89) ವೆಚ್ಚವಾಗಿತ್ತು.

ಈ ಬಗ್ಗೆ 'ಪ್ರಜಾವಾಣಿ' ಜೊತೆ ಮಾತನಾಡಿದ ಕೆಕೆಆರ್‌ಡಿಬಿ ಕಾರ್ಯದರ್ಶಿ ಎಂ. ಸುಂದರೇಶ್ ಬಾಬು, 'ಪ್ರಸಕ್ತ ಸಾಲಿನ ಕ್ರಿಯಾ ಯೋಜನೆಗೆ ಕಳೆದ ನ. 28ರಂದು ಸರ್ಕಾರದಿಂದ ಅನುಮೋದನೆ ಸಿಕ್ಕಿದೆ. ಜಿಲ್ಲಾಮಟ್ಟದಲ್ಲಿ ತಕ್ಷಣ ಕ್ರಿಯಾಯೋಜನೆಗಳನ್ನು ತಯಾರಿಸಿ ಮಂಡಳಿಯಿಂದ ಅನುಮೋದನೆ ಪಡೆದು ತ್ವರಿತವಾಗಿ ಕಾಮಗಾರಿಗಳಿಗೆ ಟೆಂಡರ್ ಕರೆದು ಅನುಷ್ಠಾನಗೊಳಿಸಲು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದರು.

'ವಿಧಾನಸಭೆ ಚುನಾವಣೆ ಮತ್ತು ಕಾಮಗಾರಿಗಳ ಅನುಷ್ಠಾನಕ್ಕೆ ನಿರ್ಬಂಧ ಇದ್ದುದರಿಂದ ನಿರೀಕ್ಷೆಯಂತೆ ಪ್ರಗತಿ ಸಾಧ್ಯವಾಗಿಲ್ಲ. ಅಲ್ಲದೆ, ಹೊಸ ಸರ್ಕಾರ ಜುಲೈನಲ್ಲಿ ಬಜೆಟ್ ಮಂಡಿಸಿದ್ದು, ಆಗಸ್ಟ್‌ನಲ್ಲಿ ಹೊಸ ಮಂಡಳಿ ಅಸ್ತಿತ್ವಕ್ಕೆ ಬಂದಿದೆ. ಆದರೂ, ಕಳೆದ ಮೂರು ತಿಂಗಳ ಅವಧಿಯಲ್ಲಿ ₹500 ಕೋಟಿ ವೆಚ್ಚವಾಗಿದೆ' ಎಂದರು.

> ಡಿಸೆಂಬರ್‌ನಲ್ಲಿ ₹750 ಕೋಟಿ ಬಿಡುಗಡೆಯಾಗಿದೆ. ಮಂಡಳಿಯ ಒಟ್ಟು ಅನುದಾನ ನಷ್ಟ ಆಗುವುದಿಲ್ಲ. ಶೀಘ್ರ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುವುದು
> ಎಂ. ಸುಂದರೇಶ್ ಬಾಬು, ಕಾರ್ಯದರ್ಶಿ, ಕೆಕೆಆರ್‌ಡಿಬಿ

ಕೆಕೆಆರ್‌ಡಿಬಿ– ನವೆಂಬರ್ ಅಂತ್ಯದವರೆಗಿನ ಪ್ರಗತಿ

ಜಿಲ್ಲೆ	ಅನುದಾನ (₹ ಕೋಟಿಗಳಲ್ಲಿ)	ವೆಚ್ಚ	ಶೇ
ಬೀದರ್	238.45	97.25	41
ಕಲಬುರಗಿ	631.16	262.19	42
ಯಾದಗಿರಿ	180.12	57.77	32
ರಾಯಚೂರು	467.43	89.11	19
ಕೊಪ್ಪಳ	169.70	40.71	24
ಬಳ್ಳಾರಿ	198.55	33.03	17
ವಿಜಯನಗರ	211.96	53.29	25

ಮುಖ್ಯಮಂತ್ರಿ ಸಭೆ ನಾಳೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚಿಸಲು ಗೃಹ ಕಚೇರಿ ಕೃಷ್ಣದಲ್ಲಿ ಸಂಬಂಧಪಟ್ಟವರ ಸಭೆಯನ್ನು ಮಂಗಳವಾರ (ಜ. 9) ಬೆಳಿಗ್ಗೆ 11 ಗಂಟೆಗೆ ನಡೆಸಲಿದ್ದಾರೆ. ಸಭೆಗೆ ಹಾಜರಾಗುವಂತೆ ಆ ಭಾಗದ ಜಿಲ್ಲಾ ಉಸ್ತುವಾರಿ ಸಚಿವರು, ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ. ಸುಧಾಕರ್, ಮುಖ್ಯಮಂತ್ರಿಯ ಸಲಹೆಗಾರ (ಆರ್ಥಿಕ) ಬಸವರಾಜ ರಾಯರೆಡ್ಡಿ, ಮುಖ್ಯಮಂತ್ರಿಯ ಸಲಹೆಗಾರ (ನೀತಿ ಮತ್ತು ಕಾರ್ಯಕ್ರಮ) ಬಿ.ಆರ್. ಪಾಟೀಲ, ಕೆಕೆಆರ್‌ಡಿಬಿ ಅಧ್ಯಕ್ಷ ಅಜಯ್ ಸಿಂಗ್, ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಆಹ್ವಾನ ನೀಡಲಾಗಿದೆ. ಅಲ್ಲದೆ, ವಿಡಿಯೊ ಸಂವಾದದ ಮೂಲಕ ಭಾಗವಹಿಸುವಂತೆ ಆ ಭಾಗದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ಸೂಚಿಸಲಾಗಿದೆ.

ಸುದ್ದಿ 2 ನಿಮಿಷ


ರಾಜ್ಯದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ: ಶಾಸಕ ಬೊಮ್ಮಾಯಿ

ಹುಬ್ಬಳ್ಳಿ: 'ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ನಿರ್ಮಾಣ ಮಾಡಿದ್ದು, ಜನರಲ್ಲಿ ಭಯದ ವಾತಾವರಣ ಸೃಷ್ಟಿಸಿದೆ' ಎಂದು ಶಾಸಕ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಇದು ವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆಲೆ ನೀಡದ ದಬ್ಬಾಳಿಕೆ ಸರ್ಕಾರವಾಗಿದೆ. ಅನ್ಯಾಯದ ವಿರುದ್ಧ ಧ್ವನಿ ಎತ್ತಿದರೆ ಪ್ರಕರಣ ದಾಖಲಿಸಿ, ಜನರ ಧ್ವನಿ ಹತ್ತಿಕ್ಕಲು ಮುಂದಾಗುತ್ತಿದೆ' ಎಂದು ದೂರಿದರು.

'ಶ್ರೀಕಾಂತ ಪೂಜಾರಿ ವಿರುದ್ಧ ಯಾವುದೇ ಪ್ರಕರಣ ಇಲ್ಲದಿದ್ದರೂ ಅವರನ್ನು ಬಂಧಿಸಲಾಗಿತ್ತು. ಗಲಭೆ ಪ್ರಕರಣಕ್ಕೆ ಸಂಬಂಧಿಸಿಯೂ ಅವರ ಮೇಲೆ ಪ್ರಕರಣಗಳಿಲ್ಲ. ಪ್ರಕರಣಗಳಿಲ್ಲದೆ ಬಂಧಿಸಿ ಜೈಲಿಗೆ ಕಳುಹಿಸುವುದು ತುರ್ತು ಪರಿಸ್ಥಿತಿಯಲ್ಲಿ ಮಾತ್ರ ಆಗುತ್ತದೆ. ಅದೇ ಮಾದರಿ ಈಗ ನಡೆಯುತ್ತಿದೆ' ಎಂದರು.

ಚಿಂತನ ಮಂಥನ ಸಭೆ ನಾಳೆ: 'ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಆಗುವುದಿಲ್ಲ ಎನ್ನುವ ಕಾಂಗ್ರೆಸ್ ಕನಸು ಭಗ್ನವಾಗಿದೆ. ಅದನ್ನು ಅರಗಿಸಿಕೊಳ್ಳಲು ಆಗದೆ, ತನ್ನ ಆಡಳಿತವಿರುವ ಎಲ್ಲ ರಾಜ್ಯಗಳಲ್ಲೂ ಹೀಗೆ ಗದ್ದಲ ಎಬ್ಬಿಸುತ್ತಿದೆ. ಅಧಿಕಾರದ ಮದ ಹಾಗೂ ಅಹಂಕಾರದ ವರ್ತನೆಯನ್ನು ಜನ ಸಹಿಸುವುದಿಲ್ಲ. ಹೀಗಾಗಿಯೇ ಜನರು ತುರ್ತು ಪರಿಸ್ಥಿತಿ ವಿರುದ್ಧ ಸಿಡಿದೆದ್ದು ಬದಲಾವಣೆ ತಂದಿದ್ದರು. ಜನವಿರೋಧಿ, ಅಭಿವೃದ್ಧಿ ಶೂನ್ಯ ಆಡಳಿತ ವೈಫಲ್ಯ ಮುಚ್ಚಿಕೊಳ್ಳಲು ಹೀಗೆ ಮಾಡುತ್ತಿದ್ದಾರೆ. ಸೋಮವಾರ ಚಿಂತನ ಮಂಥನ ಸಭೆ ನಡೆಯಲಿದ್ದು, ಅಲ್ಲಿ ಈ ಎಲ್ಲ ವಿಷಯಗಳ ಕುರಿತು ಚರ್ಚಿಸಲಾಗುವುದು' ಎಂದು ಬೊಮ್ಮಾಯಿ ತಿಳಿಸಿದರು.



ಪುತ್ತಿಗೆ ಶ್ರೀಗಳ ಪುರಪ್ರವೇಶ ಇಂದು

ಉಡುಪಿ: ಪುತ್ತಿಗೆ ಮಠದ ಪರ್ಯಾಯ ಮಹೋತ್ಸವ ಪೂರ್ವಭಾವಿಯಾಗಿ ಭಾವಿ ಪರ್ಯಾಯ ಪೀಠಾಧಿಪತಿಗಳಾದ ಸುಗುಣೇಂದ್ರತೀರ್ಥ ಸ್ವಾಮೀಜಿ ಹಾಗೂ ಸುಶ್ರೀಂದ್ರ ತೀರ್ಥ ಸ್ವಾಮೀಜಿ ಪುರಪ್ರವೇಶ ಕಾರ್ಯಕ್ರಮ ಸೋಮವಾರ (ಜ.8) ನಡೆಯಲಿದೆ.

ಮಧ್ಯಾಹ್ನ 3.30ಕ್ಕೆ ನಗರದ ಜೋಡುಕಟ್ಟೆಯ ಬಳಿ ಉಭಯ ಯತಿಗಳಿಗೆ ಅದ್ದೂರಿ ಸ್ವಾಗತ ಕೋರಿ ಮೆರವಣಿಗೆಯ ಮೂಲಕ ರಥಬೀದಿಗೆ ಕರೆತರಲಾಗುವುದು. ಸಂಜೆ ಜಿಲ್ಲಾಡಳಿತದ ವತಿಯಿಂದ ಶ್ರೀಗಳಿಗೆ ಪೌರಸನ್ಮಾನ ಆಯೋಜಿಸಲಾಗಿದೆ. ಪುರಪ್ರವೇಶ ಮೆರವಣಿಗೆಯಲ್ಲಿ ನಾಡಿನ ಹಲವು ಸಾಂಸ್ಕೃತಿಕ ಕಲಾತಂಡಗಳು ಭಾಗವಹಿಸಲಿವೆ. 18ರಂದು ಸುಗುಣೇಂದ್ರತೀರ್ಥ ಶ್ರೀಗಳು ಸರ್ವಜ್ಞ ಪೀಠಾರೋಹಣ ಮಾಡಲಿದ್ದಾರೆ. ಅಂದಿನಿಂದ ಮುಂದಿನ ಎರಡು ವರ್ಷಗಳ ಅವಧಿಗೆ ಪುತ್ತಿಗೆ ಮಠದ ಪರ್ಯಾಯ ನಡೆಯಲಿದೆ.



‘ಮಂದಿರ’ ಭೇಟಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹಾರಾಷ್ಟ್ರದ ಶಿರಡಿಯ ಶ್ರೀ ಸಾಯಿಬಾಬಾ ಮಂದಿರಕ್ಕೆ ಭಾನುವಾರ ಭೇಟಿ ನೀಡಿದರು. ಸಚಿವ ಎಚ್‌.ಕೆ. ಪಾಟೀಲ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ಮಹಾರಾಷ್ಟ್ರ ಎಐಸಿಸಿಯ ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ರಮೇಶ್ ಚನ್ನಿತ್ತಲ ಅವರೂ ದರ್ಶನ ಪಡೆದರು

–ಡಿಐಪಿಆರ್ ಚಿತ್ರ

ಬೆಳಗಾವಿ: ಅಕ್ಕ– ತಮ್ಮನ ಅಪಹರಿಸಿ ಥಳಿತ

ಏಳು ಮಂದಿಯ ಬಂಧನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಕೋಟೆ ಕೆರೆಯ ಉದ್ಯಾನದಲ್ಲಿ ಶನಿವಾರ ಮಾತನಾಡುತ್ತ ಕುಳಿತಿದ್ದ ಅಕ್ಕ–ತಮ್ಮನನ್ನು ಪ್ರೇಮಿಗಳೆಂದು ತಿಳಿದು ಅಪಹರಿಸಿಕೊಂಡು ಹೋಗಿ ಥಳಿಸಿದ ಪ್ರಕರಣಕ್ಕೆ ಸಂಬಂಧಿಸಿ ಏಳು ಮಂದಿಯನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ. ಇಬ್ಬರು ಬಾಲಕರನ್ನು ವಶಕ್ಕೆ ಪಡೆದು ರಿಮ್ಯಾಂಡ್ ಹೋಮ್‌ಗೆ ಸೇರಿಸಲಾಗಿದೆ.

ನಗರದ ನಿವಾಸಿಗಳಾದ ಮೊಹಮ್ಮದ್ ಹುಸೇನ್ ಅಲಿಯಾಸ್ ನೂರಅಹ್ಮದ್ ಇನಾಮದಾರ (22), ಅತೀಫ್ ಅಹ್ಮದ್ ಶೇಖ್ (22), ಮೊಹಮ್ಮದ್ ಅಮನ್ ಚಾಕುಬಸವಾರ (27), ಸೈಫ್ ಅಲಿ ಮಗದುಮ್ (27), ಉಮರ್ ಸಾದಿಕ್ ಬಡೇಘರ (19), ರಿಹಾನ್ ರೋಟಿವಾಲೆ (19), ಅಜಾನ್ ಕಾಲಕುಂದ್ರಿ (19) ಬಂಧಿತರು. 17 ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಆರೋಪಿಗಳನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದೊಯ್ದು ಸ್ಥಳ ಮಹಜರು ನಡೆಸಿದ್ದೇವೆ. ಶೆಡ್ ಮಾಲೀಕರ ವಿಚಾರಣೆ ನಡೆಸಿದ್ದು, ಎಲ್ಲ ಆಯಾಮಗಳಿಂದ ತನಿಖೆ ಮುಂದುವರಿಸಿದ್ದೇವೆ' ಎಂದು ನಗರ ಪೊಲೀಸ್ ಕಮಿಷನರ್ ಎಸ್‌.ಎನ್‌.ಸಿದ್ರಾಮಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಬೆಳಗಾವಿಯ ಕೋಟೆ ಕೆರೆಯ ಉದ್ಯಾನದಲ್ಲಿ ಶನಿವಾರ ಸಂಜೆ ಯಮನಾಪುರದ ಸಚಿನ್ ಲಮಾಣಿ (22) ಹಾಗೂ ಮುಸ್ಕಾನ್ ಪಟೇಲ್ (23) ಮಾತನಾಡುತ್ತ ಕುಳಿತಿದ್ದರು. ಇಬ್ಬರೂ ಯುವನಿಧಿಗೆ ಅರ್ಜಿ ಸಲ್ಲಿಸಲು ಬೆಳಗಾವಿಗೆ ಬಂದಿದ್ದರು. ವರಸೆಯಲ್ಲಿ ಅಕ್ಕ–ತಮ್ಮಂದಿರಾದ ಇವರನ್ನು ಪ್ರೇಮಿಗಳೆಂದು ತಿಳಿದ ಗುಂಪು ಅವರ ಮೇಲೆ ತೀವ್ರವಾಗಿ ಹಲ್ಲೆ ನಡೆಸಿತ್ತು. ಹತ್ತಿರದ ಶೆಡ್‌ವೊಂದಕ್ಕೆ ಕರೆದೊಯ್ದು, ಕೂಡಿಹಾಕಿ, ಮನಸೋಇಚ್ಛೆ ಥಳಿಸಿತ್ತು. ಗಾಯಗೊಂಡ ಇಬ್ಬರನ್ನೂ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು.

‘ಮುಸ್ಲಿಮರಿಂದ ಅನೈತಿಕ ಪೊಲೀಸ್‌ಗಿರಿ’

'ಬೆಳಗಾವಿಯಲ್ಲಿ ಮುಸ್ಲಿಂ ಯುವಕರು ಅನೈತಿಕ ಪೊಲೀಸ್‌ಗಿರಿ ನಡೆಸಿರುವುದು ಆಶ್ಚರ್ಯ ತಂದಿದೆ. ಯುವಕನಿಗೆ ಕಬ್ಬಿಣದ ರಾಡ್‌ನಿಂದ ಹೊಡೆಯಲಾಗಿದೆ. ಈ ಬಗ್ಗೆ ತನಿಖೆ ಕೈಗೊಳ್ಳಲು ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಬೆಳಗಾವಿಗೆ ತನಿಖಾ ದಳ ಕಳುಹಿಸಬೇಕು' ಎಂದು ಬಿಜೆಪಿ ಮುಖಂಡ ಕೆ.ಎಸ್‌.ಈಶ್ವರಪ್ಪ ಆಗ್ರಹಿಸಿದರು.

ಹಲ್ಲೆಗೊಳಗಾಗಿ ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಯುವಕ ಮತ್ತು ಯುವತಿಯನ್ನು ಭಾನುವಾರ ಭೇಟಿಯಾದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. 'ರಾಜ್ಯದಲ್ಲಿ ಮುಸ್ಲಿಂ ಗೂಂಡಾಗಳು ಹಲ್ಲೆ ಮಾಡುತ್ತಿದ್ದಾರೆ. ನಿತ್ಯ ಇಂಥ ಘಟನೆ ನಡೆಯುತ್ತಲೇ ಇವೆ. ಹಿಂದೂ-ಮುಸ್ಲಿಮರ ಮಧ್ಯೆ ಗಲಾಟೆ ನಡೆಸಿ, ಚುನಾವಣೆ ಎದುರಿಸಲು ಕಾಂಗ್ರೆಸ್ ನವರು ತೀರ್ಮಾನಿಸಿದ್ದಾರೆ' ಎಂದು ಆರೋಪಿಸಿದರು.

ಲೈಂಗಿಕ ಕಿರುಕುಳ: ಮುಡಾ ಆಯುಕ್ತರ ವಿರುದ್ಧ ದೂರು

ಮಂಗಳೂರು: ನಗರದ ಉರ್ವಸ್ಟೋರ್‌ನಲ್ಲಿರುವ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಕಚೇರಿಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಸಿಬ್ಬಂದಿಯೊಬ್ಬರು ಪ್ರಾಧಿಕಾರದ ಆಯುಕ್ತ ಮನ್ಸೂರ್ ಅಲಿ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡಿದ್ದಾರೆ.

'ಮುಡಾ ಆಯುಕ್ತರಾದ ಮನ್ಸೂರು ಅಲಿ ಲೈಂಗಿಕ, ಮಾನಸಿಕ, ಹಾಗೂ ದೈಹಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ಪ್ರಾಧಿಕಾರದ ಮಹಿಳಾ ಸಿಬ್ಬಂದಿಯೊಬ್ಬರು ಶುಕ್ರವಾರ ದೂರು ನೀಡಿದ್ದಾರೆ. ಆರೋಪಿ ವಿರುದ್ಧ ಐಪಿಸಿ ಸೆಕ್ಷನ್ 354, 354 ಎ ಅಡಿ ಉರ್ವ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಈ ಪ್ರಕರಣದ ತನಿಖೆ ನಡೆಯುತ್ತಿದೆ' ಎಂದು ನಗರ ಕಮಿಷನರ್ ಅನುಪಮ್ ಅಗರ್ವಾಲ್ ಹೇಳಿದ್ದಾರೆ.

ಶಿರಸಿ: ಕಾರ್ಮಿಕರನ್ನು ಬಳಸಿ ಶೌಚಗುಂಡಿ ಸ್ವಚ್ಛ

ಪ್ರಜಾವಾಣಿ ವಾರ್ತೆ

ಶಿರಸಿ: ಇಲ್ಲಿನ ನಗರಸಭೆ ವ್ಯಾಪ್ತಿಯಲ್ಲಿ ಕಾರ್ಮಿಕರನ್ನು ಬಳಸಿ ಶೌಚಗುಂಡಿ ಸ್ವಚ್ಛಗೊಳಿಸಿದ ಘಟನೆಯ ವಿಡಿಯೊ ತುಣುಕೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಪ್ರಕರಣ ಸಂಬಂಧ ಕಂದಾಯ ಅಧಿಕಾರಿಗಳು ಭಾನುವಾರ ಸ್ಥಳಕ್ಕೆ ಭೇಟಿ ನೀಡಿದ್ದಾರೆ.

ನಗರದ ಭಗತ್‌ಸಿಂಗ್ ರಸ್ತೆಯ ಸಮೀಪ ಹಳೆ ಕಟ್ಟಡ ತೆರವು ಮಾಡಿ ಹೊಸ ಕಟ್ಟಡ ನಿರ್ಮಿಸಲಾಗುತ್ತಿದೆ. ಶೌಚದ ಹಳೆಯ ಗುಂಡಿಯನ್ನು ಕಾರ್ಮಿಕರಿಬ್ಬರು ಶನಿವಾರ ಸ್ವಚ್ಛಗೊಳಿಸಿದ್ದಾರೆ. ಅಲ್ಲದೇ, ಗುಂಡಿಯಿಂದ ಹೊರತೆಗೆದ ತ್ಯಾಜ್ಯವನ್ನು ತಲೆಯ ಮೇಲೆ ಹೊತ್ತು ಸಮೀಪದ ವಾಹನಕ್ಕೆ ಹಾಕಿದ್ದಾರೆ. ಈ ದೃಶ್ಯವನ್ನು ವ್ಯಕ್ತಿಯೊಬ್ಬರು ಮೊಬೈಲ್‌ನಲ್ಲಿ ವಿಡಿಯೊ ಮಾಡಿ ತಹಶೀಲ್ದಾರ್ ಅವರಿಗೆ ದೂರು ನೀಡಿದ್ದಾರೆ.

ಪ್ರಕರಣ ಸಂಬಂಧ ತಹಶೀಲ್ದಾರ್ ಶ್ರೀಧರ ಮುಂದಲಮನಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದು, 'ಶೌಚಾಲಯದ ಗುಂಡಿಯನ್ನು ಕಾರ್ಮಿಕರಿಂದ ಸ್ವಚ್ಛಗೊಳಿಸಿದ ವಿಷಯಕ್ಕೆ ಸಂಬಂಧಿಸಿ ಸ್ಥಳಕ್ಕೆ ಕಂದಾಯ ಅಧಿಕಾರಿಯನ್ನು ಕಳುಹಿಸಿ ಪ್ರಾಥಮಿಕ ವರದಿಯನ್ನು ಈಗಾಗಲೇ ಪಡೆಯಲಾಗಿದೆ. ಈ ಬಗ್ಗೆ ನಗರಸಭೆಯಿಂದಲೂ ವರದಿ ನೀಡುವಂತೆ ಪೌರಾಯುಕ್ತರಿಗೆ ಸೂಚಿಸಲಾಗಿದೆ. ಉಪ ವಿಭಾಗಾಧಿಕಾರಿ ಅಧ್ಯಕ್ಷತೆಯ ಸಫಾಯಿ ಕರ್ಮಚಾರಿ ಆಯೋಗಕ್ಕೆ ಈ ಬಗ್ಗೆ ಸಮಗ್ರ ವರದಿ ಸಲ್ಲಿಸಲಾಗುವುದು' ಎಂದರು.



ಶಿರಸಿಯಲ್ಲಿ ಕಾರ್ಮಿಕರಿಬ್ಬರು ಶೌಚಗುಂಡಿ ಸ್ವಚ್ಛಗೊಳಿಸಿದ ದೃಶ್ಯ

ರಮೇಶ ಜಾರಕಿಹೊಳಿ ಸೇರಿ ಮೂವರ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ...

'ಸಾಲಕ್ಕಾಗಿ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ಗೆ ಅರ್ಜಿ ಸಲ್ಲಿಸಿದ್ದರು. ಬ್ಯಾಂಕ್ ಷರತ್ತಿಗೆ ಅನುಗುಣವಾಗಿ 2013ರ ಜುಲೈ 12ರಿಂದ 2017ರ ಮಾರ್ಚ್ 31ರ ನಡುವೆ ಕರ್ನಾಟಕ ಸಹಕಾರಿ ಅಪೆಕ್ಸ್ ಬ್ಯಾಂಕ್ ಹಾಗೂ ಅದರ ಸಮೂಹ ಬ್ಯಾಂಕ್‌ಗಳಾದ ವಿಜಯಪುರ, ತುಮಕೂರು, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಿಂದ ಒಟ್ಟು ₹232.88 ಕೋಟಿ ಸಾಲ ಪಡೆದುಕೊಂಡಿದ್ದಾರೆ. ಅಸಲು, ಬಡ್ಡಿಯನ್ನು ಮರು ಪಾವತಿಸದ ಕಾರಣ 2023ರ ಆ.31ಕ್ಕೆ ಬಾಕಿ ಮೊತ್ತ ₹439.7 ಕೋಟಿಗೆ ಏರಿಕೆಯಾಗಿದೆ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಬ್ಯಾಂಕ್‌ನಿಂದ ಸಾಲ ಪಡೆಯುವಾಗ ಸಾಲ ಮರುಪಾವತಿ ಆಗುವವರೆಗೂ ಬ್ಯಾಂಕಿನ ಅನುಮತಿಯಿಲ್ಲದೆ ಸೌಭಾಗ್ಯ ಲಕ್ಷ್ಮಿ ಶುಗರ್ಸ್ ಕಂಪನಿಯ ಆಡಳಿತ ಮಂಡಳಿ, ವ್ಯವಸ್ಥಾಪಕ ನಿರ್ದೇಶಕ, ನಿರ್ದೇಶಕರನ್ನು ಬದಲಿಸುವಂತಿಲ್ಲವೆಂದು ಷರತ್ತು ವಿಧಿಸಲಾಗಿತ್ತು. ಆದರೆ, ಬ್ಯಾಂಕ್‌ಗೆ ಮೋಸ ಮಾಡುವ ಉದ್ದೇಶದಿಂದ ಮಾಹಿತಿ ನೀಡದೆ ಕಂಪನಿ ಆಡಳಿತ ಮಂಡಳಿಯಲ್ಲಿ ತಮ್ಮ ಹುದ್ದೆಗಳಿಂದ ಹೊರಬಂದು ಸಂಬಂಧವಿಲ್ಲದ ವ್ಯಕ್ತಿಗಳನ್ನು ನಿರ್ದೇಶಕರನ್ನಾಗಿ ನೇಮಿಸಿದ್ದಾರೆ. ಷರತ್ತು ಉಲ್ಲಂಘಿಸಿ ಮೋಸ ಎಸಗಿದ್ದಾರೆ' ಎಂದು ದೂರಿನಲ್ಲಿ ಹೇಳಲಾಗಿದೆ.

‘ಪಿ.ಜಿ ವೈದ್ಯಕೀಯ ಪ್ರವೇಶಕ್ಕೆ ಆನ್‌ಲೈನ್ ಕೌನ್ಸೆಲಿಂಗ್ ಕಡ್ಡಾಯ’

ಒಂದನೇ ಪುಟದಿಂದ...

ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ವಿವರಗಳನ್ನು ನಮೂದಿಸುವಾಗ, ವೈದ್ಯಕೀಯ ಕಾಲೇಜುಗಳು ಪ್ರತಿ ಕೋರ್ಸ್‌ಗೆ ಶುಲ್ಕದ ಮೊತ್ತ ನಮೂದಿಸಬೇಕು, ತಪ್ಪಿದರೆ ಸೀಟ್ ಅನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗದು ಎಂದು ಈ ನಿಯಮಾವಳಿಗಳಲ್ಲಿ ಹೇಳಲಾಗಿದೆ.

ವೈದ್ಯಕೀಯ ಶಿಕ್ಷಣ ಸಂಸ್ಥೆ ಅಥವಾ ಕಾಲೇಜುಗಳು, ಈ ಹೊಸ ನಿಯಮಾವಳಿಗಳ ಅನುಷ್ಠಾನದಲ್ಲಿ ವಿಫಲವಾದಲ್ಲಿ ವಿತ್ತೀಯ ದಂಡ, ಸೀಟುಗಳ ಸಂಖ್ಯೆಯಲ್ಲಿ ಕಡಿತ ಅಥವಾ ಪ್ರವೇಶಗಳ ಸಂಪೂರ್ಣ ಸ್ಥಗಿತಗೊಳಿಸಲಾಗುವುದು ಎಂದು ನಿಯಮಾವಳಿಗಳಲ್ಲಿ ಹೇಳಲಾಗಿದೆ.

ಬಫರ್ ವಲಯಕ್ಕೆ ರಿಯಲ್ ಎಸ್ಟೇಟ್

ಒಂದನೇ ಪುಟದಿಂದ...

ಮುಳ್ಳಯ್ಯನಗಿರಿ, ಬಾಬಾ ಬುಡನ್‌ಗಿರಿ ಸೇರಿ ಚಂದ್ರದ್ರೋಣ ಪರ್ವತಶ್ರೇಣಿಗಳಿಗೆ ಹೊಂದಿಕೊಂಡಂತೆ ಈ ಕಾಫಿ ತೋಟಗಳಿವೆ. ಲೇಔಟ್ ನಿರ್ಮಿಸಲು ಗುರುತಿಸಿರುವ ಜಾಗ ಕಾಮೇನಹಳ್ಳಿ ಮೀಸಲು ಅರಣ್ಯ ಪ್ರದೇಶದಿಂದ (ಮೈಸೂರು ಎಲಿಫೆಂಟ್ ರಿಸರ್ವ್ ಎಕ್ಸ್‌ಟೆನ್ಷನ್) 900ರಿಂದ 1300 ಮೀಟರ್ ದೂರದಲ್ಲಿದೆ.

ನೈಸರ್ಗಿಕವಾಗಿ ಕಾಡಾನೆಗಳು ಓಡಾಡುವ ಪ್ರದೇಶ ಇದಾಗಿದ್ದು, ಭದ್ರಾ ಮೀಸಲು ಅರಣ್ಯ ಪ್ರದೇಶದಿಂದ 5ರಿಂದ 6 ಕಿಲೋ ಮೀಟ ರ್ ದೂರದಲ್ಲಿ ಈ ಲೇಔಟ್ ನಿರ್ಮಾಣಕ್ಕೆ ಉದ್ದೇಶಿಸಲಾಗಿದೆ ಎಂದು ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಗುರುತು ಮಾಡಿದ್ದಾರೆ.

ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಯಾವುದೇ ರಕ್ಷಿತ ಪ್ರದೇಶದ ಗಡಿಯಿಂದ 10 ಕಿಲೋ ಮೀಟರ್ ವ್ಯಾಪ್ತಿಯು ಪರಿಸರ ಸೂಕ್ಷ್ಮ ಪ್ರದೇಶ. ಉದ್ದೇಶಿತ ಜಾಗ ಕಾಮೇನಹಳ್ಳಿ ಮೀಸಲು ಅರಣ್ಯ ಮತ್ತು ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ಬಫರ್ ವ್ಯಾಪ್ತಿಗೆ ಒಳಪಡುತ್ತವೆ ಎಂದು ಕಂಪನಿಗಳಿಗೆ ಜಿಲ್ಲಾಧಿಕಾರಿ ನೀಡಿರುವ ನೋಟಿಸ್‌ನಲ್ಲಿ ತಿಳಿಸಿದ್ದಾರೆ.

ಈ ಪ್ರದೇಶದಲ್ಲಿ ಅಪರೂಪದ ಔಷಧೀಯ ಗಿಡಗಳು ಮತ್ತು ಕಾಡಾನೆ, ಹುಲಿ, ಚಿರತೆ, ಜಿಂಕೆ, ಕಡವೆ ಸೇರಿ ವಿವಿಧ ಬಗೆಯ ಪ್ರಾಣಿಗಳ ಆವಾಸ ಸ್ಥಾನವಾಗಿದೆ. ಇಂತಹ ಭೂಮಿಯನ್ನು ವಿಂಗಡಣೆ ಮಾಡಿ ಸಣ್ಣ ಸಣ್ಣ ತುಂಡುಗಳಾಗಿ ಪರಿವರ್ತಿಸುವುದರಿಂದ ವನ್ಯಜೀವಿ ಆವಾಸಕ್ಕೆ ಧಕ್ಕೆಯಾಗಲಿದೆ. ನದಿ ಮೂಲಗಳು ಮಲಿನಗೊಂಡು ನಶಿಸಿ ಹೋಗುವ ಅಪಾಯ ಇದೆ ಎಂದು ಅವರು ವಿವರಿಸಿದ್ದಾರೆ.

6 ಕಂಪನಿಗಳಿಗೆ ನೋಟಿಸ್

ಜೆಎಫ್ ಕಾಫಿ ಬೈ ದಿ ಸ್ಟ್ರೀಮ್ ಎಲ್‌ಎಲ್‌ಪಿ ವ್ಯವಸ್ಥಾಪಕ, ಪಾಲುದಾರರಾದ ಆದಿತ್ಯ, ಎಂ.ಎಸ್. ಜಯರಾಮ್, ಐಬಿಸಿ ಎಸ್ಟೇಟ್‌ನಿಂದ ಜಿಪಿಎ ಪಡೆದಿರುವ ವಿ.ಬಾರೆಟೊ, ಅಭಿಷೇಕ್ ಜಿಂದಾಲ್, ಮಹೇಂದ್ರ ಎಸ್.ಕೆ. ಅವರಿಗೆ ಜಿಲ್ಲಾಧಿಕಾರಿ ನೋಟಿಸ್ ನೀಡಿದ್ದಾರೆ.

ಕರ್ನಾಟಕ ಭೂಸುಧಾರಣಾ ಕಾಯ್ದೆಯ ಪ್ರಕಾರ ನಿಗದಿಗಿಂತ ಹೆಚ್ಚಿನ ಕೃಷಿ ಜಮೀನನ್ನು ಹೊಂದುವಂತಿಲ್ಲ. ಆದರೆ, ಕಾಫಿ ಬೆಳೆಯನ್ನು ಕಡಿಮೆ ವಿಸ್ತೀರ್ಣದಲ್ಲಿ ಸಾಗುವಳಿ ಮಾಡುವುದು ಆರ್ಥಿಕವಾಗಿ ಲಾಭದಾಯಕವಲ್ಲ ಎಂಬ ಕಾರಣಕ್ಕೆ ಈ ಕಾಯ್ದೆಯಿಂದ ವಿನಾಯಿತಿ ನೀಡಲಾಗಿದೆ.

ಕಾಫಿ ಕಾಯ್ದೆ ಪ್ರಕಾರ ಕಾಫಿ ತೋಟಗಳನ್ನು ಕೈಗಾರಿಕೆ ಎಂದು ಪರಿಗಣಿಸಲಾಗಿದೆ. ಆದರೆ, ಕರ್ನಾಟಕ ಭೂಕಂದಾಯ ಕಾಯ್ದೆ, ಕರ್ನಾಟಕ ಭೂಸುಧಾರಣಾ ಕಾಯ್ದೆಯಲ್ಲಿರುವ ಅವಕಾಶಗಳನ್ನು ದುರುಪಯೋಗ ಮಾಡಿಕೊಳ್ಳಲಾಗಿದೆ ಎಂದು ನೋಟಿಸ್‌ನಲ್ಲಿ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಈ ಜಾಗವನ್ನು ಅನ್ಯ ಉದ್ದೇಶಕ್ಕೆ ಬಳಸಬೇಕಿದ್ದರೆ ಸಂಬಂಧಪಟ್ಟ ಇಲಾಖೆಗಳ ಅನುಮತಿ ಪಡೆಯುವುದು ಅವಶ್ಯ. ಆದರೆ, ಯಾವುದೇ ಇಲಾಖೆಯಿಂದ ಅನುಮತಿ ಪಡೆಯದೆ ಸರ್ಕಾರಕ್ಕೆ ನಷ್ಟ ಉಂಟುಮಾಡಲಾಗಿದೆ. ಅಕ್ರಮವಾಗಿ ಪರಭಾರೆ ಮಾಡಲು ಮುಂದಾಗಿರುವ ಬಗ್ಗೆ ವರದಿಯಾಗಿದೆ ಎಂದಿದ್ದಾರೆ.

ಯಾವುದೇ ಪ್ರಾಧಿಕಾರದಿಂದ ಅನುಮತಿ ಪಡೆದಿದ್ದರೆ ಏಳು ದಿನಗಳೊಳಗೆ ದಾಖಲೆಗಳೊಂದಿಗೆ ಹಾಜರಾಗಬೇಕು. ಇಲ್ಲದಿದ್ದರೆ ಕಂದಾಯ ಮತ್ತು ಪರಿಸರ ಕಾಯ್ದೆಗಳ ಪ್ರಕಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಮೀನಾ ನಾಗರಾಜ್ ನೋಟಿಸ್‌ನಲ್ಲಿ ತಿಳಿಸಿದ್ದಾರೆ.

ಭಾರತೀಯ ಜೈನ್ ಮಿಲನ್ ಕಾರ್ಯಾಧ್ಯಕ್ಷ ಸುರೇಂದ್ರ ಕುಮಾರ್ ಅಭಿಮತ

ಭಾರತ ಬೆಸೆಯುವ ಶ್ರವಣಬೆಳಗೊಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಭಾರತ ಮತ್ತು ದಕ್ಷಿಣ ಭಾರತವನ್ನು ಬೆಸೆಯುವ ಕೊಂಡಿ ಶ್ರವಣಬೆಳಗೊಳ ಎಂದು ಭಾರತೀಯ ಜೈನ್ ಮಿಲನ್ ಕಾರ್ಯಾಧ್ಯಕ್ಷ ಡಿ. ಸುರೇಂದ್ರ ಕುಮಾರ್ ಹೇಳಿದರು.

ಶ್ರವಣಬೆಳಗೊಳ ಮಠದ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಬೆಂಗಳೂರು ಪುರ ಪ್ರವೇಶದ ಸಭಾಕಾರ್ಯಕ್ರಮವನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಶ್ರವಣಬೆಳಗೊಳದಲ್ಲಿ ಪ್ರತಿ 12 ವರ್ಷಕ್ಕೊಮ್ಮೆ ನಡೆಯುವ ಮಹಾಮಸ್ತಕಾಭಿಷೇಕಕ್ಕೆ ಉತ್ತರ ಭಾರತದಿಂದ ಜೈನ ಸಮುದಾಯದವರು ಬರುತ್ತಾರೆ. ದಕ್ಷಿಣ ಭಾರತದವರೊಂದಿಗೆ ಸೇರಿ ಅಭಿಷೇಕ ನೆರವೇರಿಸುತ್ತಾರೆ. ಅದೇ ರೀತಿ ರಾಜ್ಯದ ಜೈನ ಸಮುದಾಯಕ್ಕೆ ಧರ್ಮಸ್ಥಳ, ಶ್ರವಣಬೆಳಗೊಳ ಎರಡು ಕಣ್ಣುಗಳಂತೆ ಎಂದು ಬಣ್ಣಿಸಿದರು.



ಶ್ರವಣಬೆಳಗೊಳ ಮಠದ ಪೀಠಾಧೀಶ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಂಗಳ ಪುರಪ್ರವೇಶದ ಪ್ರಯುಕ್ತ ಜೈನ ಭವನದಲ್ಲಿ ಭಾನುವಾರ ಕಲ್ಪಧ್ರುಮ ಅಭಿಷೇಕಕ್ಕೆ ಚಾಲನೆ ನೀಡಿದರು. ಭಾರತೀಯ ಜೈನ್ ಮಿಲನ್ ಕಾರ್ಯಾಧ್ಯಕ್ಷ ಡಿ. ಸುರೇಂದ್ರಕುಮಾರ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಮೈಸೂರು ಮಹಾರಾಜರು ರಾಜ್ಯವನ್ನು ಒಕ್ಕೂಟ ವ್ಯವಸ್ಥೆಗೆ ಬಿಟ್ಟುಕೊಡುವಾಗ ಹಲವು ಷರತ್ತು-ಗಳನ್ನು ಹಾಕಿದ್ದರು. ಅದರಲ್ಲಿ ಶ್ರವಣಬೆಳಗೊಳದಲ್ಲಿ 12 ವರ್ಷಕ್ಕೊಮ್ಮೆ ನಡೆಸುತ್ತಿದ್ದ ಮಹಾಮಸ್ತಕಾಭಿಷೇಕ-ವನ್ನು ಸರ್ಕಾರ ಮುಂದುವರಿಸಬೇಕು ಎಂಬುದೂ ಸೇರಿತ್ತು. ಈ ವಿಚಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಒಂದು ಬಾರಿ ತಿಳಿಸಿದ್ದರು ಮತ್ತು ಅದರಂತೆ ಸರ್ಕಾರ ನಡೆದುಕೊಂಡಿದೆ ಎಂದು ನೆನಪಿಸಿದರು.

ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರಿಗೆ ಪೂರ್ಣಕುಂಭ ಸ್ವಾಗತ ನೀಡಿ ಪುರಭವನ ವೃತ್ತದಿಂದ ಜೈನ ಭವನದವರೆಗೆ ಆಕರ್ಷಕ ಮೆರವಣಿಗೆ ಮಾಡಲಾಯಿತು. 24 ತೀರ್ಥಂಕರರಿಗೆ ಏಕಕಾಲದಲ್ಲಿ ಕಲ್ಪ ಧ್ರುಮ ಮಹಾಭಿಷೇಕ ಪೂಜೆ ನೆರವೇರಿಸಲಾಯಿತು. ಸ್ವಾಮೀಜಿಯವರಿಗೆ ಭಕ್ತಿಯ ಗುರುವಂದನೆ ನೆರವೇರಿಸಲಾಯಿತು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವ ಡಿ. ಸುಧಾಕರ್, ಶಾಸಕ ಉದಯ ಗರುಡಾಚಾರ್, ಅಲ್ಪಸಂಖ್ಯಾತ ಇಲಾಖೆಯ ಕಾರ್ಯದರ್ಶಿ ಮನೋಜ್ ಜೈನ್, ಕರ್ನಾಟಕ ಜೈನ ಅಸೋಸಿಯೇಶನ್ ಅಧ್ಯಕ್ಷ ಬಿ. ಪ್ರಸನ್ನಯ್ಯ, ಉಪಾಧ್ಯಕ್ಷ ಎ.ಸಿ. ಪಾಟೀಲ್, ಕಾರ್ಯದರ್ಶಿ ರಾಜಕೀರ್ತಿ, ನಿಕಟಪೂರ್ವ ಅಧ್ಯಕ್ಷ ಎಸ್. ಜಿತೇಂದ್ರ ಕುಮಾರ್ ಭಾಗವಹಿಸಿದ್ದರು.

ಸರ್ಜನ್ ಹುದ್ದೆ ತೊರೆದ ಮೋಹನ್

ಶ್ರೀನಿವಾಸ ಪ್ರಸಾದ್ ಅಳಿಯ ಚಾಮರಾಜನಗರ ಕ್ಷೇತ್ರದ ಟಿಕೆಟ್ ಆಕಾಂಕ್ಷಿ

ಪ್ರಜಾವಾಣಿ ವಾರ್ತೆ



ಡಾ.ಎನ್.ಎಸ್. ಮೋಹನ್

ಚಾಮರಾಜನಗರ: ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ಟಿಕೆಟ್ ಮೇಲೆ ಕಣ್ಣಿಟ್ಟಿರುವ ಮೂಳೆ ಮತ್ತು ಬೆನ್ನುಹುರಿ ಸರ್ಜನ್ ಡಾ.ಎನ್.ಎಸ್.ಮೋಹನ್ ಅವರು ಬೆಂಗಳೂರಿನ ಸಂಜಯ್ ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಟ್ರಾಮಾ ಅಂಡ್ ಆರ್ಥೋಪೀಡಿಕ್ಸ್‌ನ ಪ್ರಾಧ್ಯಾಪಕ ಹುದ್ದೆಗೆ ಇತ್ತೀಚೆಗೆ ರಾಜೀನಾಮೆ ಸಲ್ಲಿಸಿದ್ದಾರೆ.

2019ರ ಚುನಾವಣೆಯಲ್ಲೂ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ಅವರು, ಹಾಲಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಅಳಿಯ (ಮೂರನೇ ಮಗಳ ಪತಿ).

‘ಪೂರ್ಣ ಪ್ರಮಾಣದಲ್ಲಿ ರಾಜಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಹುದ್ದೆಗೆ ರಾಜೀನಾಮೆ ನೀಡಿದ್ದೇನೆ’ ಎಂದು ಡಾ.ಮೋಹನ್ ‘ಪ್ರಜಾವಾಣಿ’ಗೆ ತಿಳಿಸಿದರು.

ವಿಶ್ವಾಸವಿದೆ:‘ನನ್ನ ನಿರ್ಧಾರದ ಬಗ್ಗೆ ಮಾವನ ಗಮನಕ್ಕೆ ತಂದಿದ್ದೇನೆ. ಅವರು ತಮ್ಮ ಅಭಿಪ್ರಾಯವನ್ನು ಸೂಕ್ತ ಸಮಯದಲ್ಲಿ ಹೇಳಲಿದ್ದಾರೆ. ನನಗೆ ಇನ್ನೂ 15 ವರ್ಷಗಳ ಸೇವಾವಧಿ ಇತ್ತು. ಮುಂದುವರಿದಿದ್ದರೆ ಉನ್ನತ ಹುದ್ದೆಗೂ ಹೋಗಬಹುದಿತ್ತು. ರಾಜಕೀಯ ಕ್ಷೇತ್ರಕ್ಕೆ ಬರುವಂತೆ ಬೆಂಬಲಿಗರು ಒತ್ತಡ ಹಾಕುತ್ತಿದ್ದರು. ಜೊತೆಗೆ ಸಮಾಜ ಸೇವೆಯಲ್ಲಿ ಹೆಚ್ಚೆಚ್ಚು ತೊಡಗಿಸಿಕೊಳ್ಳಬೇಕು, ಪ್ರಧಾನಿ ನರೇಂದ್ರ ಮೋದಿ ಅವರ ಕೈ ಬಲಪಡಿಸಬೇಕು ಎಂಬ ಉದ್ದೇಶದಿಂದ ಹುದ್ದೆ ತೊರೆದಿದ್ದೇನೆ’ ಎಂದು ಡಾ.ಮೋಹನ್ ಪ್ರತಿಕ್ರಿಯಿಸಿದರು.

‘ಮುಂದಿನ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಕ್ಷೇತ್ರದಿಂದ ಟಿಕೆಟ್ ನೀಡುವಂತೆ ಪಕ್ಷದ ಮುಖಂಡರನ್ನು ಕೇಳಿದ್ದೇನೆ. ಕ್ಷೇತ್ರದ ಅಭಿವೃದ್ಧಿ ಮಾಡಬೇಕು ಎಂಬ ಸದಾಶಯ ಹೊಂದಿದ್ದೇನೆ. ಮುಖಂಡರು ಸ್ಪಂದಿಸುವ ವಿಶ್ವಾಸವಿದೆ’ ಎಂದರು.

‘ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ, ರಾಜಕೀಯದಿಂದ ನಿವೃತ್ತಿ ತೆಗೆದುಕೊಳ್ಳುತ್ತೇನೆ’ ಎಂದು ಶ್ರೀನಿವಾಸ ಪ್ರಸಾದ್ ಅವರು ಈಗಾಗಲೇ ಘೋಷಿಸಿದ್ದಾರೆ. ಹಾಗಾಗಿ, ಅವರ ಅಳಿಯ ಮೋಹನ್ ನಡೆ ಕುತೂಹಲ ಮೂಡಿಸಿದೆ. ಆರ್‌ಎಸ್‌ಎಸ್‌ನೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ಮೋಹನ್, ಆರೇಳು ವರ್ಷಗಳಿಂದ ಕ್ಷೇತ್ರದಾದ್ಯಂತ ಓಡಾಡುತ್ತಿದ್ದಾರೆ. ಜಿಲ್ಲೆಯಲ್ಲಿ ಅವರು ಸ್ನೇಹ ಬಳಗವನ್ನು ಕಟ್ಟಿಕೊಂಡಿದ್ದು, ವಿವಿಧ ಸಾಮಾಜಿಕ ಕಾರ್ಯಕ್ರಮದಲ್ಲಿ ತೊಡಗಿಕೊಂಡಿದ್ದಾರೆ.

‘ಕಳೆದ ಲೋಕಸಭಾ ಚುನಾವಣೆಯಲ್ಲೇ ರಾಜಕೀಯಕ್ಕೆ ಬರಲು ಅವರು ತಯಾರಿ ನಡೆಸಿದ್ದರು. ಆದರೆ, ಮಾವ ಶ್ರೀನಿವಾಸ ಪ್ರಸಾದ್ ಅವರಿಗೆ ಇಷ್ಟ ಇರಲಿಲ್ಲ. ಇದರಿಂದಾಗಿ ಹಿಂದೆ ಸರಿದಿದ್ದರು’ ಎನ್ನಲಾಗಿದೆ.

ಬಿಜೆಪಿ: ಚುನಾವಣಾ ತಯಾರಿ ಸಭೆ ಇಂದಿನಿಂದ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಲೋಕಸಭಾ ಚುನಾವಣೆ ತಯಾರಿಗೆ ಸಂಬಂಧಿಸಿದಂತೆ ಬಿಜೆಪಿಯ ರಾಜ್ಯ ಘಟಕವು ಸೋಮವಾರದಿಂದ ಮೂರು ದಿನ ಸರಣಿ ಸಭೆಗಳನ್ನು ಹಮ್ಮಿಕೊಂಡಿದೆ.

ಯಲಹಂಕ ಸಮೀಪದ ರಮಾಡ ರೆಸಾರ್ಟ್‌ನಲ್ಲಿ ಈ ಸಭೆಗಳು ನಡೆಯಲಿದ್ದು, ಇದರಲ್ಲಿ ಬಿಜೆಪಿಯ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್, ಕೇಂದ್ರ ಸಚಿವ ಹರದೀಪ್‌ಸಿಂಗ್ ಪುರಿ ಭಾಗವಹಿಸಲಿದ್ದಾರೆ.

ಪಕ್ಷದ ಹಿರಿಯ ನಾಯಕರ ಸಭೆ ಸೋಮವಾರ ನಡೆಯಲಿದ್ದು, ಮಂಗಳವಾರ ಪಕ್ಷದ ವಿವಿಧ ಮೋರ್ಚಾಗಳ ಪದಾಧಿಕಾರಿಗಳ ಸಭೆ ಹಮ್ಮಿಕೊಳ್ಳ ಲಾಗಿದೆ. ಬುಧವಾರದಂದು ಸಭೆ ಕೊನೆಗೊಳ್ಳಲಿದೆ. ಚುನಾವಣಾ ಪ್ರಚಾರದ ಜತೆಗೆ ರಾಜ್ಯ ಸರ್ಕಾರದ ವೈಫಲ್ಯಗಳು ಮತ್ತು ಅಕ್ರಮಗಳನ್ನು ಜನರಿಗೆ ಮನದಟ್ಟು ಮಾಡುವ ನಿಟ್ಟಿನಲ್ಲಿ ಹಿರಿಯ ನಾಯಕರ ಅಭಿ-ಪ್ರಾಯಗಳನ್ನು ಪಡೆಯಲಾಗುವುದು ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಬಿ.ವೈ.ವಿಜಯೇಂದ್ರ ಅವರು ಪಕ್ಷದ ಅಧ್ಯಕ್ಷರಾದ ಬಳಿಕ ಲೋಕಸಭಾ ಚುನಾವಣೆ ತಯಾರಿಗೆ ಸಂಬಂಧಿಸಿದಂತೆ ನಡೆಯುತ್ತಿರುವ ದೊಡ್ಡ ಮಟ್ಟದ ಸಭೆ ಇದಾಗಿದೆ. ಬಿಜೆಪಿ–ಜೆಡಿಎಸ್ ಮೈತ್ರಿ ವಿಚಾರವೂ ಪ್ರಸ್ತಾಪವಾಗಲಿದೆ. ಎರಡೂ ಪಕ್ಷಗಳು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುವುದರ ಜತೆಗೆ ಚರ್ಚೆ ನಡೆಯಲಿದೆ.

28 ಕ್ಷೇತ್ರಗಳಲ್ಲೂ ಗೆಲುವು-ಅರುಣ್ ಸಿಂಗ್ ವಿಶ್ವಾಸ: ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಜತೆ ಮೈತ್ರಿ ಮಾಡಿಕೊಂಡಿರುವುದರಿಂದ ಎಲ್ಲ 28 ಕ್ಷೇತ್ರಗಳನ್ನೂ ಗೆಲ್ಲುವ ವಿಶ್ವಾಸವಿದೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್‌ಸಿಂಗ್ ಹೇಳಿದರು.

ಇತ್ತೀಚೆಗೆ ನಡೆದ ಚುನಾವಣೆ-ಗಳಲ್ಲಿ ಕಾಂಗ್ರೆಸ್ ಪಕ್ಷವು ಮೂರು ರಾಜ್ಯಗಳಲ್ಲಿ ಅಧಿಕಾರವನ್ನು ಕಳೆದುಕೊಂಡು ಹೀನಾಯ ಸ್ಥಿತಿಗೆ ತಲುಪಿದೆ ಎಂದು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

‘ರಾಜ್ಯ ಸರ್ಕಾರದಿಂದ ಗುಳೆ ಗ್ಯಾರಂಟಿ’

ಪ್ರಜಾವಾಣಿ ವಾರ್ತೆ



ಆರ್.ಅಶೋಕ

ಬೆಂಗಳೂರು: ‘ಬರ ಮತ್ತು ಸಾಲಬಾಧೆಯಿಂದ ಕಂಗೆಟ್ಟಿರುವ ರೈತರಿಗೆ ಸಕಾಲಕ್ಕೆ ನೆರವು ನೀಡದ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು, ಗುಳೆ ಗ್ಯಾರಂಟಿಯ ಕೊಡುಗೆ ಕೊಟ್ಟಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆರೋಪಿಸಿದ್ದಾರೆ.

‘ಪ್ರಜಾವಾಣಿ’ಯ ಭಾನುವಾರದ ಸಂಚಿಕೆಯಲ್ಲಿ ‘ಗುಳೆ: ಗ್ರಾಮಗಳು ಖಾಲಿ, ಖಾಲಿ...’ ಶೀರ್ಷಿಕೆಯಡಿ ಪ್ರಕಟವಾದ ಒಳನೋಟ ವಿಶೇಷ ವರದಿಯನ್ನು ತಮ್ಮ ‘ಎಕ್ಸ್’ ಖಾತೆಯಲ್ಲಿ ಹಂಚಿಕೊಂಡು ಪ್ರತಿಕ್ರಿಯಿಸಿರುವ ಅವರು, ‘ಉತ್ತರ ಕರ್ನಾಟಕದ ರೈತರು ಜೀವ ಉಳಿಸಿಕೊಳ್ಳಲು ಊರು ಬಿಡಬೇಕಾದ ಶೋಚನೀಯ ಸ್ಥಿತಿಯನ್ನು ಕಾಂಗ್ರೆಸ್ ಸರ್ಕಾರ ತಂದಿಟ್ಟಿದೆ’ ಎಂದು ಟೀಕಿಸಿದ್ದಾರೆ.

ಬಣ ರಾಜಕಾರಣದಲ್ಲಿ ಮುಳುಗಿರುವ ಕಾಂಗ್ರೆಸ್ ಸರ್ಕಾರದ ಮಂತ್ರಿಗಳು ಮತ್ತು ಶಾಸಕರು, ಎಷ್ಟು ಮಂದಿ ಉಪ ಮುಖ್ಯಮಂತ್ರಿಗಳು ಇರಬೇಕು ಎನ್ನುವುದನ್ನು ಲೆಕ್ಕ ಹಾಕುವ ಬದಲಿಗೆ ಬರದಿಂದ ಸಂಕಷ್ಟ-ದಲ್ಲಿರುವ ರೈತರಿಗೆ ನೆರವು ಕೊಡುವ ಬಗ್ಗೆ ಯೋಚಿಸಬೇಕಿತ್ತು. ಆಗ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ ಎಂದಿದ್ದಾರೆ.

‘ಐದು ರಾಜ್ಯಗಳ ಚುನಾವಣೆಗೆ ಹಣ ಸಂಗ್ರಹ, ತೆಲಂಗಾಣ ಚುನಾವಣಾ ಪ್ರಚಾರದಲ್ಲಿ ಇದ್ದ ಉತ್ಸಾಹ ರಾಜ್ಯದ ರೈತರು, ಕೃಷಿ ಕಾರ್ಮಿಕರಿಗೆ ಸಹಾಯ ಮಾಡುವ ವಿಷಯದಲ್ಲಿ ಇದ್ದಿದ್ದರೆ ಕೃಷಿ ಕಾರ್ಮಿಕರು ಮನೆ ಬಿಟ್ಟು ಗುಳೆ ಹೋಗುವ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ’ ಎಂದು ಹೇಳಿದ್ದಾರೆ.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ನಿಮ್ಮಲ್ಲಿ ಮಾನವೀಯತೆ ಇದ್ದರೆ ಕೃಷಿ ಕಾರ್ಮಿಕರು, ದಲಿತರು, ಹಿಂದುಳಿದ ವರ್ಗದವರ ಮೇಲೆ ಕಾಳಜಿ ಇದ್ದರೆ ಜನರು ಗುಳೆ ಹೋಗುವುದನ್ನು ತಪ್ಪಿಸಿ. ಎಲ್ಲದಕ್ಕೂ ಕೇಂದ್ರದತ್ತ ಬೊಟ್ಟು ಮಾಡಬೇಡಿ. ರೈತರ ನೆರವಿಗೆ ಬರಲು ಸಾಧ್ಯವಾಗದಿದ್ದರೆ ರಾಜೀನಾಮೆ ಕೊಟ್ಟು ಮನೆಗೆ ಹೋಗಿ’ ಎಂದು ಆಗ್ರಹಿಸಿದ್ದಾರೆ.

ರಾಮಭಕ್ತಿಗೆ ಶರಣಾದ ಸರ್ಕಾರ: ಅಯೋಧ್ಯೆಯಲ್ಲಿ ಶ್ರೀರಾಮ ವಿಗ್ರಹದ ಪ್ರತಿಷ್ಠಾಪನೆ ನಡೆಯುವ ಜ. 22ರಂದು ಮುಜರಾಯಿ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನಡೆಸುವಂತೆ ಹೊರಡಿಸಿರುವ ಆದೇಶವನ್ನೂ ‘ಎಕ್ಸ್’ ಖಾತೆಯಲ್ಲಿ ಹಂಚಿಕೊಂಡಿರುವ ಅಶೋಕ, ‘ರಾಮಭಕ್ತಿಗೆ ಸರ್ಕಾರ ಶರಣಾಗಿದೆ. ಇದು ರಾಮಭಕ್ತರಿಗೆ, ಹಿಂದುತ್ವ ಕಾರ್ಯಕರ್ತರ ಹೋರಾಟಕ್ಕೆ ಸಿಕ್ಕ ಜಯ. ತುಷ್ಟೀಕರಣದ ವಿರುದ್ಧ ಹಿಂದುತ್ವದ ಜಯ’ ಎಂದಿದ್ದಾರೆ.

ಒಳ ಮೀಸಲಾತಿ: ಮಾದಿಗ ಮುನ್ನಡೆ ಮಾದಿಗರ ಆತ್ಮಗೌರವ ಸಮಾವೇಶ

ಮಾದಿಗರ ಪರ ತೀರ್ಪು–ಸಚಿವ ವಿಶ್ವಾಸ

ಪ್ರಜಾವಾಣಿ ವಾರ್ತೆ

ಬಿಡದಿ: ಮಾದಿಗರಿಗೆ ಒಳ ಮೀಸಲಾತಿ ವಿಚಾರಣೆ ಜ.17ರಿಂದ ಸುಪ್ರೀಂ-ಕೋರ್ಟ್‌ನಲ್ಲಿ ಆರಂಭವಾಗಲಿದೆ. ಮೀಸಲಾತಿಗೆ ಸಂಬಂಧಿಸಿದ ಎಲ್ಲಾ ದಾಖಲೆ ಮತ್ತು ವರದಿ ಸಲ್ಲಿಸಲಾಗಿದೆ. ಮಾದಿಗರ ಪರ ತೀರ್ಪು ಬರುವ ಭರವಸೆ ಇದೆ’ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ. ನಾರಾಯಣಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ಖಾಸಗಿ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ ‘ಮಾದಿಗ ಮುನ್ನಡೆ-ಮಾದಿಗರ ಆತ್ಮಗೌರವ ಸಮಾವೇಶ’ ಉದ್ಘಾಟಿಸಿ ಮಾತನಾಡಿದ ಅವರು, ಮಾದಿಗರಿಗೆ ಒಳ ಮೀಸಲಾತಿ ನೀಡಬೇಕೆಂಬ ದಶಕಗಳ ಹೋರಾಟಕ್ಕೆ ಜಯ ಸಿಗುವ ವಿಶ್ವಾಸ ಇದೆ ಎಂದರು.

‘ಮಾದಿಗರ ಮೀಸಲಾತಿ ಹೋರಾಟ ಬೆಂಬಲಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ತೆಲಂಗಾಣದಲ್ಲಿ ಮಾದಿಗ ಸಮುದಾಯದ ನಾಯಕ ಮಂದಾಕೃಷ್ಣ ಸಮ್ಮುಖದಲ್ಲಿ ಘೋಷಿಸಿದ್ದಾರೆ. ಇದರ ಬೆನ್ನಲ್ಲೇ, ದಕ್ಷಿಣ ಕರ್ನಾಟಕದಲ್ಲಿ ಮಾದಿಗರಿಗೆ ಮೀಸಲಾತಿ ವರ್ಗೀಕರಿಸುವ ವಿಷಯದ ವಿಚಾರಣೆ ಸುಪ್ರೀಂ ಪೀಠಕ್ಕೆ ಹೋಗಿದೆ’ ಎಂದು ಹೇಳಿದರು.

‘ಬಿಜೆಪಿ ಸರ್ಕಾರ ರಾಜ್ಯದಲ್ಲಿ ಒಳ ಮೀಸಲಾತಿ ಜಾರಿಗೆ ತಂದಿತು. ಆದರೆ, ಅದನ್ನು ಯಾರೂ ನಂಬುವ ಸ್ಥಿತಿಯಲ್ಲಿಲ್ಲ. ಈ ಬಗ್ಗೆ ಚುನಾವಣೆ ಸಂದರ್ಭದಲ್ಲಿ ಅಪಪ್ರಚಾರ ಕೂಡ ಮಾಡಲಾಯಿತು. ದೇಶವನ್ನು 65 ವರ್ಷ ಆಳಿದ ಕಾಂಗ್ರೆಸ್ಸಿನ ವೋಟ್ ಬ್ಯಾಂಕ್ ರಾಜಕಾರಣದ ಪರಿಣಾಮವಾಗಿ ಮೀಸಲಾತಿಯು ಅಸ್ಪೃಶ್ಯರ ಬದಲು ಪ್ರಬಲ ಸಮುದಾಯಗಳ ಪಾಲಾಗಿತ್ತು’ ಎಂದು ಅವರು ಆರೋಪ ಮಾಡಿದರು.

‘ಸಮಾನತೆ ಸಂಘ ಪರಿವಾರದ ಆಶಯ’

‘ಶೋಷಿತ ವರ್ಗಗಳಿಗೆ ಸಮಾನತೆ ಸಿಗಬೇಕೆನ್ನುವುದು ಸಂಘ ಪರಿವಾರದ ಆಶಯವಾಗಿದೆ. ಮಾದಿಗರ ಒಳ ಮೀಸಲಾತಿಗೂ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ತನ್ನ ಬದ್ಧತೆ ತೋರಿಸಿದೆ. ಆ ಕೆಲಸವನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರಿಗೆ ಒಪ್ಪಿಸಿದೆ. ನಮ್ಮ ಹೋರಾಟ ಯಾವುದೇ ಸಮುದಾಯದ ವಿರುದ್ಧವಲ್ಲ. ಬದಲಿಗೆ, ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಜಾರಿ ಮಾಡಬೇಕು ಎಂಬುದಾಗಿದೆ’ ಎಂದು ನಾರಾಯಣಸ್ವಾಮಿ ಸ್ಪಷ್ಟಪಡಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಆರೋಪ

‘ಕೇಂದ್ರದಿಂದ ಕಾರ್ಮಿಕರಿಗೆ ಅನ್ಯಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಕಟ್ಟಿದ್ದ ಸಂಸ್ಥೆಗಳನ್ನು ಖಾಸಗೀಕರಣ ಮಾಡುವ ಮೂಲಕ ಕೇಂದ್ರದ ಬಿಜೆಪಿ ಸರ್ಕಾರ ಕಾರ್ಮಿಕರಿಗೆ ಅನ್ಯಾಯ ಮಾಡಿದೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಆರೋಪಿಸಿದರು.

ರೇಸ್ ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಭಾನುವಾರ ನಡೆದ ರಾಜ್ಯ ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ (ಇಂಟಕ್) ಕಾರ್ಯಕಾರಿಣಿಯಲ್ಲಿ ಮಾತನಾಡಿದ ಅವರು, ‘ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಜನ ಸಾಮಾನ್ಯರ ಖಾತೆಗಳಿಗೆ ₹ 15 ಲಕ್ಷ ಜಮೆ, ವಾರ್ಷಿಕ ಎರಡು ಕೋಟಿ ಉದ್ಯೋಗ ಸೃಷ್ಟಿ ಹಾಗೂ ರೈತರ ಆದಾಯ ದ್ವಿಗುಣಗೊಳಿಸುವುದಾಗಿ ಹೇಳಿ ಮೋಸ ಮಾಡಿದೆ’ ಎಂದರು.



ಇಂಟಕ್ ಕಾರ್ಯಕಾರಿಣಿಯಲ್ಲಿ ಸಲೀಂ ಅಹಮದ್ ಮಾತನಾಡಿದರು. ಇಂಟಕ್ ರಾಜ್ಯ ಘಟಕದ ಅಧ್ಯಕ್ಷ ಲಕ್ಷ್ಮೀ ವೆಂಕಟೇಶ್, ಕಾರ್ಯಾಧ್ಯಕ್ಷ ಶಾಮನ್ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಯಲ್ಲಪ್ಪ, ಶೌಕತ್ ಅಲಿ, ವಿನಯ್ ಬಾಬು, ಕಟ್ಟಡ ನಿರ್ಮಾಣ ಒಕ್ಕೂಟದ ಅಧ್ಯಕ್ಷ ಜಿ.ಆರ್. ದಿನೇಶ್ ಇದ್ದರು

‘ಕಾರ್ಪೊರೇಟ್ ಕಂಪನಿಗಳ ಕೈಗೊಂಬೆಯಾಗಿರುವ ಕೇಂದ್ರದ ಬಿಜೆಪಿ ಸರ್ಕಾರವು ಕಾರ್ಮಿಕರನ್ನು ನಿರ್ಲಕ್ಷಿಸಿದೆ. ಕಾರ್ಮಿಕರ ಕಷ್ಟಕ್ಕೆ ಸ್ಪಂದಿಸಬೇಕಾದ ಸರ್ಕಾರ ಮಾಲೀಕರ ಪರವಾಗಿದೆ. ಜನವಿರೋಧಿ, ರೈತ ವಿರೋಧಿ, ಕಾರ್ಮಿಕ ವಿರೋಧಿಯಾಗಿರುವ ಕೇಂದ್ರ ಬಿಜೆಪಿ ಸರ್ಕಾರದ ಧೋರಣೆಯ ಬಗ್ಗೆ ಮನೆ ಮನೆಗೆ ಮುಟ್ಟಿಸಬೇಕು’ ಎಂದರು.

‘ಇಂಟಕ್ ಸಂಘಟಿತಗೊಂಡು ಪಕ್ಷವನ್ನು ಬಲಪಡಿಸಬೇಕು. ಲೋಕಸಭೆ ಚುನಾವಣೆಯಲ್ಲಿ ಜನರು ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವಾದ ಮಾಡುವ ವಿಶ್ವಾಸವಿದೆ. ರಾಜ್ಯದಲ್ಲಿ ಕನಿಷ್ಠ 20 ಸೀಟುಗಳನ್ನು ಕಾಂಗ್ರೆಸ್ ಗೆಲ್ಲಲಿದೆ. ಕೇಂದ್ರದಲ್ಲಿ ‘ಇಂಡಿಯಾ’ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ’ ಎಂದರು.

ಎಚ್‌.ಡಿ. ದೇವೇಗೌಡ, ಕುಮಾರಸ್ವಾಮಿ ಭೇಟಿ ಮಾಡಿದ ಕೇಂದ್ರ ಸಚಿವ

'15ಕ್ಕೆ ದೆಹಲಿಗೆ ಬರಲು ಆಹ್ವಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನವರಿ 15 ಮತ್ತು 16ಕ್ಕೆ ದೆಹಲಿಗೆ ಬರುವಂತೆ ಕೇಂದ್ರ ಬುಡಕಟ್ಟು ವ್ಯವಹಾರಗಳ ಖಾತೆ ಸಚಿವ ಅರ್ಜುನ್ ಮುಂಡಾ ಆಹ್ವಾನ ನೀಡಿದ್ದಾರೆ. ನಾನು ಆ ದಿನ ದೆಹಲಿಗೆ ಹೋಗುತ್ತೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಅರ್ಜುನ್ ಮುಂಡಾ ಅವರು ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡರ ಮನೆಗೆ ಭಾನುವಾರ ಭೇಟಿ ನೀಡಿ ಕೆಲ ಕಾಲ ಚರ್ಚೆ ನಡೆಸಿದರು. ಕುಮಾರಸ್ವಾಮಿ ಅವರೂ ಮಾತುಕತೆ ವೇಳೆ ಉಪಸ್ಥಿತರಿದ್ದರು. ಮುಂಡಾ ಅವರನ್ನು ಬೀಳ್ಕೊಟ್ಟ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ನಾನು ಕೇಂದ್ರ ಸಚಿವನಾಗುವ ಬಗ್ಗೆ ಯೋಚಿಸಿಲ್ಲ. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಿ ಎಲ್ಲ 28 ಕ್ಷೇತ್ರಗಳಲ್ಲೂ ಗೆಲುವು ಸಾಧಿಸುವುದು ನಮ್ಮ ಗುರಿ. ಮೈತ್ರಿ ಕೂಟವನ್ನು 28 ಕ್ಷೇತ್ರಗಳಲ್ಲೂ ಗೆಲ್ಲಿಸಬೇಕು ಎಂಬುದು ನನ್ನ ಮುಂದಿರುವ ಏಕೈಕ ಕಾರ್ಯಸೂಚಿ' ಎಂದು ಕುಮಾರಸ್ವಾಮಿ ತಿಳಿಸಿದರು.

'ಕೇಂದ್ರ ಸಚಿವನಾಗುವ ಕುರಿತು ನನಗೆ ಗೊತ್ತಿಲ್ಲ. ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಸುದ್ದಿಯನ್ನು ಗಮನಿಸಿದ್ದೇನೆ. ನನಗೆ ಅಂತಹ ಆಸೆಯೂ ಇಲ್ಲ. ಫೆಬ್ರುವರಿ ತಿಂಗಳಲ್ಲಿ ಚುನಾವಣಾ ನೀತಿಸಂಹಿತೆ ಜಾರಿಯಾದರೆ ಕೇಂದ್ರ ಮಂತ್ರಿಯಾಗಿ ಏನು ಮಾಡಲಿ' ಎಂದು ಪ್ರಶ್ನಿಸಿದರು.

ಕ್ಷೇತ್ರ ನಿರ್ಧರಿಸಿಲ್ಲ: ಜೆಡಿಎಸ್ ಮತ್ತು ಬಿಜೆಪಿ ಜತೆಯಾಗಿ ಚುನಾವಣೆ ಎದುರಿಸುವ ನಿರ್ಧಾರವನ್ನು ಮಾತ್ರ ಕೈಗೊಳ್ಳಲಾಗಿದೆ. ಕ್ಷೇತ್ರ ಹಂಚಿಕೆ ಈವರೆಗೂ ಆಗಿಲ್ಲ ಎಂದು ಹೇಳಿದರು.

'ನಾನು ಸ್ಪರ್ಧಿಸುವ ಕುರಿತು ಇನ್ನೂ ತೀರ್ಮಾನಿಸಿಲ್ಲ. ಚಿಕ್ಕಬಳ್ಳಾಪುರ, ತುಮಕೂರು, ಮಂಡ್ಯ, ಬೆಂಗಳೂರು ಗ್ರಾಮಾಂತರ ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಸ್ನೇಹಿತರು ಬಯಸುತ್ತಿದ್ದಾರೆ. ಯಾವ ಕ್ಷೇತ್ರ ಎಂಬುದನ್ನು ಸಮಯ ಬಂದಾಗ ತಿಳಿಸುವೆ' ಎಂದರು.

'ಮಂಡ್ಯ ಸಂಸದೆ ಬಿಜೆಪಿಯಲ್ಲಿ ಮುಂದುವರಿಯುವುದಾದರೆ ಮಿತ್ರ-ಪಕ್ಷಗಳ ಪರವಾಗಿ ಅವರನ್ನೂ ಭೇಟಿ ಮಾಡುವೆ. ನಿರ್ದಿಷ್ಟವಾಗಿ ಇದೇ ಕ್ಷೇತ್ರದಲ್ಲಿ ಸ್ಪರ್ಧೆ ಮಾಡುತ್ತೇವೆ ಎಂದು ನಾವು ಎಲ್ಲಿಯೂ ಹೇಳಿಲ್ಲ. ಇಂತಹವರಿಗೆ ತೊಂದರೆ ಕೊಟ್ಟು ಸ್ಪರ್ಧಿಸಬೇಕು ಎಂಬುದೇನೂ ಇಲ್ಲ. ಬಿಜೆಪಿ– ಜೆಡಿಎಸ್ ನಾಯಕರು ಕುಳಿತು ಸೌಹಾರ್ದಯುತವಾಗಿ ಚರ್ಚಿಸಿ, ನಿರ್ಧಾರಕ್ಕೆ ಬರುತ್ತೇವೆ' ಎಂದು ಹೇಳಿದರು.



ಬೆಂಗಳೂರಿನಲ್ಲಿರುವ ತಮ್ಮ ಮನೆಗೆ ಭಾನುವಾರ ಭೇಟಿನೀಡಿದ್ದ ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವ ಅರ್ಜುನ್ ಮುಂಡಾ ಅವರನ್ನು ಜೆಡಿಎಸ್ ರಾಷ್ಟ್ರಿಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಅವರು ಶಾಲು ಹೊದಿಸಿ, ಹಾರ ಹಾಕಿ ಗೌರವಿಸಿದರು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಉಪಸ್ಥಿತರಿದ್ದರು

'ಜೆಡಿಎಸ್ ಶಾಸಕರಿಗೆ ಸಿಎಂ, ಡಿಸಿಎಂ ಆಮಿಷ'

'ಜೆಡಿಎಸ್ ಪಕ್ಷವನ್ನು ಮುಗಿಸುವ ಉದ್ದೇಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಮ್ಮ ಪಕ್ಷದ ಶಾಸಕರಿಗೆ ಆಮಿಷ ಒಡ್ಡುತ್ತಿದ್ದಾರೆ' ಎಂದು ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

'ದೇವೇಗೌಡರ ಬಗ್ಗೆ ಮುಖ್ಯಮಂತ್ರಿ ಮಾತಾಡಿದ್ದಾರೆ. ಅವರು ಏನೇನು ಮಾಡಿದ್ದಾರೆ ಎಂಬುದು ಗೊತ್ತಿದೆ. ಕ್ಷೇತ್ರದ ಕೆಲಸಕ್ಕೆ ಭೇಟಿಯಾಗುವ ಜೆಡಿಎಸ್ ಶಾಸಕರಿಗೆ ಕಾಂಗ್ರೆಸ್ ಪಕ್ಷ ಸೇರುವಂತೆ ಆಮಿಷ ಒಡ್ಡುತ್ತಿದ್ದಾರೆ' ಎಂದರು.

'ರಾಜ್ಯದಲ್ಲಿ ಈಗ ನಡೆಯುತ್ತಿರುವ ದಬ್ಬಾಳಿಕೆ, ಅಕ್ರಮಗಳಿಗೆ ಬೇಸತ್ತು ಜನರೇ ಅವರನ್ನು ಸಮಾಪ್ತಿ ಮಾಡುತ್ತಾರೆ ಎಂದು ದೇವೇಗೌಡರು ಹೇಳಿದ್ದಾರೆ. ನಮ್ಮದು 135 ವರ್ಷಗಳ ಇತಿಹಾಸ ಇರುವ ಪಕ್ಷ ಎಂದು ಶಿವಕುಮಾರ್ ಹೇಳಿಕೆ ನೀಡಿದ್ದಾರೆ. ಗಾಂಧೀಜಿ ಇದ್ದಾಗ, ಸ್ವಾತಂತ್ರ್ಯ ಹೋರಾಟದ ಇತಿಹಾಸ ಬೇರೆ. ಮನೆ, ಆಸ್ತಿ ಮಾರಾಟ ಮಾಡಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಇವರು ಈಸ್ಟ್ ಇಂಡಿಯಾ ಕಂಪನಿ ಮಾಡಿದ್ದ ದರೋಡೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

'ಪರಿಶಿಷ್ಟರು ಸಿ.ಎಂ ಸ್ಥಾನವೇ ಕೇಳಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಎರಡು ಕೋಟಿ ಜನಸಂಖ್ಯೆ ಇದೆ. ಬಹುಸಂಖ್ಯಾತರಾಗಿರುವ ಪರಿಶಿಷ್ಟರು ಉಪ ಮುಖ್ಯಮಂತ್ರಿ ಸ್ಥಾನವನ್ನಲ್ಲ, ಮುಖ್ಯಮಂತ್ರಿ ಸ್ಥಾನವನ್ನೇ ಕೇಳಬೇಕು' ಎಂದು ಬಹುಜನ ಸಮಾಜ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ಒತ್ತಾಯಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು,'ಕಾಂಗ್ರೆಸ್ ಪಕ್ಷವು ಬಸವಲಿಂಗಪ್ಪ, ಕೆ.ಎಚ್‌. ರಂಗನಾಥ್, ಮಲ್ಲಿಕಾರ್ಜುನ ಖರ್ಗೆ ಮತ್ತು ಜಿ. ಪರಮೇಶ್ವರ ಅವರಿಗೆ ಮುಖ್ಯಮಂತ್ರಿ ಸ್ಥಾನ ಕೊಡುವುದಾಗಿ ಆಸೆ ತೋರಿಸಿ ಮೋಸ ಮಾಡಿದೆ. ಈಗ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಸ್ಥಾನಕ್ಕೆ ಬೇಡಿಕೆ ಇಟ್ಟಿದ್ದಾರೆ. ಕಾಂಗ್ರೆಸ್‌ನಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಸಚಿವರು, ಶಾಸಕರು ಡಿಸಿಎಂ ಸ್ಥಾನ ಕೇಳಬಾರದು. ಮುಖ್ಯಮಂತ್ರಿ ಸ್ಥಾನಕ್ಕಾಗಿ ಪಟ್ಟು ಹಿಡಿಯಬೇಕು' ಎಂದು ಹೇಳಿದ್ದಾರೆ.

'ಬಹುಸಂಖ್ಯಾತರಾಗಿರುವ ಪರಿಶಿಷ್ಟರು ಉಪ ಮುಖ್ಯಮಂತ್ರಿ ಸ್ಥಾನ ಕೇಳುವುದು ನಾಚಿಕೆಗೇಡಿನ ವಿಷಯ. ಉಪ ಮುಖ್ಯಮಂತ್ರಿ ಸ್ಥಾನದಲ್ಲಿ ಯಾವ ವಿಶೇಷ ಅಧಿಕಾರವೂ ಇಲ್ಲ. ಬೆಂಗಾವಲು ವಾಹನವೊಂದೇ ವಿಶೇಷ' ಎಂದಿದ್ದಾರೆ.

'ಕರ್ನಾಟಕದಲ್ಲಿ ಶೇ 11ರಷ್ಟು ಜನಸಂಖ್ಯೆ ಇರುವ ಲಿಂಗಾಯತರು 14 ಬಾರಿ, ಶೇ 10ರಷ್ಟು ಜನಸಂಖ್ಯೆ ಇರುವ ಒಕ್ಕಲಿಗರು ಎಂಟು ಬಾರಿ, ಶೇ 1ರಷ್ಟು ಜನಸಂಖ್ಯೆ ಇರುವ ಬ್ರಾಹ್ಮಣರು ಮೂರು ಬಾರಿ, ಶೇ 40ರಷ್ಟು ಜನಸಂಖ್ಯೆ ಇರುವ ಹಿಂದುಳಿದ ವರ್ಗಗಳವರು ಆರು ಬಾರಿ ಮುಖ್ಯಮಂತ್ರಿ ಆಗಿದ್ದಾರೆ. ಶೇ 30ರಷ್ಟು ಜನಸಂಖ್ಯೆ ಇರುವ ಪರಿಶಿಷ್ಟರು ಈವರೆಗೂ ಮುಖ್ಯಮಂತ್ರಿಯಾಗಲು ಸಾಧ್ಯವಾಗಿಲ್ಲ' ಎಂದು ಹೇಳಿದ್ದಾರೆ.

'ಮಹಾರಾಷ್ಟ್ರ ಮತ್ತು ಪಂಜಾಬ್‌ನಲ್ಲಿ ಅಧಿಕಾರ ಕಳೆದುಕೊಳ್ಳುವ ಮೂರು ತಿಂಗಳ ಮೊದಲು ಪರಿಶಿಷ್ಟ ರನ್ನು ಮುಖ್ಯಮಂತ್ರಿ ಮಾಡಲಾಗಿತ್ತು. ಉಳಿದಂತೆ ಪರಿಶಿಷ್ಟರಿಗೆ ಮುಖ್ಯಮಂತ್ರಿ ಸ್ಥಾನ ನೀಡಲು ಕಾಂಗ್ರೆಸ್ ಮತ್ತು ಬಿಜೆಪಿ ಯಾವತ್ತೂ ಪ್ರಯತ್ನಿಸಿಲ್ಲ. ಕಾನ್ಶಿರಾಮ್ ಅವರು ಸ್ಥಾಪಿಸಿದ ಬಿಎಸ್‌ಪಿಯಿಂದ ಮಾಯಾವತಿಯವರು ಮಾತ್ರ 1995, 1997, 2002 ಮತ್ತು 2007ರಲ್ಲಿ ಮುಖ್ಯಮಂತ್ರಿಯಾಗಿದ್ದರು' ಎಂದು ಮಾರಸಂದ್ರ ಮುನಿಯಪ್ಪ ಹೇಳಿದ್ದಾರೆ

ವಿಶ್ವಕರ್ಮ: ಸಾಲ ಮನ್ನಾಕ್ಕೆ ಆಗ್ರಹ

ಬೆಂಗಳೂರು: 'ವಿಶ್ವಕರ್ಮ ನಿಗಮದಿಂದ 2014ರಿಂದ 2020ರ ಅವಧಿಯಲ್ಲಿ ಸಾಲ ಪಡೆದ 92 ಸಾವಿರ ಜನರು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದು, ಅವರು ಪಡೆದ ಸಾಲ ಮತ್ತು ಅದರ ಬಡ್ಡಿ ಮೊತ್ತ ₹78 ಕೋಟಿಯನ್ನು ರಾಜ್ಯ ಸರ್ಕಾರ ಮನ್ನಾ ಮಾಡಬೇಕು' ಎಂದು ವಿಧಾನ ಪರಿಷತ್ ಬಿಜೆಪಿ ಸದಸ್ಯ ಕೆ.ಪಿ. ನಂಜುಂಡಿ ವಿಶ್ವಕರ್ಮ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, 'ಸಾಲ ಪಡೆದವರು ಬಡ್ಡಿ ಕಟ್ಟಲು ಪರದಾಡುತ್ತಿದ್ದು, ಸರ್ಕಾರ ಮಾನವೀಯತೆ ಪ್ರದರ್ಶಿಸಬೇಕು' ಎಂದರು.

'ಬೇಲೂರಿನ ಚನ್ನಕೇಶವ ದೇವಸ್ಥಾನದ ಆವರಣದಲ್ಲಿ ಅಮರಶಿಲ್ಪಿ ಜಕಣಾಚಾರಿಯ ಪ್ರತಿಮೆಯನ್ನು ಸ್ಥಾಪಿಸಬೇಕು, ಸಮಾಜ ಸಂಘಟನೆ ಮತ್ತು ಹೋರಾಟದಲ್ಲಿ ಭಾಗವಹಿಸಿದ ಮುಖಂಡರೊಬ್ಬರನ್ನು ವಿಶ್ವಕರ್ಮ ನಿಗಮದ ಅಧ್ಯಕ್ಷರನ್ನಾಗಿ ಮಾಡಿ ₹50 ಕೋಟಿ ಅನುದಾನ ನೀಡಬೇಕು' ಎಂದೂ ಅವರು ಒತ್ತಾಯಿಸಿದ್ದಾರೆ.

'ನಮ್ಮ ಸಮಾಜ ಪರಿಶಿಷ್ಟ ಪಂಗಡಕ್ಕೆ ಸೇರಲು ಅವಕಾಶ ಇದ್ದರೂ ವಂಚಿತವಾಗಿದೆ. ಸಾಮಾಜಿಕ ನ್ಯಾಯ ಸಿಗದೆ ಶೈಕ್ಷಣಿಕ, ಆರ್ಥಿಕ, ಸಾಮಾಜಿಕವಾಗಿ ಹಿಂದುಳಿದು ನಿರ್ಲಕ್ಷ್ಯಕ್ಕೆ ಗುರಿಯಾಗಿದೆ. ಕುಲಶಾಸ್ತ್ರೀಯ ಅಧ್ಯಯನದ ಬಗ್ಗೆ ಜಾಗೃತಿ ಮೂಡಿಸಲು 162 ಹೋಬಳಿಗಳಲ್ಲಿ ಈಗಾಗಲೇ ಸಮಾವೇಶ ನಡೆಸಲಾಗಿದೆ. ಉಳಿದ 585 ಹೋಬಳಿಗಳಲ್ಲಿ ಸಮಾವೇಶ ನಡೆಸಿ, ಬೀದರ್‌ನಿಂದ ಬೆಂಗಳೂರುವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗುವುದು' ಎಂದೂ ಅವರು ತಿಳಿಸಿದರು.

'ಕಾಂಗ್ರೆಸ್ ಸರ್ಕಾರ ರೈತ ವಿರೋಧಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಬರಗಾಲದಿಂದ ರೈತರ ಸರಣಿ ಆತ್ಮಹತ್ಯೆಯಾಗುತ್ತಿದ್ದರೂ ನೆರವಿಗೆ ಬಾರದ ಕಾಂಗ್ರೆಸ್ ನೇತೃತ್ವದ ಸರ್ಕಾರ, ಅಲ್ಪಸಂಖ್ಯಾತರಿಗೆ ₹10,000 ಕೋಟಿ ಒದಗಿಸಲು ಹೊರಟಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ದೂರಿದರು.

ಪಕ್ಷದ ರಾಜ್ಯ ಘಟಕದ ಕಚೇರಿಯಲ್ಲಿ ಭಾನುವಾರ ನಡೆದ ಬಿಜೆಪಿ ರೈತ ಮೋರ್ಚಾ ರಾಜ್ಯ ಘಟಕದ ನಿಕಟಪೂರ್ವ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, 'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಂದ ಸಕ್ಕರೆ ಸಚಿವ ಶಿವಾನಂದ ಪಾಟೀಲರವರೆಗೆ ಈ ಸರ್ಕಾರದಲ್ಲಿರುವ ಹಲವರು ರೈತರ ವಿರುದ್ಧ ಹೇಳಿಕೆ ನೀಡುತ್ತಿದ್ದಾರೆ. ₹5 ಲಕ್ಷ ಪರಿಹಾರಕ್ಕಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂದು ಶಿವಾನಂದ ಪಾಟೀಲ ಹೇಳಿದ್ದರು. ಇಂತಹ ಉಡಾಫೆ ಹೇಳಿಕೆ ನೀಡುವವರು ಸರ್ಕಾರದಲ್ಲಿರುವುದು ದುರಂತ' ಎಂದರು.

ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್ ಮಾತ ನಾಡಿ, 'ಹಾಲು ಉತ್ಪಾದಕರಿಗೆ ಆರು ತಿಂಗಳಿನಿಂದ ಪ್ರೋತ್ಸಾಹಧನ ಪಾವತಿ ಯಾಗಿಲ್ಲ. ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವು ಕೃಷಿ ಕ್ಷೇತ್ರಕ್ಕೆ ₹7,500 ಕೋಟಿ ಒದಗಿಸಿತ್ತು. ಕಾಂಗ್ರೆಸ್ ಸರ್ಕಾರವು ತನ್ನ ಬಜೆಟ್‌ನಲ್ಲಿ ₹3,500 ಕೋಟಿಯನ್ನು ಕಿತ್ತುಕೊಂಡಿದೆ. ಈ ಎಲ್ಲ ವಿಚಾರಗಳನ್ನು ರೈತರಿಗೆ ತಲುಪಿಸುವ ಕೆಲಸ ಮಾಡಬೇಕು' ಎಂದರು.

ಬಿಜೆಪಿ ರಾಜ್ಯ ಘಟಕದ ಸಂಘಟನಾ ಪ್ರಧಾನ ಕಾರ್ಯದರ್ಶಿ ರಾಜೇಶ್ ಜಿ.ವಿ, ರೈತ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಎ.ಎಸ್. ಪಾಟೀಲ ನಡಹಳ್ಳಿ, ರೈತ ಮೋರ್ಚಾ ರಾಜ್ಯ ಘಟಕದ ನಿಕಟಪೂರ್ವ ಅಧ್ಯಕ್ಷ ಈರಣ್ಣ ಕಡಾಡಿ, ಮಹಿಳಾ ಮೋರ್ಚಾದ ರಾಜ್ಯ ಘಟಕದ ಅಧ್ಯಕ್ಷೆ ಮಂಜುಳಾ ಸಿ. ಸಭೆಯಲ್ಲಿದ್ದರು.

ಲೋಕಸಭೆ: 'ಕೈ'ಗೆ ಸಚಿವರು ಸಂಯೋಜಕರು

ಬೆಂಗಳೂರು: ಮುಂಬರುವ ಲೋಕಸಭೆ ಚುನಾವಣೆಗೆ ಸಚಿವರನ್ನು ರಾಜ್ಯದ ಎಲ್ಲ 28 ಕ್ಷೇತ್ರಗಳಿಗೆ ಪಕ್ಷದ ಸಂಯೋಜಕರನ್ನಾಗಿ ಎಐಸಿಸಿ ನೇಮಿಸಿದೆ.

ಸಂಯೋಜಕರ ನೇಮಕಾತಿ ಪ್ರಸ್ತಾವಕ್ಕೆ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅನುಮೋದನೆ ನೀಡಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರಿಗೆ ಆಯಾ ಜಿಲ್ಲೆಯನ್ನು ಒಳಗೊಂಡ ಕ್ಷೇತ್ರದ ಹೊಣೆಯನ್ನು ನೀಡಲಾಗಿದೆ.

ಸಂಯೋಜಕರು: ಚಿಕ್ಕೋಡಿ– ಎಚ್‌.ಕೆ. ಪಾಟೀಲ, ಬೆಳಗಾವಿ– ಸತೀಶ ಜಾರಕಿಹೊಳಿ, ಬಾಗಲಕೋಟೆ– ಆರ್‌.ಬಿ. ತಿಮ್ಮಾಪುರ, ವಿಜಯಪುರ– ಎಂ.ಬಿ. ಪಾಟೀಲ, ಕಲಬುರಗಿ– ಪ್ರಿಯಾಂಕ್ ಖರ್ಗೆ, ರಾಯಚೂರು– ಎನ್‌.ಎಸ್. ಬೋಸರಾಜು, ಬೀದರ್– ಈಶ್ವರ ಖಂಡ್ರೆ, ಕೊಪ್ಪಳ– ಶಿವರಾಜ ತಂಗಡಗಿ, ಬಳ್ಳಾರಿ– ಬಿ. ನಾಗೇಂದ್ರ, ಹಾವೇರಿ– ಶಿವಾನಂದ ಪಾಟೀಲ, ಧಾರವಾಡ– ಸಂತೋಷ್ ಲಾಡ್, ಉತ್ತರಕನ್ನಡ– ಮಂಕಾಳ ವೈದ್ಯ, ದಾವಣಗೆರೆ– ಎಸ್‌.ಎಸ್. ಮಲ್ಲಿಕಾರ್ಜುನ, ಶಿವಮೊಗ್ಗ– ಮಧುಬಂಗಾರಪ್ಪ, ಉಡುಪಿ– ಚಿಕ್ಕಮಗಳೂರು– ಕೆ.ಜೆ. ಜಾರ್ಜ್, ಹಾಸನ– ಕೆ.ಎನ್‌. ರಾಜಣ್ಣ, ದಕ್ಷಿಣಕನ್ನಡ– ದಿನೇಶ್ ಗುಂಡೂರಾವ್, ಚಿತ್ರದುರ್ಗ– ಡಿ. ಸುಧಾಕರ್, ಚಿಕ್ಕಬಳ್ಳಾಪುರ– ಕೆ.ಎಚ್‌. ಮುನಿಯಪ್ಪ, ತುಮಕೂರು– ಜಿ. ಪರಮೇಶ್ವರ, ಮಂಡ್ಯ– ಎನ್‌. ಚಲುವರಾಯಸ್ವಾಮಿ, ಮೈಸೂರು– ಕೆ. ವೆಂಕಟೇಶ್, ಚಾಮರಾಜನಗರ– ಎಚ್‌.ಸಿ. ಮಹದೇವಪ್ಪ, ಬೆಂಗಳೂರು ಗ್ರಾಮಾಂತರ– ಬೈರತಿ ಸುರೇಶ್, ಬೆಂಗಳೂರು ಉತ್ತರ– ಕೃಷ್ಣ ಬೈರೇಗೌಡ, ಬೆಂಗಳೂರು ಕೇಂದ್ರ– ಜಮೀರ್ ಅಹಮದ್ ಖಾನ್, ಬೆಂಗಳೂರು ದಕ್ಷಿಣ– ರಾಮಲಿಂಗಾರೆಡ್ಡಿ, ಕೋಲಾರ– ಡಾ.ಎಂ.ಸಿ. ಸುಧಾಕರ್.

ಎಐಎಂಎಸ್‌ಎಸ್ 7ನೇ ರಾಜ್ಯಮಟ್ಟದ ಮಹಿಳಾ ಸಮಾವೇಶ

'ಬಿಸಿಯೂಟ: ಕಾಲೇಜುಗಳಿಗೂ ವಿಸ್ತರಿಸಿ'

ಪ್ರಜಾವಾಣಿ ವಾರ್ತೆ

ದಾವಣಗೆರೆ: ಅಪೌಷ್ಟಿಕತೆ ತಡೆಗೆ ಕಾಲೇಜು ಹಂತದವರೆಗೂ ಬಿಸಿಯೂಟ ಸೌಲಭ್ಯ ವಿಸ್ತರಿಸಬೇಕು. ಆಶಾ, ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರ ಸೇವೆಯನ್ನು ಕಾಯಂಗೊಳಿಸಬೇಕು. ಬಡ ಹೆಣ್ಣು ಮಕ್ಕಳಿಗೆ ಉಚಿತವಾಗಿ ಗುಣಮಟ್ಟದ ಸ್ಯಾನಿಟರಿ ಪ್ಯಾಡ್ ವಿತರಿಸಬೇಕು ಎಂಬುದೂ ಸೇರಿದಂತೆ ಒಟ್ಟು 12 ನಿರ್ಣಯಗಳನ್ನು (ಗೊತ್ತುವಳಿ) ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಇಲ್ಲಿ ಏರ್ಪಡಿಸಿದ್ದ 7ನೇ ರಾಜ್ಯಮಟ್ಟದ ಮಹಿಳಾ ಸಮಾವೇಶದ ಪ್ರತಿನಿಧಿ ಅಧಿವೇಶನದಲ್ಲಿ ಮಂಡಿಸಲಾಯಿತು.

ಇಲ್ಲಿ ಭಾನುವಾರ ಮುಕ್ತಾಯವಾದ ಎರಡು ದಿನಗಳ ಸಮ್ಮೇಳನದ ಪ್ರತಿನಿಧಿ ಅಧಿವೇಶನದಲ್ಲಿ ವಿಷಯ ಮಂಡಿಸಿದ ಸಂಘಟನೆಯ ರಾಜ್ಯ ಕಾರ್ಯದರ್ಶಿ ಎಸ್.ಶೋಭಾ, ಬಾಕಿ ಇರುವ ವಿವಿಧ ವ್ಯಾಜ್ಯಗಳ ಇತ್ಯರ್ಥಕ್ಕೆ ತ್ವರಿತಗತಿ (ಫಾಸ್ಟ್ ಟ್ರ್ಯಾಕ್) ನ್ಯಾಯಾಲಯಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಅಗತ್ಯ ವಸ್ತುಗಳ ಬೆಲೆ ಏರಿಕೆ ತಡೆಗಟ್ಟಿ ಪಡಿತರ ವ್ಯವಸ್ಥೆ ಬಲಪಡಿಸಬೇಕು ಎಂದು ಆಗ್ರಹಿಸಿದರು.



ದಾವಣಗೆರೆಯಲ್ಲಿ ಭಾನುವಾರ ಮುಕ್ತಾಯಗೊಂಡ ಎಐಎಂಎಸ್‌ಎಸ್ ರಾಜ್ಯಮಟ್ಟದ ಮಹಿಳಾ ಸಮ್ಮೇಳನದ ಪ್ರತಿನಿಧಿ ಅಧಿವೇಶನದಲ್ಲಿ ಎಸ್‌ಯುಸಿಐ ಪಾಲಿಟ್ ಬ್ಯೂರೋ ಸದಸ್ಯ ಕೆ.ರಾಧಾಕೃಷ್ಣ, ಎಐಎಂಎಸ್‌ಎಸ್ ರಾಜ್ಯ ಕಾರ್ಯದರ್ಶಿ ಶೋಭಾ ಎಸ್., ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಛಬ್ಬಿ ಮೊಹಂತಿ, ಎಐಎಂಎಸ್‌ಎಸ್ ರಾಜ್ಯಾಧ್ಯಕ್ಷೆ ಅಪರ್ಣಾ ಬಿ.ಆರ್, ಐಎಂಎಸ್‌ಎಸ್ ಅಖಿಲ ಭಾರತ ಅಧ್ಯಕ್ಷೆ ಕೆಯಾಡೆ, ಎಐಎಂಎಸ್‌ಎಸ್ ಅಖಿಲ ಭಾರತ ಉಪಾಧ್ಯಕ್ಷರಾದ ಸುಧಾ ಕಾಮತ್, ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಕೆ ಉಮಾ, ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷೆ ಅನುರಾಧ ಪಿ.ಎಂ, ರಾಜ್ಯ ಉಪಾಧ್ಯಕ್ಷೆ ಮಂಜುಳಾ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

ಮಹಿಳೆಯರ ಭದ್ರತೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ಅತ್ಯಾಚಾರಿ ಗಳಿಗೆ ತ್ವರಿತವಾಗಿ ಶಿಕ್ಷೆ ನೀಡುವಂತಾಗಬೇಕು. ಅಶ್ಲೀಲ ಸಿನಿಮಾ, ಸಾಹಿತ್ಯ, ಜಾಹೀರಾತು, ವೆಬ್‌ಸೈಟ್, ಮದ್ಯ– ಮಾದಕ ವಸ್ತು ನಿಷೇಧಿಸಬೇಕು. ಶಿಕ್ಷಣ, ಆರೋಗ್ಯ ಕ್ಷೇತ್ರದ ಖಾಸಗೀಕರಣ ನಿಲ್ಲಿಸುವ ಮೂಲಕ ಎಲ್ಲ ಮಹಿಳೆಯರಿಗೂ ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗದ ಖಾತರಿಗೆ ಕ್ರಮ ಕೈಗೊಳ್ಳಬೇಕು ಎಂದೂ ಕೋರಲಾಯಿತು.

ಮಹಿಳೆ ಮತ್ತು ಮಕ್ಕಳ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಅಗತ್ಯ ಸೌಲಭ್ಯ ಗಳನ್ನು ಉಚಿತವಾಗಿ ಒದಗಿಸಬೇಕು. ಮಹಿಳೆಯರು ಹಾಗೂ ಮಕ್ಕಳಲ್ಲಿನ ಅಪೌಷ್ಟಿಕತೆಯ ತಡೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು, ಹೆಣ್ಣು ಮಕ್ಕಳಿಗೆ ಕಲಿಕಾ ಹಂತದಲ್ಲಿ ಜೂಡೋ, ಕರಾಟೆಯಂತಹ ಆತ್ಮರಕ್ಷಣೆ ತರಬೇತಿಯನ್ನು ಕಡ್ಡಾಯಗೊಳಿಸಬೇಕು ಎಂಬ ನಿರ್ಣಯಗಳನ್ನು ರಾಜ್ಯ ಜಂಟಿ ಕಾರ್ಯದರ್ಶಿ ಕೆ.ಎಂ. ಈಶ್ವರಿ ಅವರು ಅನುಮೋದಿಸಿದರು.

ಶಿಕ್ಷಣ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

15) ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ ವ್ಯತ್ಯಾಸಗಳನ್ನು ತಿಳಿಸಿ.

ಉತ್ತರ:– ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ

1) ಎರಡೂ ಘಟ್ಟಗಳು ದಕ್ಷಿಣ ಭಾರತದಲ್ಲಿವೆ
2) ಎರಡೂ ಘಟ್ಟಗಳು ಕರಾವಳಿ ದಂಡೆಯ ಸಮೀಪದಲ್ಲಿವೆ
3) ವಿವಿಧ ಜೀವ ಮತ್ತು ಸಸ್ಯ ಪ್ರಬೇಧಗಳನ್ನು ಎರಡೂ ಘಟ್ಟಗಳಲ್ಲಿ ನೋಡಬಹುದಾಗಿದೆ.
4) ಎರಡೂ ಘಟ್ಟಗಳು ಕಾಡು ಮತ್ತು ಆಯುರ್ವೇದ ಸಸ್ಯಗಳ ಆಗರಗಳಾಗಿವೆ ಇತ್ಯಾದಿ

ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ವ್ಯತ್ಯಾಸಗಳು

1) ಪಶ್ಚಿಮ ಘಟ್ಟ ಎತ್ತರವಾಗಿದೆ ಆದರೆ ಪಶ್ಚಿಮ ಘಟ್ಟಕ್ಕೆ ಹೋಲಿಸಿದರೆ ಪೂರ್ವ ಘಟ್ಟಗಳು ಅಷ್ಟು ಎತ್ತರವಾಗಿಲ್ಲ
2) ಪಶ್ಚಿಮ ಘಟ್ಟ ನಿರಂತರವಾಗಿದೆ ಆದರೆ ಪಶ್ಚಿಮ ಘಟ್ಟಕ್ಕೆ ಹೋಲಿಸಿದರೆ ಪೂರ್ವ ಘಟ್ಟಗಳು ಅಷ್ಟು ನಿರಂತರವಾಗಿಲ್ಲ
3) ಪಶ್ಚಿಮ ಘಟ್ಟದಲ್ಲಿ ಬಹಳಷ್ಟು ನದಿಗಳು ಹುಟ್ಟುತ್ತವೆ ಆದರೆ ಪೂರ್ವ ಘಟ್ಟದ ಮೂಲಕ ಬಹಳಷ್ಟು ನದಿಗಳು ಸಮುದ್ರವನ್ನು ಸೇರುತ್ತವೆ.
4) ಆಣೈಮಲೆ ಪಶ್ಚಿಮ ಘಟ್ಟದಲ್ಲಿ ಅತಿದೊಡ್ಡ ಶಿಖರವಾದರೆ ಅರ್ಮಕೊಂಡ' ಎಂಬುದು ಪೂರ್ವ ಘಟ್ಟಗಳಲ್ಲೇ ಎತ್ತರವಾದ ಶಿಖರವಾಗಿದೆ
5) ಪಶ್ಚಿಮ ಘಟ್ಟಗಳಲ್ಲಿ ತಾಪಿನದಿ ಕಣಿವೆಯಿಂದ ಕನ್ಯಾಕುಮಾರಿ ಭೂಶಿರದವರೆಗೆ ಪಶ್ಚಿಮ ಕರಾವಳಿಗೆ (ಅರಬ್ಬಿ ಸಮುದ್ರತೀರ) ಸಮಾಂತರವಾಗಿ ಹಬ್ಬಿವೆ. ಆದರೆ ಪೂರ್ವದಲ್ಲಿ ಉತ್ತರದಲ್ಲಿ ಮಹಾನದಿ ಕಣಿವೆಯಿಂದ ದಕ್ಷಿಣದಲ್ಲಿ ನೀಲಗಿರಿ ಬೆಟ್ಟಗಳವರೆಗೆ ವಿಸ್ತರಿಸಿದೆ

(ಗಮನಿಸಿ:– ನಿಮ್ಮ ಹೆಚ್ಚಿನ ಅಧ್ಯಯನದ ದೃಷ್ಟಿಯಿಂದ ಪಠ್ಯ ಪುಸ್ತಕದಲ್ಲಿರುವ ಮಾಹಿತಿಗಿಂತ ಸ್ವಲ್ಪ ಹೆಚ್ಚಿನ ಮಾಹಿತಿಯನ್ನು ಈ ಪ್ರಶ್ನೆಯ ಉತ್ತರದಲ್ಲಿ ಸೇರಿಸಲಾಗಿದೆ)

16) ಅಸ್ಪೃಶ್ಯತಾ ನಿವಾರಣೆಯಲ್ಲಿ ಪಾತ್ರವಹಿಸಿದ ಸಮಾಜ ಸುಧಾರಕರನ್ನು ಹೆಸರಿಸಿ

ಉತ್ತರ:– ಸುಧಾರಣಾವಾದಿಗಳು, ಧಾರ್ಮಿಕ ನೇತಾರರು, ಬರಹಗಾರರು ಮತ್ತು ವಿಚಾರವಾದಿಗಳು ಅಸ್ಪೃಶ್ಯತೆಯ ವಿರುದ್ಧ ಹೋರಾಡುತ್ತಲೇ ಬಂದಿದ್ದಾರೆ. ಸ್ವಾಮಿ ವಿವೇಕಾನಂದ, ಡಾ॥ ಬಿ. ಆರ್. ಅಂಬೇಡ್ಕರ್, ಜ್ಯೋತಿ ಬಾಪುಲೆ, ಮಹಾತ್ಮ ಗಾಂಧೀಜಿ, ಮೊದಲಾದವರು ಅಸ್ಪೃಶ್ಯತೆ ಹಾಗೂ ಅಸಮಾನತೆಯ ವಿರುದ್ಧ ಹೋರಾಟ ನಡೆಸಿದರು.

17). ಪೆಟ್ರೋಲಿಯಂ ದ್ರವರೂಪದ ಚಿನ್ನ ಎಂದು ಕರೆಯಲು ಕಾರಣವೇನು?

ಉತ್ತರ: ಪೆಟ್ರೋಲಿಯಂ ಪ್ರಮುಖವಾದ ಶಕ್ತಿ ಸಂಪನ್ಮೂಲ ಮಾತ್ರವಾಗಿರದೇ ಒಂದು ಮುಖ್ಯ ಕಚ್ಚಾ ವಸ್ತುವೂ ಸಹ ಆಗಿದೆ. ಇದನ್ನು ಕಚ್ಚಾ ವಸ್ತುವನ್ನಾಗಿ ಅವಲಂಬಿಸಿದ ಅನೇಕ ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆ. ವ್ಯವಸಾಯ, ಕೈಗಾರಿಕೆ ಹಾಗೂ ಸಾರಿಗೆ ಕ್ಷೇತ್ರಗಳಲ್ಲಿ ಪೆಟ್ರೋಲಿಯಂ ಅಮೂಲ್ಯ ಶಕ್ತಿ ಸಂಪನ್ಮೂಲ. ಇದು ಶಾಂತಿ ಹಾಗೂ ಯುದ್ಧ ಕಾಲಗಳೆರಡರಲ್ಲೂ ಅಮೂಲ್ಯವಾದುದು. ಆದುದರಿಂದ ಇದನ್ನು 'ದ್ರವರೂಪದ ಚಿನ್ನ' ಎಂದು ಕರೆಯಲಾದಿದೆ.

18). ಮಹಿಳಾ ಸಬಲೀಕರಣದ ಅರ್ಥ ತಿಳಿಸಿ.

ಉತ್ತರ: ಮಹಿಳೆಯರನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸಬಲರನ್ನಾಗಿ ಮಾಡುವುದನ್ನೇ ಮಹಿಳಾ ಸಬಲೀಕರಣ ಎನ್ನುತ್ತೇವೆ.

19) ಜನಮಂದೆ ಎಂದರೇನು? ಉದಾಹರಣೆ ಕೊಡಿ.

ಉತ್ತರ:– ಯಾವುದೇ ಪೂರ್ವ ಯೋಜನೆ ಇಲ್ಲದೇ ಅನಿಶ್ಚಿತವಾಗಿರುವ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆ.

ಉದಾಹರಣೆ: * ಚಲನ ಚಿತ್ರ ಮಂದಿರದ ಹತ್ತಿರ ಟಿಕೇಟ್ ಪಡೆಯಲು ಮುತ್ತಿಗೆ ಹಾಕಿದಂತೆ ಸೇರಿರುವ ಜನಸ್ತೋಮ.

20) ದಯಾನಂದ ಸರಸ್ವತಿಯವರು ಭಾರತೀಯರಿಗೆ 'ವೇದಗಳಿಗೆ ಹಿಂದಿರುಗಿ' ಎಂದು ಕರೆ ನೀಡಲು ಕಾರಣವೇನು?

ಉತ್ತರ: ಆರ್ಯಸಮಾಜವನ್ನು ದಯಾನಂದ ಸರಸ್ವತಿಯವರು ಸ್ಥಾಪಿಸಿ ಅದರ ಮೂಲಕ ವೇದಗಳು ಸತ್ಯ ಮತ್ತು ಜ್ಞಾನದ ಮೂಲವಾಗಿರುವ ಹಿನ್ನೆಲೆಯಲ್ಲಿ "ವೇದಗಳಿಗೆ ಹಿಂದಿರುಗಿ" ಎನ್ನುವ ಘೋಷಣೆ ಮಾಡಿದರು.

21) ಯಾವುದನ್ನು ಮೊದಲನೇ ಕರ್ನಾಟಿಕ್ ಕದನವೆಂದು ಕರೆಯಲಾಗಿದೆ?

ಉತ್ತರ:– ಬ್ರಿಟಿಷ್ ಮತ್ತು ಫ್ರೆಂಚರ ನಡುವಿನ ಸೆಣಸಾಟದಲ್ಲಿ ಕರ್ಕಾಟಿಕ್ ಪ್ರದೇಶದ ನವಾಬ ಅನ್ವರುದ್ಧೀನನನ್ನು ಬ್ರಿಟಿಷರು ದಾಳವಾಗಿ ಬಳಸಿಕೊಂಡಿದ್ದರು. ಈ ಸಂದರ್ಭದಲ್ಲಿ ಫ್ರೆಂಚರು ಮದ್ರಾಸನ್ನು ವಶಪಡಿಸಿಕೊಂಡರು. ನಂತರ ಆದ ಒಪ್ಪಂದವೊಂದರ ಪ್ರಕಾರ ಫ್ರೆಂಚರು ಮದ್ರಾಸನ್ನು ಬ್ರಿಟಿಷರಿಗೆ ಹಿಂತಿರುಗಿಸಿದರು. ಈ ಘಟನೆಯನ್ನು ಮೊದಲನೇ ಕರ್ನಾಟಿಕ್ ಕದನವೆಂದು ಕರೆಯಲಾಗಿದೆ.

22) ಎರಡನೇ ಆಂಗ್ಲೋ–ಮೈಸೂರು ಯುದ್ಧವು ಯಾವ ಒಪ್ಪಂದದೊಂದಿಗೆ ಅಂತ್ಯವಾಯಿತು?

ಉತ್ತರ:– ಈ ಯುದ್ಧವು ಮಂಗಳೂರಿನ ಶಾಂತಿ ಒಪ್ಪಂದದೊಂದಿಗೆ 1784ರಲ್ಲಿ ಕೊನೆಗೊಂಡಿತು

23) ಪೂರ್ವಾಗ್ರಹ ಎಂದರೇನು?

ಉತ್ತರ:– ಪೂರ್ವಾಗ್ರಹ ಎಂದರೆ ವ್ಯಕ್ತಿ ಇಲ್ಲವೇ ಸಮೂಹ, ಸಮಾಜದ ದುರಾಭಿಪ್ರಾಯದ ಭಾವನೆಯನ್ನು ಹೊಂದಿರುವುದು ಎಂದರ್ಥ

24) ಸಹಾಯಕ ಸೈನ್ಯ ಪದ್ಧತಿ ಮೊದಲು ಒಪ್ಪಿದವರು ಯಾರು?

ಉತ್ತರ:– ಸಹಾಯಕ ಸೈನ್ಯ ಪದ್ಧತಿ ಮೊದಲು ಒಪ್ಪಿದವರು ಹೈದರಾಬಾದಿನ ನಿಜಾಮ.

25) ಎಲೆ ಉದುರುವ ಮಾನ್ಸೂನ್ ಅರಣ್ಯಗಳನ್ನು ಯಾಕೆ ಹಾಗೆ ಕರೆಯುತ್ತಾರೆ?

ಉತ್ತರ:– ಉಷ್ಣವಲಯದ ಎಲೆ ಉದುರಿಸುವ ಮಾನ್ಸೂನ್ ಕಾಡುಗಳಲ್ಲಿ ಮರಗಳು ನಿರ್ದಿಷ್ಟ ಒಣ ಹವೆಯ ಋತುವಿನಲ್ಲಿ (ವಸಂತ ಋತು ಮತ್ತು ಬೇಸಿಗೆಯ ಆರಂಭದಲ್ಲಿ) ತಮ್ಮ ಎಲೆಗಳನ್ನು ಉದುರಿಸುತ್ತವೆ. ಹೀಗಾಗಿ ಇವುಗಳನ್ನು ಎಲೆ ಉದುರುವ 'ಮಾನ್ಸೂನ್ ಅರಣ್ಯಗಳು' ಎಂತಲೂ ಕರೆಯುವರು

26) ಬ್ರಿಟಿಷ್ ಏಕರೂಪದ ಆಡಳಿತ ವ್ಯವಸ್ಥೆಯು ಭಾರತೀಯರಲ್ಲಿ ಹೇಗೆ ರಾಷ್ಟ್ರೀಯತೆಯನ್ನು ಬೆಳೆಸಿತು?

ಉತ್ತರ : ದೇಶದಲ್ಲಿ ಹಲವಾರು ಸಂಸ್ಥಾನಗಳು ಅಸ್ತಿತ್ವದಲ್ಲಿದ್ದರೂ ಅವುಗಳ ಮೇಲೆ ಬ್ರಿಟಿಷರು ನಿಯಂತ್ರಣ ಹೊಂದಿದ್ದರು. ಇದರಿಂದ ಆಡಳಿತ ವ್ಯವಸ್ಥೆಯಲ್ಲಿ ಏಕರೂಪತೆಯನ್ನು, ಕಾನೂನು ಸುವ್ಯವಸ್ಥೆಯನ್ನು ಸಂರಕ್ಷಿಸುವಲ್ಲಿ ಬ್ರಿಟಿಷರು ಸಫಲರಾಗಿದ್ದರು. ಇದರಿಂದ ದೇಶದಲ್ಲಿ ಸಮಾನತೆ ಏಕರೂಪದ ಅಧಿಕಾರಶಾಹಿತ್ವ ಅಸ್ತಿತ್ವಕ್ಕೆ ಬಂದಿತು ಇದರಿಂದ ಭಾರತೀಯರಲ್ಲಿ ರಾಷ್ಟ್ರೀಯತೆಯನ್ನು ಬೆಳೆಸಿತು

27) ಸುರಪುರದ ರಾಜನನ್ನು(ವೆಂಕಟಪ್ಪನನ್ನು) ಬ್ರಿಟಿಷರು ಸಂಶಯದಿಂದ ನೋಡಲು ಕಾರಣ ಏನು? *(ಮುಂದುವರಿಯುವುದು)*

II puc : Chemistry

REVISION and MODEL QUESTIONS

Fill in the blank

7) On addition of conc. H_2SO_4 to a chloride salt, colourless fumes are evolved but in case of iodide salt, violet fumes come out. This is because ……………

Ans:- HI gets oxidized to I_2

Answer ALL of the following:

1. Name a colligative property.

Ans:- Osmotic pressure is a Colligative property. Some of the other colligative properties are –
a) Relative lowering of vapour pressure
b) Elevation in boiling point
c) Depression in freezing point

Extra information:-

The properties of dilute solutions which depend only on the number of solute particles and not on the nature of solute particles are called colligative properties.

2. What does the van't Hoff factor ' i ' for a solute in a solvent account for?

Ans:- The van't Hoff factor ' i ' for a solute in a solvent accounts for the extent of association (or) dissociation of a solute.

3. What is a secondary cell?

Ans:- A secondary cell is a cell that can be recharged again.

4. By how many times does the $t_{½}$ of zero order reaction increase if the initial concentration of the reactant is doubled?

Ans:- If the initial concentration of the reactant is doubled $t_{½}$ of the zero order reaction gets doubled.

5. What is heterogeneous catalysis?

Ans:- Heterogeneous catalysis is a catalytic process wherein reactants and catalyst are in different phases.

6. Give the composition of 'copper matte'.

Ans:- The composition of 'copper matte' is $Cu_2S + FeS$.


7. $XeF_6 + 3H_2O \rightarrow P + 6HF$. What is P?

Ans:- In the given eqn $XeF_6 + 3H_2O \rightarrow P + 6HF$
P is XeO_3.

8. A racemic mixture is optically inactive. Why?


Ans:- A racemic mixture is optically inactive because the rotation by an enantiometer is cancelled by the other.

9.



Give the IUPAC name of X.

Ans:- In the eqn,



the IUPAC name of X is triiodomethane.

10. Name a nitrogen base present both in DNA and in RNA.

Ans:- A nitrogen base present both in DNA and in RNA is Adenine or guanine or cytosine.

11. Give two differences between Schottky and Frenkel defects in ionic solids.

Ans:- Two differences between Schottky and Frenkel defects in ionic solids.

Schottky defect	Frenkel defect
Density decreases	No change in density.
Observed when cations and anions have similar size.	Observed when cations and anions differ in similar size.
Equal number of cations and anions are missing from lattice points.	The smaller ion gets dislocated from its lattice point.

Note: write any two differences.

12. Name the gases liberated at anode and cathode respectively when an aqueous solution of sodium chloride is electrolysed.

Ans:- When an aqueous solution of sodium chloride is electrolysed the gases liberated are –
at anode - Chlorine and
at cathode – Hydrogen

13. Given $2NO(g) + O_2(g)\ 2NO_2(g)$; rate = $k[NO]^2 [O_2]^1$. By how many times does the rate of the reaction change when the volume of the reaction vessel is reduced to $1/3^{rd}$ of its original volume? Will there be any change in the order of the reaction?

Ans:- Given, $2NO(g) + O_2(g)\ 2NO_2(g)$;
rate = $k[NO]^2 [O_2]^1$.

The rate of the reaction changes 27 times when the volume of the reaction vessel is reduced to $1/3^{rd}$ of its original volume.

There will be no change in the order of the reaction.

14. Give reasons:
i) actinoids show variable oxidation states
ii) Zr and Hf have almost identical radii


Ans:- Reasons:
i) actinoids show variable oxidation states due to comparable energies of 5f, 6d and 7s levels
ii) Zr and Hf have almost identical radii due to lanthanoid contraction

15. What is Lucas reagent? Between primary and tertiary alcohols, which one of these will react faster with Lucas reagent?

Ans:- Lucas reagent is Conc. HCl + $ZnCl_3$. ***(Contd)***

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು



ಡಿಜಿಟಲ್ ಕೊಠಡಿಯಲ್ಲಿ ಮಕ್ಕಳ ಓದು

'ನನ್ನಂತಾಗು... ನನಗಿಂತ ಉನ್ನತಿಗ್ಹೋಗು...'

ಡಿ.ಬಿ.ನಾಗರಾಜು

ತುಮಕೂರಿನಿಂದ ಹತ್ತು ಕಿ.ಮೀ ದೂರದಲ್ಲಿರುವ ಮೇಳೇಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ತಿಂಗಳಿಗೊಮ್ಮೆ ನಡೆಯುವ 'ನನ್ನಂತಾಗು... ನನಗಿಂತ ಉನ್ನತಿಗ್ಹೋಗು...' ಎಂಬ ಕಾರ್ಯಕ್ರಮ ಶೈಕ್ಷಣಿಕ ವಲಯವನ್ನು ತನ್ನತ್ತ ಸೆಳೆಯುತ್ತಿದೆ.

ಭವಿಷ್ಯದ ಗುರಿಯತ್ತ ಬಾಲ್ಯದಿಂದಲೇ ಚಿತ್ತ ಹರಿಸುವಂತೆ ಮಾಡುವ ಕಾರ್ಯಕ್ರಮವೇ 'ನನ್ನಂತಾಗು... ನನಗಿಂತ ಉನ್ನತಿಗ್ಹೋಗು ...'

ಇದೇ ಶಾಲೆಯಲ್ಲಿ ಓದಿ ಸರ್ಕಾರಿ ಅಧಿಕಾರಿಗಳಾದವರು, ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವವರು, ಶಿಕ್ಷಕರು, ಖಾಸಗಿ ವಲಯದಲ್ಲಿ ಕೆಲಸ ಮಾಡುತ್ತಿರುವವರು ಸೇರಿದಂತೆ ನಿವೃತ್ತರು, ಸಮಾಜದ ವಿವಿಧ ಸ್ತರಗಳಲ್ಲಿ ಗುರುತಿಸಿಕೊಂಡಿರುವ ಸಾಧಕರು ಹಾಗೂ ಆದರ್ಶ ವ್ಯಕ್ತಿಗಳನ್ನು ಪ್ರತಿ ತಿಂಗಳ ಶನಿವಾರ ನಡೆಯಲಿರುವ ಶಾರದಾ ಪೂಜೆಗೆ ಆಹ್ವಾನಿಸಲಾಗುತ್ತದೆ. ಮಕ್ಕಳಿಗೆ ಪ್ರೇರಣಾದಾಯಕ ಮಾತುಗಳಾಡಿ, ಮಕ್ಕಳ ಮನದಲ್ಲಿ ಕನಸು ಬಿತ್ತಿ, ಸಾಕಾರದ ಮಾರ್ಗವನ್ನು ತಿಳಿಸಿಕೊಡುವುದೇ ಈ ಕಾರ್ಯಕ್ರಮದ ವೈಶಿಷ್ಟ್ಯ.

ಶಾಲೆಯ ಪ್ರಭಾರ ಮುಖ್ಯಶಿಕ್ಷಕ ಪಿ.ಪರಮೇಶ್ ಈ ಕಾರ್ಯಕ್ರಮ ನಿರ್ವಹಿಸುತ್ತಿದ್ದಾರೆ. ಇದರ ಸಾಕಾರ ಹಾಗೂ ಸಮುದಾಯದ ಒಳಗೊಳ್ಳುವಿಕೆಗಾಗಿ ಹಳೆಯ ವಿದ್ಯಾರ್ಥಿಗಳ ಬಳಗವು ಕೈ ಜೋಡಿಸಿದೆ. ತಾವು ಓದಿದ ಶಾಲೆಯ ಈ ವಿನೂತನ ಕಾರ್ಯಕ್ರಮದಲ್ಲಿ ಭಾಗಿಯಾಗುವವರ ಸಂಖ್ಯೆಯು ಹೆಚ್ಚುತ್ತಿದೆ.

ಕಾರ್ಯಕ್ರಮದಲ್ಲಿ ಭಾಗಿಯಾದ ಹಳೆಯ ವಿದ್ಯಾರ್ಥಿಗಳು, ಶಾಲೆಯೊಂದಿಗಿನ ತಮ್ಮ ಒಡನಾಟ ಹೆಚ್ಚಿಸಿಕೊಳ್ಳುವ ಜೊತೆಗೆ ಶಾಲಾಭಿವೃದ್ಧಿಗಾಗಿ ದೇಣಿಗೆ ನೀಡುತ್ತಿದ್ದಾರೆ. ಪರಿಣಾಮ 2019–20ನೇ ಸಾಲಿನಲ್ಲಿ 1ರಿಂದ 7ನೇ ತರಗತಿಯವರೆಗೆ ಕೇವಲ 16 ಮಕ್ಕಳಿದ್ದು, ಬಾಗಿಲು ಮುಚ್ಚುವ ಹಂತಕ್ಕೆ ಬಂದಿದ್ದ ಸರ್ಕಾರಿ ಶಾಲೆಯೊಂದು ಸಬಲೀಕರಣಗೊಂಡಿದೆ.

> ಬಾಗಿಲು ಮುಚ್ಚುವ ಸ್ಥಿತಿಯಲ್ಲಿದ್ದ ಸರ್ಕಾರಿ ಶಾಲೆಯೊಂದು ಸಮುದಾಯದ ಒಳಗೊಳ್ಳುವಿಕೆಯ ನಂತರ ಪ್ರಗತಿ ಪಥದಲ್ಲಿದೆ ಎಂಬುದಕ್ಕೆ ಮೇಳೇಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯೇ ಜೀವಂತ ನಿದರ್ಶನವಾಗಿದೆ.

ಪ್ರಸಕ್ತ ಸಾಲಿನಲ್ಲಿ 58 ಮಕ್ಕಳು ಕಲಿಯುತ್ತಿದ್ದು, ಇವರಲ್ಲಿ ನಾಲ್ವರು ಮೊರಾರ್ಜಿ ಶಾಲೆಗೆ ಆಯ್ಕೆಯಾಗಿದ್ದಾರೆ. ಶಾಲೆಯಲ್ಲಿ ಡಿಜಿಟಲ್ ಕೊಠಡಿಯೂ ಇಲ್ಲಿದೆ. ಶಿಥಿಲಾವಸ್ಥೆಯಲ್ಲಿದ್ದ ಕೊಠಡಿಗಳು ದುರಸ್ತಿಗೊಂಡಿವೆ. ವಿಶಾಲ ಮೈದಾನದಲ್ಲಿ ಕ್ರೀಡಾ ತರಬೇತಿಯೂ ನಡೆದಿದೆ. ಆರನೇ ತರಗತಿಯಿಂದ ಆಂಗ್ಲ ಮಾಧ್ಯಮವೂ ಆರಂಭಗೊಂಡಿದೆ.

2021–22ನೇ ಶೈಕ್ಷಣಿಕ ಸಾಲಿನಲ್ಲಿ ಆರಂಭವಾದ ಈ ಕಾರ್ಯಕ್ರಮದಲ್ಲಿ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಬಿ.ವಜ್ರಪ್ಪ, ವಿಶ್ರಾಂತ ಸಹ ಪ್ರಾಧ್ಯಾಪಕ (ಇತಿಹಾಸ) ಸಿದ್ದಲಿಂಗಯ್ಯ, ಎಚ್‌ಎಂಟಿಯ ನಿವೃತ್ತ ನೌಕರ ಹಾಗೂ ರಾಷ್ಟ್ರೀಯ ಕಬಡ್ಡಿ ತರಬೇತುದಾರರರಾದ ಎಸ್. ಸಿದ್ದಗಂಗಯ್ಯ, ರೈಲ್ವೆಯ ನಿವೃತ್ತ ಎಂಜಿನಿಯರ್ ಅಂಜಿನಪ್ಪ, ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಎಂ.ಎಸ್.ಗಂಗರಾಜಯ್ಯ ಪಾಲ್ಗೊಂಡಿದ್ದು, ವಿದ್ಯಾರ್ಥಿ ಸಮೂಹದಲ್ಲಿ ಹೊಸ ಭರವಸೆ ಮೂಡಿಸಿದ್ದಾರೆ.

ಇವರಲ್ಲಿ ಸಿದ್ದಲಿಂಗಯ್ಯ ಶಾಲೆಗಾಗಿ ₹ 1 ಲಕ್ಷ ದೇಣಿಗೆ ನೀಡಿದ್ದಾರೆ. ಈ ಹಣವನ್ನು ಬ್ಯಾಂಕ್‌ನಲ್ಲಿ ಡಿಪಾಸಿಟ್ ಮಾಡಿದ್ದು, ಬರುವ ಬಡ್ಡಿಯ ಮೊತ್ತವನ್ನು ಶೈಕ್ಷಣಿಕ ಪ್ರಗತಿಗೆ ಬಳಸಿಕೊಳ್ಳುವಂತೆ ತಿಳಿಸಿದ್ದಾರೆ. ಅಂಜಿನಪ್ಪ ಶಾಲೆಯ ಕಟ್ಟಡ ನಿಧಿಗೆ ದೇಣಿಗೆ ನೀಡುವುದಾಗಿ ಹೇಳಿದ್ದಾರೆ. ಗಂಗರಾಜಯ್ಯ ಮಕ್ಕಳಿಗೆ ಬಟ್ಟೆ ಕೊಡಿಸುತ್ತಿದ್ದಾರೆ. ಸಿದ್ದಗಂಗಯ್ಯ ಕ್ರೀಡೆಗೆ ಪ್ರೋತ್ಸಾಹ ನೀಡುತ್ತಿದ್ದರೆ, ಬಿ.ವಜ್ರಪ್ಪ ಮಕ್ಕಳಿಗೆ ಕ್ರೀಡಾ ತರಬೇತಿ ನೀಡುತ್ತಿದ್ದಾರೆ.

ಸಾಫ್ಟ್‌ವೇರ್ ಎಂಜಿನಿಯರ್ ಎನ್.ರಾಜಶೇಖರ್, ಪಿಎಸ್‌ಐ ವಿಜಯಕುಮಾರಿ, ಶಿಕ್ಷಕಿ ಸರೋಜಮ್ಮ, ಬಯೋಕಾನ್‌ನ ಉದ್ಯೋಗಿ ರಮೇಶ್, ಖಾಸಗಿ ಕಂಪನಿಯೊಂದರ ಬ್ಯುಸಿನೆಸ್ ಹೆಡ್ ನಿಖಿಲ್, ಕರಾಟೆ ಶಿಕ್ಷಕ ನಿರಂಜನಪ್ಪ, ಅಂಗವಿಕಲ ಅಂತರರಾಷ್ಟ್ರೀಯ ಕ್ರೀಡಾಪಟು ಎಂ.ನೀಲಾಂಜನಯ್ಯ ಸಹ ಕಾರ್ಯಕ್ರಮದಲ್ಲಿ ಭಾಗಿಯಾಗಿ ಶಾಲೆಯಲ್ಲಿ ಕಲಿತದ್ದರ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿ, ಸಾಧನೆಯ ಕಠಿಣ ಪರಿಶ್ರಮದ ಹಾದಿಯ ಬಗ್ಗೆ ಮಕ್ಕಳಿಗೆ ತಿಳಿಸಿದ್ದು; 'ನನಗಿಂತ ಉನ್ನತ ಸ್ಥಾನಕ್ಕೋಗಿ' ಎಂದು ಹುರಿದುಂಬಿಸಿದ್ದಾರೆ. ಇದರೊಟ್ಟಿಗೆ ವಿವಿಧ ಸ್ವಯಂ ಸೇವಾ ಸಂಸ್ಥೆಗಳ (ಎನ್‌ಜಿಒ) ಸಹಕಾರದಿಂದ ಶಾಲೆಯ ಅಭಿವೃದ್ಧಿಗೂ ಕೈಜೋಡಿಸಿದ್ದಾರೆ.

ಇದಕ್ಕೆ ಪೂರಕವಾಗಿ ಹಳೆಯ ವಿದ್ಯಾರ್ಥಿಗಳ ಬಳಗವು ತಮ್ಮಲ್ಲೇ ₹ 1 ಲಕ್ಷ ದೇಣಿಗೆ ಸಂಗ್ರಹಿಸಿ, ವಿವಿಧ ಕೆಲಸಗಳನ್ನು ಸದ್ದಿಲ್ಲದೆ ಮಾಡಿದೆ. ಗ್ರಾಮ ಪಂಚಾಯಿತಿಯ ಮಾಜಿ ಸದಸ್ಯ ಮಲ್ಲಿಕಾರ್ಜುನ ಮೇಳೇಹಳ್ಳಿ ಇದರ ಸಾರಥಿಯಾಗಿದ್ದಾರೆ. ಪಂಚಾಯಿತಿಯಿಂದಲೂ ಅನುದಾನ ಬಿಡುಗಡೆ ಮಾಡಿಸಿ, ಹಲವು ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಶಿಥಿಲಾವಸ್ಥೆಯಲ್ಲಿದ್ದ ಕೊಠಡಿಗಳ ದುರಸ್ತಿ ಮಾಡಿಸಿದ್ದಾರೆ. ರೋಟರಿಯ ಸಹಯೋಗದಲ್ಲಿ ಹಲವು ಕಾರ್ಯಕ್ರಮ ನಡೆಸುವ ಮೂಲಕ ಶಾಲೆಯ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದಾರೆ.

'ಕಲಿಯಲು ನೀಡಿ ಸಹಕಾರ'

ಶಾಲೆಯ ಹಳೆ ವಿದ್ಯಾರ್ಥಿಗಳ ಬಳಗವು ಎರಡು ವರ್ಷದಿಂದಲೂ 'ಶಾಲೆಗೆ ಬನ್ನಿ ಶನಿವಾರ, ಕಲಿಯಲು ನೀಡಿ ಸಹಕಾರ' ಎಂಬ ಕಾರ್ಯಕ್ರಮವನ್ನೂ ನಡೆಸುತ್ತಿದೆ. ರೋಟರಿ ಸಂಸ್ಥೆಯ ಸಹಕಾರ ಇದಕ್ಕಿದೆ.

ನಿರಂಜನಪ್ಪ ಮಕ್ಕಳಿಗೆ ಕರಾಟೆ ಕಲಿಸಿದರೆ, ರಾಜಶೇಖರ್ ಕಂಪ್ಯೂಟರ್ ಶಿಕ್ಷಣ ನೀಡುತ್ತಿದ್ದಾರೆ. ಚೇತನ್ ನೃತ್ಯ ಹೇಳಿಕೊಟ್ಟರೆ, ನಯನಾ ಜನಾರ್ದನ್, ಸಿದ್ದಗಂಗಾ ದೃಢವಾದ ಆತ್ಮವಿಶ್ವಾಸ ಬೆಳೆಸಿಕೊಳ್ಳುವ ಬಗ್ಗೆ ತಿಳಿಸುತ್ತಿದ್ದಾರೆ. ಜ್ಞಾನೇಶ್ ಕ್ರೀಡಾ ತರಬೇತಿ ಕೊಡುತ್ತಿದ್ದಾರೆ. ಎಂ.ಎಚ್.ರಮೇಶ್ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ.

'ನಾಟಕದಿಂದ ದೇಣಿಗೆ'

1920ರಲ್ಲಿ ಆರಂಭಗೊಂಡಿದ್ದ ಶಾಲೆ, 50ರ ದಶಕದಲ್ಲಿ ಹಿರಿಯ ಪ್ರಾಥಮಿಕ ಪಾಠಶಾಲೆಯಾಯಿತು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದರಿಂದ ಕೊಠಡಿಗಳ ಕೊರತೆ ಕಾಡಿತು. ಆಗ ಊರವರೇ ಹೊಸ ಕೊಠಡಿ ಕಟ್ಟಲು ಮುಂದಾದರು. ಅದಕ್ಕಾಗಿಯೇ 'ಕೃಷ್ಣ ಪಾರಿಜಾತ' ಎಂಬ ನಾಟಕವನ್ನು ಕಲಿತರು. ಪ್ರದರ್ಶನ ಆಯೋಜಿಸಿ, ಟಿಕೆಟ್ ಮಾರಾಟದ ಮೂಲಕ ₹ 8 ಸಾವಿರ ದೇಣಿಗೆ ಸಂಗ್ರಹಿಸಿ, ಕೊಠಡಿಗಳನ್ನು ಕಟ್ಟಿದ್ದ ಐತಿಹ್ಯ ಈ ಶಾಲೆಯದ್ದಾಗಿದೆ. ❖

> **ಶಾಲೆಗೆ ಸಮುದಾಯವನ್ನು ಕರೆತಂದಿದ್ದರಿಂದ ಸ್ವರೂಪವೇ ಬದಲಾಗಿದೆ. ನಮ್ಮ ಶಾಲೆ ಎಂಬ ಹೆಮ್ಮೆ ಎಲ್ಲರಲ್ಲೂ ಮನೆ ಮಾಡಿದೆ. ಕಾನ್ವೆಂಟ್‌ಗೆ ಹೋಗುತ್ತಿದ್ದ ಮಕ್ಕಳಷ್ಟೇ ಅಲ್ಲ, ಸುತ್ತಲಿನ ಹಳ್ಳಿ ಮಕ್ಕಳೂ ಇದೀಗ ನಮ್ಮಲ್ಲಿಗೆ ಬರುತ್ತಿದ್ದಾರೆ. ಇಲಾಖೆಯಿಂದಲೂ ಮೆಚ್ಚುಗೆ ವ್ಯಕ್ತವಾಗಿದೆ.**
>
> **ಪಿ.ಪರಮೇಶ್,** ಪ್ರಭಾರ ಮುಖ್ಯಶಿಕ್ಷಕ, ಮೇಳೇಹಳ್ಳಿ ಶಾಲೆ





ಸುಭಾಷಿತ

ಕ್ರಿಯೆಯಿಲ್ಲದ ಪ್ರೀತಿ ಅರ್ಥಹೀನ ಮತ್ತು ಪ್ರೀತಿಯಿಲ್ಲದ ಕ್ರಿಯೆ ಅಸಂಬದ್ಧ.

–ದೀಪಕ್ ಚೋಪ್ರಾ

ವಿಜ್ಞಾನ ಕಾಂಗ್ರೆಸ್ ನಡೆಯದಿರಲು ಸರ್ಕಾರದ ಅಸಹಕಾರವೇ ಕಾರಣ

ಪ್ರತಿವರ್ಷ ಜನವರಿ ಮೊದಲ ವಾರದಲ್ಲಿ ಆಯೋಜನೆಗೊಳ್ಳುತ್ತಿದ್ದ ವಿಜ್ಞಾನ ಕಾಂಗ್ರೆಸ್ ಈ ವರ್ಷ ನಡೆದಿಲ್ಲ. ಮುಂದಿನ ದಿನಗಳಲ್ಲಿ ಅದು ನಡೆಯಲಿದೆಯೇ ಎಂಬುದರ ಬಗ್ಗೆಯೂ ಖಚಿತತೆ ಇಲ್ಲ. ಕೋವಿಡ್ ಸಾಂಕ್ರಾಮಿಕದ ಸಂದರ್ಭವನ್ನು ಬಿಟ್ಟು, ಶತಮಾನಕ್ಕೂ ಹೆಚ್ಚಿನ ಕಾಲದಿಂದ ಈ ವಿಜ್ಞಾನ ಕಾರ್ಯಕ್ರಮ ನಿರಂತರವಾಗಿ ನಡೆದುಕೊಂಡು ಬಂದಿದೆ. ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇದು ದೇಶದಲ್ಲಿ ನಡೆಯುತ್ತಿದ್ದ ಅತ್ಯಂತ ಮಹತ್ವದ ಕಾರ್ಯಕ್ರಮ. ಸ್ವಾತಂತ್ರ್ಯಾನಂತರ, ಪ್ರಧಾನಮಂತ್ರಿಯವರೇ ಈ ಕಾರ್ಯಕ್ರಮವನ್ನು ಉದ್ಘಾಟಿಸುವುದು ಒಂದು ಪದ್ಧತಿಯೇ ಆಗಿತ್ತು. ಹಾಗಾಗಿಯೇ ಇದು ರಾಷ್ಟ್ರೀಯ ಮಹತ್ವದ ಕಾರ್ಯಕ್ರಮ ಎಂದು ಪರಿಗಣಿತವಾಗಿತ್ತು. ದೇಶದ ಪ್ರಗತಿ ಮತ್ತು ಅಭಿವೃದ್ಧಿಗಾಗಿ ವಿಜ್ಞಾನಕ್ಕೆ ಮಹತ್ವ ನೀಡಬೇಕು ಎಂದು ರಾಜಕೀಯ ನಾಯಕರು ಭಾವಿಸಿದ್ದರ ಸಂಕೇತವಾಗಿಯೂ ಇದು ಇತ್ತು. ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರು ವಿಜ್ಞಾನ ಮತ್ತು ವೈಜ್ಞಾನಿಕ ಸ್ಫೂರ್ತಿಗೆ ಪ್ರೋತ್ಸಾಹ ನೀಡುವ ವೇದಿಕೆಯಾಗಿ ಈ ಕಾರ್ಯಕ್ರಮವನ್ನು ಪರಿಗಣಿಸಿದ್ದರು. ದೇಶದ ಉನ್ನತ ವಿಜ್ಞಾನಿಗಳು, ವಿಜ್ಞಾನ ಸಂಸ್ಥೆಗಳು ಮತ್ತು ಸಂಘಟನೆಗಳ ಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು. ಎಲ್ಲ ಹಂತಗಳ ವಿಜ್ಞಾನಿಗಳು ಮತ್ತು ಸಂಶೋಧಕರು ಹಾಗೂ ವಿದ್ಯಾರ್ಥಿಗಳು ಮತ್ತು ಸಾಮಾನ್ಯ ಜನರಿಗೆ ಪರಸ್ಪರ ಭೇಟಿಯಾಗಲು, ಸಂವಾದ ನಡೆಸಲು ಇದೊಂದು ಅವಕಾಶವನ್ನು ಸೃಷ್ಟಿಸಿಕೊಡುತ್ತಿತ್ತು. ವಿಜ್ಞಾನ ಪ್ರಬಂಧಗಳ ಕುರಿತು ಉಪಯುಕ್ತ ಮತ್ತು ಮಾಹಿತಿಯುಕ್ತ ಚರ್ಚೆಗಳು ಹಾಗೂ ಪ್ರದರ್ಶನಗಳು ನಡೆಯುತ್ತಿದ್ದವು. ಕಳೆದ ವರ್ಷಗಳಲ್ಲಿ ಈ ವಿಜ್ಞಾನ ಕಾಂಗ್ರೆಸ್ ಅನ್ನು ಸಣ್ಣ ಪಟ್ಟಣಗಳ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ನಡೆಸಲಾಗಿತ್ತು.



> ವಿಜ್ಞಾನ ಕಾಂಗ್ರೆಸ್‌ನ ಕಾರ್ಯಚಟುವಟಿಕೆ ಕುರಿತು ಸರ್ಕಾರಕ್ಕೆ ಅಸಮಾಧಾನ ಇದ್ದಿದ್ದರೆ, ಅದನ್ನು ಸರಿಪಡಿಸಬಹುದಿತ್ತು. ಬದಲಿಗೆ, ಅದರ ಕತ್ತು ಹಿಸುಕುವ ಕೆಲಸ ಮಾಡಬಾರದಿತ್ತು

ಆದರೆ, ಇತ್ತೀಚಿನ ವರ್ಷಗಳಲ್ಲಿ ವಿಜ್ಞಾನ ಕಾಂಗ್ರೆಸ್ ತನ್ನ ಮೌಲ್ಯ ಮತ್ತು ಪ್ರಸಿದ್ಧಿಯನ್ನು ಕಳೆದುಕೊಂಡಿದೆ. ಪ್ರಮುಖ ವಿಜ್ಞಾನಿಗಳು ಹಲವರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದನ್ನು ನಿಲ್ಲಿಸಿದ್ದಾರೆ. ಹಲವು ಸಂಸ್ಥೆಗಳು ಕಾರ್ಯಕ್ರಮದಲ್ಲಿ ಭಾಗಿಯಾಗಲು ಆಸಕ್ತಿ ತೋರುತ್ತಿಲ್ಲ. ಮಂಡನೆಯಾಗುವ ಪ್ರಬಂಧಗಳ ಗುಣಮಟ್ಟ, ಚರ್ಚೆಯ ಮಟ್ಟ ಎಲ್ಲವೂ ಕುಸಿದಿವೆ. ಮಂಡನೆಯಾದ ಪ್ರಬಂಧಗಳ ವಿಷಯಗಳ ಕುರಿತು ವಿವಾದಗಳು ಉಂಟಾಗಿವೆ. ಕಾರ್ಯಕ್ರಮಕ್ಕೆ ಆರ್ಥಿಕ ನೆರವು ನೀಡಲು ಸರ್ಕಾರವು ನಿರಾಕರಿಸಿರುವುದು ಬಿಕ್ಕಟ್ಟಿಗೆ ಕಾರಣವಾಗಿದೆ. ಇಂಡಿಯನ್ ಸೈನ್ಸ್ ಕಾಂಗ್ರೆಸ್ ಅಸೋಸಿಯೇಷನ್ (ಐಎಸ್‌ಸಿಎ) ಎಂಬ ಖಾಸಗಿ ಸಂಸ್ಥೆಯು ಸರ್ಕಾರದ ನೆರವಿನೊಂದಿಗೆ ಕಾರ್ಯಕ್ರಮವನ್ನು ಆಯೋಜಿಸುತ್ತಿತ್ತು. ಐಎಸ್‌ಸಿಎ ಹಣಕಾಸಿನ ವಿಚಾರದಲ್ಲಿ ಅವ್ಯವಹಾರ ನಡೆಸಿದೆ ಮತ್ತು ಏಕಪಕ್ಷೀಯವಾಗಿ ನಿರ್ಧಾರಗಳನ್ನು ಕೈಗೊಳ್ಳುತ್ತಿದೆ ಎಂಬ ಆರೋಪಗಳಿವೆ ಎಂದು ಸರ್ಕಾರ ಹೇಳಿದೆ. ಇದೇ ಕಾರಣ ಕೊಟ್ಟು ಆರ್ಥಿಕ ನೆರವು ನೀಡಲು ಸರ್ಕಾರವು ನಿರಾಕರಿಸಿದೆ. ಈ ವರ್ಷದ ವಿಜ್ಞಾನ ಕಾಂಗ್ರೆಸ್‌ನ ಸ್ಥಳವನ್ನು ಲಖನೌ ವಿಶ್ವವಿದ್ಯಾಲಯದಿಂದ ಜಲಂಧರ್‌ನ ಖಾಸಗಿ ವಿಶ್ವವಿದ್ಯಾಲಯವೊಂದಕ್ಕೆ ವರ್ಗಾಯಿಸಲಾಗಿದೆ. ಆದರೆ, ಅನಿರೀಕ್ಷಿತ ಸವಾಲುಗಳ ಕಾರಣದಿಂದಾಗಿ ಕಾರ್ಯಕ್ರಮ ನಡೆಸಲಾಗದು ಎಂದು ಈ ವಿಶ್ವವಿದ್ಯಾಲಯ ಕೂಡ ಈಗ ಹೇಳಿದೆ. ಕಾರ್ಯಕ್ರಮದ ಆತಿಥ್ಯ ವಹಿಸಲು ವಿಶ್ವವಿದ್ಯಾಲಯಗಳು ಮುಂದೆ ಬರಬೇಕು ಎಂದು ಐಎಸ್‌ಸಿಎ ಕೋರಿದೆ. ಸಾಧ್ಯವಾದರೆ ಫೆಬ್ರುವರಿಯಲ್ಲಿ ಕಾರ್ಯಕ್ರಮ ನಡೆಸಬಹುದು ಎಂದಿದೆ.

ವಿಜ್ಞಾನ ಕಾಂಗ್ರೆಸ್‌ನಿಂದ ಅಂತರ ಕಾಯ್ದುಕೊಂಡಿರುವ ಸರ್ಕಾರವು ಬೇರೊಂದು ವಿಜ್ಞಾನ ಸಮಾವೇಶಕ್ಕೆ ಪ್ರೋತ್ಸಾಹ ನೀಡುತ್ತಿದೆ. 'ವಿಜ್ಞಾನ ಭಾರತಿ'ಯ ಸಹಯೋಗದಲ್ಲಿ ನಡೆಸಲಾಗುವ ಇಂಡಿಯಾ–ಇಂಟರ್‌ನ್ಯಾಷನಲ್ ಸೈನ್ಸ್ ಫೆಸ್ಟಿವಲ್‌ಗೆ ಸರ್ಕಾರ ನೆರವು ನೀಡುತ್ತಿದೆ. ವಿಜ್ಞಾನ ಭಾರತಿಯು ಸಂಘ ಪರಿವಾರದ ಜೊತೆ ನಂಟು ಇರುವ ಸಂಸ್ಥೆಯಾಗಿದೆ. ಈ ಸಂಸ್ಥೆಯ ವಾರ್ಷಿಕ ಸಭೆಯು ಹರಿಯಾಣದ ಫರೀದಾಬಾದ್‌ನಲ್ಲಿ ಈ ತಿಂಗಳು ನಡೆಯಲಿದೆ. ಈ ಸಂಸ್ಥೆಯು ನಡೆಸುವ ಕಾರ್ಯಕ್ರಮವನ್ನು ವಿಜ್ಞಾನ ಕಾಂಗ್ರೆಸ್‌ಗೆ ಪರ್ಯಾಯ ಎಂದು ಬಿಂಬಿಸಲು ಸರ್ಕಾರ ಯತ್ನಿಸುತ್ತಿದೆ. ವಿಜ್ಞಾನ ಕಾಂಗ್ರೆಸ್‌ನ ಕಾರ್ಯಚಟುವಟಿಕೆ ಕುರಿತು ಸರ್ಕಾರಕ್ಕೆ ಅಸಮಾಧಾನ ಇದ್ದಿದ್ದರೆ ಅದನ್ನು ಸರಿಪಡಿಸುವ ಕೆಲಸವನ್ನು ಮಾಡಬಹುದಿತ್ತು. ಅದರ ಬದಲಿಗೆ, ವಿಜ್ಞಾನ ಕಾಂಗ್ರೆಸ್‌ನ ಕತ್ತು ಹಿಸುಕುವ ಕೆಲಸ ಮಾಡಬಾರದಿತ್ತು. ವಿಜ್ಞಾನ ಕಾಂಗ್ರೆಸ್‌ಗೆ ಇದ್ದ ಪ್ರಸಿದ್ಧಿಯನ್ನು ಸತತ ಪ್ರಯತ್ನಗಳ ಮೂಲಕ ಮರಳಿ ತರಬಹುದಿತ್ತು. ಪ್ರತಿಸ್ಪರ್ಧಿ ಕಾರ್ಯಕ್ರಮಕ್ಕೆ ಪ್ರೋತ್ಸಾಹ ನೀಡುತ್ತಿರುವುದಕ್ಕೆ ಸೈದ್ಧಾಂತಿಕ ಕಾರಣಗಳು ಇರಬಹುದು. ಆದರೆ, ವಿಜ್ಞಾನ ಮತ್ತು ರಾಜಕೀಯ ಸಿದ್ಧಾಂತದ ನಡುವೆ ಯಾವುದೇ ಸಂಬಂಧ ಇಲ್ಲ. ಇಂತಹ ನಡವಳಿಕೆಯು ವಿಜ್ಞಾನದ ಬೆಳವಣಿಗೆಗೆ ಮಾರಕ. ನೈಜವಾದ ವಿಜ್ಞಾನಕ್ಕೆ ಪ್ರೋತ್ಸಾಹ ನೀಡುವುದು ದೇಶಕ್ಕೆ ಅತ್ಯಗತ್ಯವಾಗಿದೆ.

ದಿನದ ಟ್ವೀಟ್

ನಿಂದನೆ ಖಂಡನೀಯ



ಮಾಲ್ದೀವ್ಸ್‌ನ ಕೆಲವು ಸಚಿವರು ಭಾರತ, ಭಾರತದ ಪ್ರಧಾನಿ ಹಾಗೂ ಹಿಂದೂಗಳ ಬಗ್ಗೆ ನಿಂದನಾತ್ಮಕ ಹೇಳಿಕೆಗಳನ್ನು ನೀಡಿರುವುದು ಆತಂಕಕಾರಿ. ಇದನ್ನು ಖಂಡಿತ ಒಪ್ಪಲಾಗದು. ಮಾಲ್ದೀವ್ಸ್ ಸರ್ಕಾರ ಅಂತಹವರ ಮೇಲೆ ಕ್ರಮ ಜರುಗಿಸಿರುವುದು ಒಳ್ಳೆಯ ಬೆಳವಣಿಗೆ. ಈಗ, ಭಾರತದ ಜನ ಸಹ ಸಾಮಾಜಿಕ ಮಾಧ್ಯಮದಲ್ಲಿ ನೀಡುತ್ತಿರುವ ಮಾಲ್ದೀವ್ಸ್ ವಿರುದ್ಧದ ಹೇಳಿಕೆಗಳನ್ನು ನಿಲ್ಲಿಸಬೇಕು.

ಸುಧೀಂದ್ರ ಕುಲಕರ್ಣಿ, ಲೇಖಕ, ರಾಜಕೀಯ ವಿಶ್ಲೇಷಕ

ಕಿಡಿನುಡಿ



ನಮ್ಮ ಮನೆಯಲ್ಲಿ ಶಿವ, ಹನುಮಂತನ ಚಿತ್ರ ಇಟ್ಟು ಪೂಜೆ ಮಾಡುತ್ತೇವೆ. ನಮ್ಮ ಹೃದಯದಲ್ಲಿ ನಮ್ಮ ದೇವರುಗಳನ್ನು ಇಟ್ಟು ಪೂಜಿಸಿಕೊಂಡು ಬಂದಿದ್ದೇವೆ. ಆರ್‌ಎಸ್‌ಎಸ್ ಮತ್ತು ಬಿಜೆಪಿಯವರು ಮಂತ್ರಾಕ್ಷತೆ ನೀಡುತ್ತಿದ್ದಾರೆ. ಅನ್ನಭಾಗ್ಯ ಅಕ್ಕಿಯಲ್ಲಿಯೇ ಮಂತ್ರಾಕ್ಷತೆ ಹಂಚುತ್ತಿದ್ದಾರೆ. ಅದೇ ನಮಗೆ ಸಂತೋಷ.

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶುಕ್ರವಾರ, 8-1-1999

• ಆರ್‌ಎಸ್‌ಎಸ್, ವಿಎಚ್‌ಪಿ ನಿಷೇಧಕ್ಕೆ ಗೌಡರ ಆಗ್ರಹ

ಬರೋಡಾ, ಜ. 7– (ಪಿಟಿಐ, ಯುಎನ್‌ಐ) ಆರ್‌ಎಸ್‌ಎಸ್, ವಿಎಚ್‌ಪಿ, ಬಜರಂಗದಳ ಮತ್ತು ಶಿವಸೇನೆಯಂಥ ಕೋಮು ಸಂಘಟನೆಗಳನ್ನು ನಿಷೇಧಿಸಬೇಕು ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಆಗ್ರಹಿಸಿದ್ದಾರೆ.

ದಕ್ಷಿಣ ಗುಜರಾತ್‌ನಲ್ಲಿ ಕ್ರೈಸ್ತರ ಮೇಲೆ ನಡೆದ ದಾಳಿಗೆ ಈ ಸಂಘಟನೆಗಳು ಕಾರಣ ಎಂದು ಅವರು ಆರೋಪಿಸಿದ್ದಾರೆ.

'ಈ ಸಂಘಟನೆಗಳು ರಾಷ್ಟ್ರದ ಹಲವು ಭಾಗಗಳಲ್ಲಿ ಧರ್ಮಾಂಧತೆಯನ್ನು ಹಬ್ಬಿಸುತ್ತಿವೆ. ಅವುಗಳ ಚಟುವಟಿಕೆಗಳಿಗೆ ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಪ್ರಮೋದ್ ಮಹಾಜನ್ ಬೆಂಬಲ ನೀಡುತ್ತಿದ್ದಾರೆ' ಎಂದು ಆಪಾದಿಸಿದ್ದಾರೆ.

• ಬಗರ್‌ಹುಕುಂ: ಸಾಗುವಳಿ ಚೀಟಿಗೆ ಆದೇಶ

ಬೆಂಗಳೂರು, ಜ. 7– ಬಗರ್‌ಹುಕುಂ ಸಾಗುವಳಿ ಜಮೀನನ್ನು ಕಾಯಂ ಮಾಡಬೇಕೆಂದು ಸರ್ಕಾರಕ್ಕೆ ಅರ್ಜಿ ಸಲ್ಲಿಸದೆ ಇರುವ ಪ್ರಕರಣಗಳನ್ನು ಗುರುತಿಸಿ ಅವುಗಳಿಗೆ ಕಂದಾಯ ಇಲಾಖೆಯ ಅಧಿಕಾರಿಗಳೇ ಅಗತ್ಯ ದಾಖಲೆ ತಯಾರಿಸಿ ಸಾಗುವಳಿ ಚೀಟಿ ಕೊಡಬೇಕೆಂದು ಸರ್ಕಾರವು ಕಂದಾಯ ಇಲಾಖೆ ಅಧಿಕಾರಿಗಳಿಗೆ ಆದೇಶ ನೀಡಿದೆ.

50 ವರ್ಷಗಳ ಹಿಂದೆ

ಮಂಗಳವಾರ, 8-1-1974

• ಪಾಕ್‌ಗೆ ಯುದ್ಧ ವಿಮಾನ ಘಟಕ: ಫ್ರೆಂಚ್ ರಾಯಭಾರಿಗೆ ಭಾರತದ ಕಳವಳ ರವಾನೆ

ನವದೆಹಲಿ, ಜ. 7– ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡಲು ಫ್ರಾನ್ಸ್ ಒಪ್ಪಂದ ಮಾಡಿಕೊಂಡಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಇಂದು ಫ್ರೆಂಚ್ ರಾಯಭಾರಿ ಜರ್‌ಗೆನ್‌ಸೆನ್ ಅವರನ್ನು ವಿದೇಶಾಂಗ ಕಚೇರಿಗೆ ಕರೆಸಿಕೊಂಡು, ಆ ವರದಿಗಳ ಬಗೆಗೆ ಭಾರತ ತನ್ನ ಕಳವಳವನ್ನು ವ್ಯಕ್ತಪಡಿಸಿತು.

ಮಿರೇಜ್ ಯುದ್ಧ ವಿಮಾನಗಳ ಉತ್ಪಾದನೆಗೆ ಪಾಕಿಸ್ತಾನದಲ್ಲಿ ಕಾರ್ಖಾನೆ ನಿರ್ಮಿಸಲು ನೆರವಾಗಲು ಫ್ರಾನ್ಸ್ ನಿರ್ಧರಿಸಿದೆ ಎಂಬ ವಿಷಯವನ್ನು, ವಿದೇಶಾಂಗ ವ್ಯವಹಾರ ಸಚಿವ ಖಾತೆ ಕಾರ್ಯದರ್ಶಿ ವಿ.ಸಿ. ತ್ರಿವೇದಿ ಅವರು ಫ್ರೆಂಚ್ ರಾಯಭಾರಿ ಜೊತೆ ನಡೆಸಿದ ಮಾತುಕತೆಯಲ್ಲಿ ಪ್ರಸ್ತಾಪಿಸಲಾಯಿತು.

• ಬೆಂಗಳೂರು–ಮೈಸೂರು ಬ್ರಾಡ್‌ಗೇಜ್ ಮಾರ್ಗ ಪರಿಶೀಲನೆಯಲ್ಲಿ

ಮದರಾಸ್, ಜ. 7– ಬೆಂಗಳೂರು–ಮೈಸೂರು ರೈಲು ಮಾರ್ಗವನ್ನು ಬ್ರಾಡ್‌ಗೇಜ್ ಮಾರ್ಗವಾಗಿ ಪರಿವರ್ತಿಸುವ ಸಲಹೆಯನ್ನು ರೈಲ್ವೆಯು ಪರಿಶೀಲಿಸುತ್ತಿದೆ ಎಂದು ರೈಲ್ವೆ ಮಂತ್ರಿ ಎಲ್. ಎನ್. ಮಿಶ್ರಾ ಹೇಳಿದರು.

ರೈಲ್ವೆ ಬಳಕೆದಾರರ ವಲಯ ಸಮಿತಿ ಸಭೆ ಉದ್ದೇಶಿಸಿ ಮಾತನಾಡಿದ ಅವರು, 'ಈ ಯೋಜನೆ ಬಗ್ಗೆ ಈಗಾಗಲೇ ಸಮೀಕ್ಷೆ ನಡೆದಿದೆ' ಎಂದರು.

'ಅತಿ ಸಣ್ಣ ಅವಧಿ'ಯ ಟೆಸ್ಟ್ ಪಂದ್ಯ ಹುಟ್ಟುಹಾಕಿದ ಚರ್ಚೆಯ ಸುತ್ತ...

ಪಿಚ್ ಗುಣಮಟ್ಟ ಮತ್ತು ಕ್ರಿಕೆಟ್ ಫಲಿತಾಂಶ



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ನೂರಿಪ್ಪತ್ತರಿಂದ ನೂರೈವತ್ತು ಕಿಲೊಮೀಟರ್ ವೇಗದಲ್ಲಿ ನುಗ್ಗಿ ಬರುವ ಚೆಂಡಿಗೆ ಆಟಗಾರನೊಬ್ಬ ದೇಹವನ್ನೊಡ್ಡಿ ನಿಲ್ಲುವ ಏಕೈಕ ಕ್ರೀಡೆಯೆಂದರೆ ಬಹುಶಃ ಕ್ರಿಕೆಟ್ ಒಂದೇ.

ದಶಕಗಳ ಹಿಂದೆ ವೆಸ್ಟ್ ಇಂಡೀಸ್ ದೈತ್ಯ ವೇಗಿಗಳ ಎದುರು ಅದೆಷ್ಟೋ ಬ್ಯಾಟರ್‌ಗಳು ಗಂಭೀರವಾಗಿ ಗಾಯಗೊಂಡಿದ್ದ ಹಲವು ಉದಾಹರಣೆಗಳಿವೆ. ದಿನಗಳೆದಂತೆ ಬ್ಯಾಟರ್‌ಗಳ ರಕ್ಷಣೆಗೆ ಹತ್ತಾರು ಸಲಕರಣೆಗಳು ಬಂದವು. ಅವುಗಳನ್ನು ಧರಿಸಿ ಆಡುವುದು ಕಡ್ಡಾಯವೂ ಆಯಿತು. ಆದರೆ ಪಂದ್ಯಕ್ಕಾಗಿ ಸಿದ್ಧಗೊಳ್ಳುವ ಅಂಗಣದ (ಪಿಚ್) ಗುಣಮಟ್ಟ ಮಾತ್ರ ಇಂದಿಗೂ ಏಕರೂಪವಾಗಿಲ್ಲ. ಅದಕ್ಕೆ ಭೌಗೋಳಿಕ ಕಾರಣಗಳೂ ಇವೆ. ಆದ್ದರಿಂದ ಜಗತ್ತಿನ ಯಾವುದೇ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆದಾಗಲೂ ಪಿಚ್ ಕುರಿತ ಪರ, ವಿರೋಧ ಚರ್ಚೆಗಳು ನಡೆಯುವುದು ಸಾಮಾನ್ಯವಾಗಿದೆ.

ಇದೀಗ ದಕ್ಷಿಣ ಆಫ್ರಿಕಾದ ಕೇಪ್‌ಟೌನ್‌ನಲ್ಲಿರುವ ನ್ಯೂಲ್ಯಾಂಡ್ಸ್ ಕ್ರೀಡಾಂಗಣದ ಪಿಚ್, ಸುದ್ದಿಯ ಕೇಂದ್ರ ಬಿಂದುವಾಗಿದೆ. ಅದಕ್ಕೆ ಕಾರಣ, ಈಚೆಗೆ ಇಲ್ಲಿ ನಡೆದ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಟೆಸ್ಟ್ ಪಂದ್ಯವು ಅತ್ಯಂತ ಕಡಿಮೆ ಅವಧಿಯಲ್ಲಿ ಮುಕ್ತಾಯಗೊಂಡಿದ್ದು. ಎರಡನೇ ದಿನವೇ ಮುಗಿದ ಈ ಪಂದ್ಯದಲ್ಲಿ ಆಟ ನಡೆದಿದ್ದು ಒಂಬತ್ತೂವರೆ ತಾಸುಗಳು ಮಾತ್ರ. ಈ ಅವಧಿಯಲ್ಲಿ 33 ವಿಕೆಟ್‌ಗಳು ಪತನವಾದರೆ ಪ್ರಯೋಗವಾದ ಎಸೆತಗಳು ಒಟ್ಟು 642 ಮಾತ್ರ. ಅದರಿಂದಾಗಿಯೇ ಇದು ಟೆಸ್ಟ್ ಇತಿಹಾಸದಲ್ಲಿಯೇ ಅತ್ಯಂತ ಸಣ್ಣ ಅವಧಿಯ ಪಂದ್ಯವೆಂದು ದಾಖಲಾಯಿತು. ಎಲ್ಲ ವಿಕೆಟ್‌ಗಳೂ ವೇಗದ ಬೌಲರ್‌ಗಳ ಬುಟ್ಟಿ ಸೇರಿದ್ದು ಇನ್ನೊಂದು ವಿಶೇಷ. ಸ್ಪಿನ್ನರ್‌ಗಳ ಆಟವೇ ಇಲ್ಲಿ ಗೌಣ.

ಕ್ರಿಕೆಟ್ ಎಂದರೆ ಬ್ಯಾಟರ್‌ಗಳ ವಿಜೃಂಭಣೆಯೇ ಪ್ರಧಾನವಾದದ್ದು ಎಂಬ ಭಾವನೆ ಮೊದಲಿನಿಂದಲೂ ಇದೆ. ಅದರಲ್ಲೂ ಇಂದಿನ ಟಿ20 ಯುಗದಲ್ಲಿ ಸಿಕ್ಸರ್, ಬೌಂಡರಿಗಳು ಯಥೇಚ್ಛವಾಗಿ ಸಿಡಿಯದ ಪಂದ್ಯವು ಸಪ್ಪೆ ಎನಿಸುತ್ತದೆ. ಟೆಸ್ಟ್ ಪಂದ್ಯದಲ್ಲಿಯೂ ಬ್ಯಾಟರ್‌ಗಳು ಅಬ್ಬರಿಸಬೇಕು ಎಂದು ಬಯಸುವವರಿಗೇನೂ ಕಮ್ಮಿಯಿಲ್ಲ. ಆದ್ದರಿಂದಲೇ ಈಗ ಎಲ್ಲರ ಕೆಂಗಣ್ಣು ಪಿಚ್ ಮೇಲೆ ಬಿದ್ದಿದೆ.

ಆತಿಥೇಯ ದಕ್ಷಿಣ ಆಫ್ರಿಕಾ ತಂಡದ ಮುಖ್ಯ ಕೋಚ್ ಶುಕ್ರಿ ಕಾನ್ರಾಡ್ ಅವರೇ ಪಿಚ್ ಬಗ್ಗೆ ಕಿಡಿಕಾರಿದ್ದಾರೆ. 'ಇದೊಂದು ಅಗತ್ಯಕ್ಕಿಂತ ಅತಿಯಾಗಿ ಸಿದ್ಧಪಡಿಸಿದ ಪಿಚ್. ಹೀಗಾದರೆ ಟೆಸ್ಟ್ ಪಂದ್ಯದ ಗತಿ ಏನು' ಎಂದಿದ್ದಾರೆ. ಇನ್ನೊಂದೆಡೆ, ಭಾರತ ತಂಡದ ನಾಯಕ ರೋಹಿತ್ ಶರ್ಮಾ ಕೂಡ ಐಸಿಸಿ ರೆಫರಿಗಳ ಕಾರ್ಯವೈಖರಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

'ಭಾರತದ ಪಿಚ್‌ಗಳಲ್ಲಿ ಮೊದಲ ದಿನದಿಂದ ಚೆಂಡು ತಿರುವು (ಸ್ಪಿನ್) ಪಡೆಯತೊಡಗಿದರೆ ಕಳಪೆ ಎಂಬ ರೇಟಿಂಗ್ ನೀಡುತ್ತಾರೆ. ಇಲ್ಲಿಯದು ಅತ್ಯಂತ ಅಪಾಯಕಾರಿ ಪಿಚ್ ಅಲ್ಲವೇ? ನಾವು ಇಂತಹ ಪಿಚ್‌ನಲ್ಲಿ ಆಡಲು ಸದಾ ಸಿದ್ಧ. ಆದರೆ ಭಾರತದ ಪಿಚ್‌ಗಳನ್ನು ಟೀಕಿಸುವವರು ಬಾಯಿ ಮುಚ್ಚಿಕೊಂಡಿರಬೇಕಷ್ಟೇ. ಪಂದ್ಯ ರೆಫರಿಗಳು ನ್ಯೂಲ್ಯಾಂಡ್ಸ್ ಪಿಚ್ ಬಗ್ಗೆ ಯಾವ ರೀತಿಯ ರೇಟಿಂಗ್ ನೀಡುತ್ತಾರೆಂದು ಎದುರು ನೋಡುತ್ತಿದ್ದೇನೆ' ಎಂದು ರೋಹಿತ್ ಸವಾಲು ಹಾಕಿದ್ದಾರೆ.

ಅವರ ಮಾತುಗಳು ಅಕ್ಷರಶಃ ಸತ್ಯ. ಎಂಟು ವರ್ಷಗಳ ಹಿಂದೆ ಇದೇ ದಕ್ಷಿಣ ಆಫ್ರಿಕಾ ಎದುರು ನಾಗಪುರದಲ್ಲಿ ನಡೆದ ಪಂದ್ಯ ಎರಡೂವರೆ ದಿನಗಳಲ್ಲಿ ಮುಗಿದಿತ್ತು. ಆ ಪಿಚ್ ಅನ್ನು ಕಳಪೆ ಎಂದು ಐಸಿಸಿ ಹೇಳಿತ್ತು. ಕಾನ್ಪುರ, ಪುಣೆ, ದೆಹಲಿಯ ಪಿಚ್ ಸೇರಿದಂತೆ ಭಾರತದ ಕೆಲವು ಪಿಚ್‌ಗಳಿಗೂ ಇಂತಹ ರೇಟಿಂಗ್ ಲಭಿಸಿದೆ. ಅಷ್ಟೇ ಏಕೆ, ಹೋದ ವರ್ಷ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯ ನಡೆದ ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದ ಅಂಗಣಕ್ಕೆ 'ಸಾಧಾರಣ' ಎಂಬ ಹಣೆಪಟ್ಟಿ ಕಟ್ಟಲಾಗಿತ್ತು. ಆ ಪಂದ್ಯದಲ್ಲಿ ಆಸ್ಟ್ರೇಲಿಯಾದ ಬೌಲರ್‌ಗಳು ವಿಜೃಂಭಿಸಿದ್ದರು. ಅದೇ ತಂಡದ ಟ್ರಾವಿಸ್ ಹೆಡ್ ಅಮೋಘ ಶತಕ ಹೊಡೆದು ಗೆಲುವಿನ ರೂವಾರಿಯಾಗಿದ್ದರು. ಪಿಚ್ ಸಾಧಾರಣವಾಗಿದ್ದರೆ ಎರಡು ತಂಡಗಳಿಗೂ ಪರಿಣಾಮ ಬೀರಬೇಕಿತ್ತಲ್ಲವೇ?

ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ನ್ಯೂಜಿಲೆಂಡ್ ಹಾಗೂ ವೆಸ್ಟ್ ಇಂಡೀಸ್ ಪಿಚ್‌ಗಳಲ್ಲಿ ಚೆಂಡುಗಳು ಬೌನ್ಸ್ ಆಗುವ ರೀತಿ ಅಪಾಯಕಾರಿ. ಅನಿರೀಕ್ಷಿತ ಬೌನ್ಸ್‌ಗಳು, ಬೌಲರ್‌ಗಳೇ ಅಚ್ಚರಿಪಡುವಂತಹ ಸ್ವಿಂಗ್‌ಗಳನ್ನು ಉತ್ಪಾದಿಸುವ ಪಿಚ್‌ಗಳಲ್ಲಿ ಆಡುವುದು ಭಾರತ ಉಪಖಂಡದಿಂದ ಹೋದ ಆಟಗಾರರಿಗೆ ಕಠಿಣ ಸವಾಲು. ಆದರೆ ದಶಕಗಳ ಹಿಂದಿನಿಂದಲೂ ಅಲ್ಲಿಯ ಪಿಚ್‌ಗಳಲ್ಲಿಯೂ ಪಂದ್ಯ ಗೆದ್ದು ಬಂದ ಇತಿಹಾಸ ಭಾರತೀಯರಿಗೆ ಇದೆ. ಇತ್ತೀಚೆಗಂತೂ ಭಾರತದಲ್ಲಿಯೂ ವೇಗದ ಬೌಲರ್‌ಗಳಿಗೆ ನೆರವಾಗುವಂತಹ ಪಿಚ್‌ಗಳನ್ನು ಸಿದ್ಧಗೊಳಿಸಲಾಗುತ್ತಿದೆ. ಟೆಸ್ಟ್ ಪಂದ್ಯದ ಎರಡನೇ ದಿನ ಅಥವಾ ಮೂರನೇ ದಿನದಿಂದ ಚೆಂಡು ಸ್ಪಿನ್ ಆಗಲು ಶುರುವಾಗುವ ಪಿಚ್‌ಗಳು ಇವು.

ಆದರೆ ಇನ್ನು ಕೆಲವು ಕಡೆ ಪಂದ್ಯದ ಮೊದಲ ದಿನದಿಂದಲೇ ಸ್ಪಿನ್ನರ್‌ಗಳಿಗೆ ನೆರವಾಗುವ ಪಿಚ್‌ಗಳೂ ಇವೆ. ಭಾರತ ತಂಡದ ಮುಖ್ಯ ಸಾಮರ್ಥ್ಯವೇ ಸ್ಪಿನ್ ಆಗಿರುವುದರಿಂದ ತವರಿನ ಲಾಭ ಪಡೆಯುವುದರಲ್ಲಿ ತಪ್ಪೇನೂ ಇಲ್ಲವಲ್ಲ ಎಂಬ ವಾದವೂ ಇದೆ. ಅಷ್ಟಕ್ಕೂ ಸ್ಪಿನ್ ಎಸೆತಗಳನ್ನು ಹಾಕುವುದು ಮತ್ತು ಎದುರಿಸಿ ಆಡುವುದು ಒಂದು ಕಲೆ. ಅದು ಭಾರತದ ಆಟಗಾರರ ಸಹಜ ಸಾಮರ್ಥ್ಯವೂ ಹೌದು. ಸ್ಪಿನ್ ಎಸೆತಗಳಿಂದ ಬ್ಯಾಟರ್‌ಗಳು ಗಾಯಗೊಂಡ ಉದಾಹರಣೆಗಳು ತೀರಾ ವಿರಳ. ಆದರೆ, ವಿಕೆಟ್‌ಕೀಪರ್‌ಗಳು ನೋವುಂಡ ನಿದರ್ಶನಗಳು ಇವೆ. ಆದರೂ ಈ ವಾದವನ್ನು ಬೇರೆ ದೇಶಗಳ ಕ್ರಿಕೆಟ್ ಪಂಡಿತರು ಒಪ್ಪುವುದಿಲ್ಲ.


ಭಾರತ ಮತ್ತು ವಿದೇಶಿ ಪಿಚ್‌ಗಳಿಗೆ ಸಂಬಂಧಿಸಿದ ವಾದ, ವಿವಾದ ಹೊಸದೇನಲ್ಲ. ಆದರೆ, ಈಗ ತಂತ್ರಜ್ಞಾನ, ಆರ್ಥಿಕತೆ ಮತ್ತು ಆಟದ ವೇಗ ಬದಲಾದಂತೆ ಚರ್ಚೆಗಳು ಬೇರೆ ಆಯಾಮಗಳಲ್ಲಿಯೂ ನಡೆಯುತ್ತಿವೆ. ಸದ್ಯ ಟಿ20 ಕ್ರಿಕೆಟ್ ಭರಾಟೆಯಲ್ಲಿ ಏಕದಿನ ಮತ್ತು ಟೆಸ್ಟ್ ಪಂದ್ಯಗಳು ಅಸ್ತಿತ್ವ ಉಳಿಸಿಕೊಳ್ಳಲು ಹರಸಾಹಸಪಡಬೇಕಾದ ಪರಿಸ್ಥಿತಿ ಇದೆ. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಆರಂಭಿಸುವ ಮೂಲಕ ದೀರ್ಘ ಅವಧಿಯ ಕ್ರಿಕೆಟ್ ಮಾದರಿ ಉಳಿಸಿಕೊಳ್ಳುವತ್ತ ಐಸಿಸಿ ಮಹತ್ವದ ಹೆಜ್ಜೆ ಇಟ್ಟಿತ್ತು. ಅದರ ಫಲ ಈಗ ಸಿಗುತ್ತಿದೆ. ಆದರೆ ಟೆಸ್ಟ್ ಪಂದ್ಯವು ಕನಿಷ್ಠ ನಾಲ್ಕು ದಿನಗಳಾದರೂ ನಡೆಯದೇ ಹೋದರೆ, ಆಯೋಜಕ ಸಂಸ್ಥೆ, ಅಧಿಕೃತ ಪ್ರಸಾರಕರಿಗೆ ಆರ್ಥಿಕ ನಷ್ಟ ಖಚಿತ ಎಂಬ ಮಾತುಗಳೂ ಕೇಳಿಬರುತ್ತಿವೆ.

ಕಳೆದ ಹತ್ತು ವರ್ಷಗಳಲ್ಲಿ ಬಹಳಷ್ಟು ಟೆಸ್ಟ್ ಪಂದ್ಯಗಳು ಮೂರು ದಿನಗಳಲ್ಲಿ ಮುಕ್ತಾಯವಾಗಿವೆ. ಚುಟುಕು ಕ್ರಿಕೆಟ್ ಪ್ರಭಾವದಿಂದ ಟೆಸ್ಟ್ ಆಟಗಾರರ ಶೈಲಿ ಮತ್ತು ವೇಗ ಬದಲಾಗಿದೆ ಎಂದು ದಕ್ಷಿಣ ಆಫ್ರಿಕಾದ ದಿಗ್ಗಜ ಎಬಿ ಡಿವಿಲಿಯರ್ಸ್ ಹೇಳುತ್ತಾರೆ. ಅದು ಬಹುಮಟ್ಟಿಗೆ ನಿಜವೂ ಹೌದು. ಒಂದು ಟೆಸ್ಟ್ ಪಂದ್ಯವೆಂದರೆ ಕ್ರಿಕೆಟ್ ಆಟದ ಎಲ್ಲ ಕೌಶಲಗಳು ಮತ್ತು ಸೊಬಗು ಅನಾವರಣಗೊಳ್ಳಬೇಕು ಎಂಬ ಆಶಯ ನೈಜ ಕ್ರಿಕೆಟ್‌ಪ್ರೇಮಿಗಳದ್ದು. ಆದರೆ ಹಿಂದೆಂದಿಗಿಂತಲೂ ಇಂದಿನ ಟೆಸ್ಟ್‌ಗಳಲ್ಲಿ ನೀರಸ ಡ್ರಾಗಿಂತ ಸ್ಪಷ್ಟ ಫಲಿತಾಂಶಗಳು ಹೊರಹೊಮ್ಮುತ್ತಿರುವುದು ಕೂಡ ಉತ್ತಮ ಬೆಳವಣಿಗೆ.

ಆದ್ದರಿಂದ ಸಾಧ್ಯವಾದಷ್ಟೂ ಸ್ಪರ್ಧಾತ್ಮಕ ಪಿಚ್‌ಗಳನ್ನು ನೀಡಿ ಉಭಯ ತಂಡಗಳಿಗೂ ಸಮಾನ ಅವಕಾಶಗಳನ್ನು ಕಲ್ಪಿಸುವತ್ತ ದೃಷ್ಟಿ ಹರಿಸಬೇಕು. ಇದನ್ನು ಆತಿಥ್ಯ ವಹಿಸುವ ಎಲ್ಲ ದೇಶಗಳೂ ಮನಗಾಣುವುದು ಇಂದಿನ ಅಗತ್ಯ. 'ತವರಿನ ಲಾಭ' ಪಡೆಯುವುದು ತಪ್ಪಲ್ಲ. ಆದರೆ ದುರ್ಲಾಭ ಪಡೆಯಲು ಹೋದರೆ ನ್ಯೂಲ್ಯಾಂಡ್ಸ್‌ನಲ್ಲಿ ಆತಿಥೇಯರಿಗೆ ತಿರುಗುಬಾಣವಾದ ರೀತಿಯ ಫಲಿತಾಂಶಗಳು ಹೊರಹೊಮ್ಮುತ್ತಲೇ ಇರುತ್ತವೆ. ಇದೆಲ್ಲದರ ನಡುವೆ ದಕ್ಷಿಣ ಆಫ್ರಿಕಾದ ಏಡನ್ ಮರ್ಕರಂ ಹೊಡೆದ ಶತಕ ಮಾತ್ರ ಎಲ್ಲರ ಗಮನ ಸೆಳೆಯಿತು. ಮೊಹಮ್ಮದ್ ಸಿರಾಜ್ ಮತ್ತು ಜಸ್‌ಪ್ರೀತ್ ಬೂಮ್ರಾ ಅವರ ಬೌಲಿಂಗ್‌ನಷ್ಟೇ ಮರ್ಕರಂ ಆಟವೂ ಈ ಪಂದ್ಯದ ಜೀವಾಳವಾಗಿತ್ತು. ಇಂತಹವರ ಆಟದಿಂದಲೇ ಕ್ರಿಕೆಟ್ ಸೊಬಗು ಹೆಚ್ಚುತ್ತದೆ. ತಂಡಗಳು ಗೆಲ್ಲಬಹುದು ಅಥವಾ ಸೋಲಬಹುದು; ಆದರೆ ಕ್ರಿಕೆಟ್ ಮಾತ್ರ ಯಾವಾಗಲೂ ಜಯಿಸಬೇಕು.



ಚುರುಮುರಿ



ಮುದ್ದೆ ಮಹಿಮೆ

• ಮಣ್ಣೆರಾಜು

ಚಟ್ನಹಳ್ಳಿಯ ಮುದ್ದೆ ಉಣ್ಣುವ ಸ್ಪರ್ಧೆಗೆ ಸುತ್ತೂರಿನ ಮುದ್ದೆ ಪ್ರೇಮಿಗಳು ಅಪಾರ ಸಂಖ್ಯೆಯಲ್ಲಿ ಸೇರಿದ್ದರು. ಮುದ್ದೆಗೆ ನಾಟಿ ಕೋಳಿ ಸಾರು, ಅವರೆಕಾಯಿ ಸಾಂಬಾರ್ ವ್ಯವಸ್ಥೆ ಮಾಡಲಾಗಿತ್ತು. ಶಾಸಕರು ಖುದ್ದು ಎರಡು ಮುದ್ದೆ ಉಂಡು ಸ್ಪರ್ಧೆಗೆ ಚಾಲನೆ ನೀಡಿದರು.

'ಮುದ್ದೆಗಿಂತ ಮದ್ದು ಇನ್ನೊಂದಿಲ್ಲ. ಹೊಟ್ಟೆ ತುಂಬಾ ಮುದ್ದೆ ಉಂಡು, ಮೈ ಮುರಿಯೋ ರೀತಿ ಕೆಲಸ ಮಾಡಿದ್ರೆ ಯಾವ ಕಾಯಿಲೆನೂ ಹತ್ರ ಬರಲ್ಲ...' ಶಾಸಕರು ಮುದ್ದೆ ಮಹಿಮೆ ಕೊಂಡಾಡಿದರು.

'ಸಿರಿಧಾನ್ಯಗಳಲ್ಲಿ ಹಿರಿಧಾನ್ಯದಂತಿರುವ ರಾಗಿ ಬೆಳೆಗೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ಮುದ್ದೆ ಅಭಿವೃದ್ಧಿ ನಿಗಮ ಸ್ಥಾಪಿಸಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಗಿ ಮೇಳ, ಮುದ್ದೆ ಉಣ್ಣುವ ಸ್ಪರ್ಧೆ ಆಯೋಜಿಸಿ ಹಿರಿಧಾನ್ಯದ ಹಿರಿಮೆಯನ್ನು ಜಗತ್ತಿಗೆ ಸಾರಬೇಕು. ವಿದೇಶಿಗರೂ ಮುದ್ದೆ ರುಚಿಗೆ ಮರುಳಾಗುವಂತೆ ಮಾಡಬೇಕು...' ಎಂದರು ಶಾಸಕರು.

ನೂರಾರು ಉಣ್ಣುಪಟುಗಳು ಸ್ಪರ್ಧೆಯಲ್ಲಿ ಉತ್ಸಾಹದಿಂದ ಉಂಡರು. ಇಪ್ಪತ್ತೆಂಟು ಮುದ್ದೆ ಉಂಡ ಚಟ್ನಹಳ್ಳಿಯ ಮುದ್ದಣ್ಣ ಮೊದಲ ಬಹುಮಾನ ಗೆದ್ದರು.

'ನಿನ್ನ ಮುದ್ದೆ ಉಣ್ಣುವ ಸಾಮರ್ಥ್ಯ ಹೆಚ್ಚಾಗಲಿ, ಮುಂದಿನ ವರ್ಷದ ಸ್ಪರ್ಧೆಯಲ್ಲಿ ಐವತ್ತು ಮುದ್ದೆ ಉಣ್ಣುವ ಶಕ್ತಿಸಾಮರ್ಥ್ಯವನ್ನು ದೇವರು ಕರುಣಿಸಲಿ' ಎಂದು ಹಾರೈಸಿ ಶಾಸಕರು ವಿಜೇತರಿಗೆ ಬಹುಮಾನ ವಿತರಿಸಿದರು.

'ಮುದ್ದೆವೀರ ಮುದ್ದಣ್ಣನ ಧರ್ಮಪತ್ನಿ ದಯವಿಟ್ಟು ವೇದಿಕೆ ಮೇಲೆ ಬರಬೇಕು...' ಎಂದು ಆಯೋಜಕರು ಮನವಿ ಮಾಡಿದರು. ಮುದ್ದಣ್ಣನ ಪತ್ನಿ ಸಂಕೋಚ, ಹೆಮ್ಮೆಯಿಂದ ಬಂದರು.

'ನಿನ್ನ ಗಂಡ ಒಂದೊಂದು ಹೊತ್ತಿಗೆ ಇಪ್ಪತ್ತೆಂಟು ಮುದ್ದೆ ಉಣ್ತಾನೇನಮ್ಮಾ?' ಶಾಸಕರು ಕೇಳಿದರು.

'ಹೌದು ಸಾರ್...' ಅಂದ್ರು ಪತ್ನಿ. ಜನ ಚಪ್ಪಾಳೆ ಹೊಡೆದು ಮೆಚ್ಚುಗೆ ವ್ಯಕ್ತಪಡಿಸಿದರು.

'ಭಲೇ!... ಶಹಬ್ಬಾಸ್!' ಎಂದ ಶಾಸಕರು ಮುದ್ದಣ್ಣನ ಪತ್ನಿಗೆ ವೈಯಕ್ತಿಕವಾಗಿ ಒಂದು ಮೂಟೆ ರಾಗಿಯನ್ನು ಕಾಣಿಕೆಯಾಗಿ ನೀಡಿದರು.

ಸಂಗತ

ಮಾಲ್ ಎಂಬ ಮಾಯಾಬಜಾರ್

ನಗರವಾಸಿಗಳ ಬದುಕಿನ ಅವಿಭಾಜ್ಯ ಅಂಗವಾಗಿರುವ ಮಾಲ್‌ಗಳಿಂದ ಅನುಕೂಲಗಳಷ್ಟೇ ಅನನುಕೂಲಗಳೂ ಇವೆ

• ಡಾ. ಕೆ.ಎಸ್.ಚೈತ್ರಾ

'ಇಲ್ಲಿಂದ ಮನೆಯನ್ನು ಬೇರೆ ಕಡೆ ಬದಲಾಯಿಸುವ ಬಗ್ಗೆ ಯೋಚಿಸುತ್ತಿದ್ದೇವೆ' ಎಂದು ಪರಿಚಿತರೊಬ್ಬರು ಹೇಳಿದಾಗ ಆಶ್ಚರ್ಯ ಆಗಿತ್ತು. ಎರಡು ವರ್ಷದ ಹಿಂದಷ್ಟೇ ಮಕ್ಕಳ ಶಾಲೆಗೆ, ಹಿರಿಯರಾದ ಅಪ್ಪ ಅಮ್ಮನ ಆಸ್ಪತ್ರೆಗೆ, ಬಿಸಿನೆಸ್ ಸಲುವಾಗಿ ಓಡಾಡಲು ಏರ್‌ಪೋರ್ಟ್ ಎಲ್ಲವೂ ಹತ್ತಿರವಿರುವ ಅನುಕೂಲಕರ ಮನೆ ಎನ್ನುವ ಉದ್ದೇಶದಿಂದ ಇಲ್ಲಿಗೆ ಬಂದವರು ಅವರು. ಹೀಗಿರುವಾಗ, ಈ ನಿರ್ಧಾರಕ್ಕೆ ಕಾರಣವೇನು ಎಂದು ಯೋಚಿಸುವಷ್ಟರಲ್ಲಿ ಉತ್ತರವೂ ಬಂದಿತ್ತು 'ಮಾಲ್'!

ಒಂದುಕಾಲಕ್ಕೆ ಪೇಟೆಗೆ ಹೋಗಿ ಹತ್ತಾರು ಅಂಗಡಿಗಳನ್ನು ಸುತ್ತಿ ಅಗತ್ಯ ವಸ್ತುಗಳನ್ನು ಖರೀದಿಸಿ ಬರುತ್ತಿದ್ದ ಕಾಲ ಇದಲ್ಲ. ಈಗ ಸೂಜಿಯಿಂದ ಕಂಪ್ಯೂಟರ್ ತನಕ ಸಕಲವನ್ನೂ ಒಂದೇ ಜಾಗದಲ್ಲಿ ನೋಡುತ್ತಾ, ಖರೀದಿಸುತ್ತಾ, ಜತೆಗೇ ಬಾಯಿಗೆ ರುಚಿಸುವ ಆಹಾರ ತಿಂದು, ಖುಷಿ ಕೊಡುವ ಸಿನಿಮಾ ನೋಡಿ, ಮಕ್ಕಳಿಗೆ ಬೇಕಾದ ಆಟವನ್ನು ಆಡಿಸಿ... ಹೀಗೆ ದಿನವಿಡೀ ಸಮಯ ಕಳೆಯಬಹುದಾದ ಮಾಲ್‌ಗಳಲ್ಲಿ ಶಾಪಿಂಗ್ ಎಂಬುದು ಜೀವನದ ಅವಿಭಾಜ್ಯ ಅಂಗವೇ ಆಗಿದೆ.

ದುಡ್ಡು ಅಥವಾ ಕ್ರೆಡಿಟ್ ಕಾರ್ಡ್ ಹೊಂದಿದ್ದರೆ ಮಕ್ಕಳು, ಹದಿಹರೆಯದವರು, ವಯಸ್ಕರು, ವೃದ್ಧರು ಹೀಗೆ ಎಲ್ಲ ವಯಸ್ಸು, ಜಾತಿ, ಧರ್ಮದವರಿಗೂ ಬೇಕಾದುದನ್ನೆಲ್ಲ ಹೊಂದಿರುವ ಮಾಯಾಬಜಾರ್ ಇದು. ಕಡಿಮೆ ಸಮಯದಲ್ಲಿ, ಒಂದೆಡೆಯಿಂದ ಇನ್ನೊಂದೆಡೆಗೆ ಪ್ರಯಾಣಿಸುವ ಒತ್ತಡವಿಲ್ಲದೆ, ಎಲ್ಲರೂ ಒಟ್ಟಾಗಿ ಸೇರಿ ಖರೀದಿಸಲು ಸುರಕ್ಷಿತವಾದ ಸ್ಥಳಗಳು ಮಾಲ್‌ಗಳು. ಹಾಗೆಯೇ ಮಾಲ್ ಬರುತ್ತದೆ ಎಂದರೆ ಸುತ್ತಮುತ್ತಲಿನ ಭೂಮಿಯ ದರ, ಮನೆಗಳ ಬಾಡಿಗೆ ದರ ಹೆಚ್ಚುತ್ತದೆ. ಸ್ಥಳೀಯರಿಗೆ ಕೆಲಸ ಸಿಗುವುದರ ಜತೆಗೆ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತವೆ, ಆ ಪ್ರದೇಶ ಅಭಿವೃದ್ಧಿಯಾಗುತ್ತದೆ ಎನ್ನುವುದೂ ಸತ್ಯ.

ಆದರೆ ಅನುಕೂಲಗಳಷ್ಟೇ ಅನನುಕೂಲಗಳೂ ಇವೆ! ನಗರದ ಪ್ರಮುಖ ಭಾಗಗಳಲ್ಲಿ ಮಾಲ್‌ಗಳ ಬೃಹತ್ ಕಟ್ಟಡಗಳು ಏಳುತ್ತಿವೆ. ಮಾಲ್‌ಗಳಿಗೆ ಹೋಗಲು ಜನರೂ ಮುಗಿಬೀಳುತ್ತಿದ್ದಾರೆ. ಆದರೆ ಹೆಚ್ಚಿನ ಕಡೆ ಪಾರ್ಕಿಂಗ್ ವ್ಯವಸ್ಥೆ ಸಮರ್ಪಕವಾಗಿ ಇರುವುದಿಲ್ಲ. ಹೀಗಾಗಿ, ರಸ್ತೆ ಮಾತ್ರವಲ್ಲ ಫುಟ್‌ಪಾತ್‌ಗಳೂ ವಾಹನ ನಿಲುಗಡೆ ಪ್ರದೇಶಗಳಾಗಿವೆ. ವಾರಾಂತ್ಯದ ದಿನ, ರಜಾದಿವಸ, ಹಬ್ಬಹರಿದಿನ ಬಂದರೆ ಸುತ್ತಮುತ್ತಲ ಪ್ರದೇಶದಲ್ಲಿ ವಾಸಿಸುವವರ ಕಷ್ಟ ಹೇಳತೀರದು. ವಿಶೇಷವಾಗಿ ವಾರಾಂತ್ಯದಲ್ಲಿ ಟ್ರಾಫಿಕ್ ಜಾಮ್ ದೊಡ್ಡ ಸಮಸ್ಯೆ. ಹತ್ತಿರವಿರುವ ಆಸ್ಪತ್ರೆಗಳಿಗೆ ಮತ್ತು ಕೆಲಸಕ್ಕೆ ಹೋಗುವ ಉದ್ಯೋಗಿಗಳಿಗೂ ದಿನನಿತ್ಯದ ಸಂಚಾರ ದುಸ್ತರ. ಮಾಲ್ ಇರುವ ರಸ್ತೆಯಲ್ಲಿ ಸಂಚರಿಸುವ ಸರ್ಕಾರಿ ಬಸ್ಸುಗಳು, ಶಾಲಾವಾಹನಗಳು, ಕಡೆಗೆ ರೋಗಿಗಳನ್ನು ತುರ್ತು ಚಿಕಿತ್ಸೆಗಾಗಿ ಕರೆದೊಯ್ಯುವ ಆಂಬುಲೆನ್ಸ್ ಕೂಡ ಅಲ್ಲಲ್ಲೇ ಕಾಯಬೇಕಾದ ಅನಿವಾರ್ಯ!

ಇದರೊಂದಿಗೇ ಮಾಲ್‌ಗಳ ಕುರಿತು ಜನರ ಅಸಹನೆಗೆ ಕಾರಣವಾಗಿರುವುದು, ಹೆಚ್ಚಾಗಿರುವ ಶಬ್ದ ಮಾಲಿನ್ಯ. ಕಟ್ಟಡದ ಕಲುಷಿತವಾದ ಗಾಳಿಯನ್ನು ಹೊರದೂಡಿ ಶುದ್ಧೀಕರಿಸುವ ಎಕ್ಸಾಸ್ಟ್ ಬ್ಲೋವರ್ಸ್ (ಗಾಳಿಯಂತ್ರಗಳು) ಜೋರಾಗಿ ಸದ್ದು ಮಾಡುತ್ತವೆ. ಮಾಲ್ ದೊಡ್ಡದಾದಷ್ಟೂ ಜನ ಹೆಚ್ಚಿದಷ್ಟೂ ಇವುಗಳ ಸದ್ದು ಹೆಚ್ಚು. ತಡರಾತ್ರಿಯವರೆಗೆ ಮಾಲ್ ತೆರೆದಿರುವುದರಿಂದ ಇವು ವಿದ್ಯಾರ್ಥಿಗಳಿಗೆ ಓದಲು, ರೋಗಿಗಳಿಗೆ ವಿಶ್ರಾಂತಿ ಪಡೆಯಲು ಮತ್ತು ಜನರ ನಿದ್ದೆಗೆ ಭಂಗ ತರುತ್ತವೆ!

ಮಾಲ್ ಸಂಸ್ಕೃತಿ ನಮ್ಮ ಮಾನಸಿಕ ಆರೋಗ್ಯದ ಮೇಲೂ ಪರಿಣಾಮವನ್ನು ಬೀರಿದೆ. ಆಕರ್ಷಕವಾಗಿ ವಸ್ತುಗಳನ್ನು ಜೋಡಿಸಿ, ಸೇಲ್ ಎನ್ನುವ ಪ್ರಲೋಭನೆಯನ್ನು ಒಡ್ಡಿ ಜನರಲ್ಲಿ ಕೊಳ್ಳುಬಾಕತನವನ್ನು ಇದು ಪ್ರಚೋದಿಸುತ್ತದೆ. ಹೀಗಾಗಿ, ಬೇಕಾಗಲಿ ಬೇಡದಿರಲಿ ಒಮ್ಮೆ ಕಾಲಿಟ್ಟರೆ ಏನನ್ನೂ ಖರೀದಿಸದೆ ಹೊರಬರುವ ಸಾಧ್ಯತೆಯೇ ಇಲ್ಲ. ಮಾಲ್‌ನಲ್ಲಿ ದುಬಾರಿ ಬಾಡಿಗೆ ತೆತ್ತು ಮಳಿಗೆ ಇಟ್ಟಮೇಲೆ ವ್ಯಾಪಾರದಿಂದ ಲಾಭ ಗಳಿಸಬೇಕಾದರೆ ವಸ್ತುಗಳಿಗೂ ಹೆಚ್ಚಿನ ದರ ಇಡುವುದು ಅನಿವಾರ್ಯ. ಡಿಸ್ಕೌಂಟ್ ಎಂದು ಮರುಳಾಗಿ ಒಂದಕ್ಕೆರಡು ಬೆಲೆ ತೆತ್ತುಬರುವುದು ಸಾಮಾನ್ಯ. ಮಾಲ್ ಬಂದ ನಂತರ ಚೌಕಾಸಿ ಮಾಡುವ ಅವಕಾಶವೇ ಇಲ್ಲದೆ, ಕೇಳಿದಷ್ಟು ಬೆಲೆ ಕೊಟ್ಟು ಬ್ರ್ಯಾಂಡೆಡ್ ಐಟಂ ಕೊಳ್ಳುವ ಪರಿಸ್ಥಿತಿಗೆ ಒಗ್ಗಿದ್ದೇವೆ. ಪ್ರೀತಿಯಿಂದ ಗ್ರಾಹಕರ ಇಷ್ಟ ಅರಿತು ಕಷ್ಟ-ಸುಖ ವಿಚಾರಿಸಿ ಮಾತನಾಡುವ ಪರಿಚಿತರ ಅದೆಷ್ಟೋ ಸಣ್ಣ ಪುಟ್ಟ ಅಂಗಡಿಗಳು ಕಣ್ಮರೆಯಾಗಿವೆ. ಹಾಗೆಯೇ ಹೆಸರಿಡಲಾಗದ ಹಲವು ಭಾವನಾತ್ಮಕವಾದ ಸಂಬಂಧಗಳು ಅಳಿದಿವೆ!



ಟ್ರಾಫಿಕ್ ಸಮಸ್ಯೆ ಮಿತಿಮೀರಿ, ಜನಜಂಗುಳಿ ನಿಯಂತ್ರಿಸಲು ಸಾಧ್ಯವಾಗದೆ ಇತ್ತೀಚೆಗಷ್ಟೇ ಬೆಂಗಳೂರಿನ ಉತ್ತರಭಾಗದ ಮಾಲೊಂದರ ಕುರಿತು ಬಹಳಷ್ಟು ಗಲಾಟೆ, ವಾದ-ವಿವಾದ ನಡೆಯಿತು.

ಮಾಲ್‌ಗಳನ್ನು ಕಟ್ಟಿಸುವ ಮೊದಲು ಕಟ್ಟಡದ ಸೂಕ್ತ ನಕ್ಷೆ ತಯಾರಿಸಿ ಅನುಮತಿ ಪಡೆಯಬೇಕು. ಭೇಟಿ ನೀಡುವ ಜನರ ಅಗತ್ಯಕ್ಕೆ ತಕ್ಕಂತೆ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕು. ಇದರೊಂದಿಗೆ ಮಾಲ್‌ನ ಒಳಗಡೆಯೇ ಪ್ರಯಾಣಿಕರಿಗೆ ಇಳಿಯುವ ಮತ್ತು ಹತ್ತುವ ನಿಗದಿತ ಸ್ಥಳ ಮೀಸಲಿಡಬೇಕು. ಹಾಗೆಯೇ ಉಂಟಾಗುವಂತಹ ಶಬ್ದಮಾಲಿನ್ಯ ನಿಯಂತ್ರಣಕ್ಕೂ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು. ಈಗಂತೂ ಪ್ರತಿ ಬಡಾವಣೆಯಲ್ಲಿಯೂ ಮಾಲ್‌ಗಳು ತಲೆ ಎತ್ತುತ್ತಿವೆ. ಪ್ರಸ್ತುತ ವಿದ್ಯಮಾನವನ್ನು ಗಮನದಲ್ಲಿಟ್ಟು ಮಾಲೀಕರು ಎಚ್ಚರ ವಹಿಸಬೇಕು. ಹಾಗೆಯೇ, ಕಟ್ಟುವಸ್ಥಳ, ಸೌಲಭ್ಯಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದವರಿಗೆ ಮಾತ್ರ ಸಂಬಂಧಿಸಿದವರು ಸ್ವಾಧೀನ ಪ್ರಮಾಣಪತ್ರ ನೀಡಬೇಕು. ಇಲ್ಲದಿದ್ದಲ್ಲಿ ಈ ಮಾಲ್‌ಗಳು ದೊಡ್ಡ ತಲೆನೋವಾಗುವುದರಲ್ಲಿ ಸಂಶಯವೇ ಇಲ್ಲ.

ವಾಚಕರ ವಾಣಿ

ಅರ್ಥ ಸಚಿವರು ವಿವರಣೆ ನೀಡುವರೇ?

ಕೇಂದ್ರದ ತೆರಿಗೆಯಲ್ಲಿ ಕರ್ನಾಟಕಕ್ಕೆ ಕಡಿಮೆ ಪಾಲು ಸಿಕ್ಕ ಬಗೆಗಿನ ಲೇಖನ (ಪ್ರ.ವಾ., ಜ. 4) ವಿಚಾರಾರ್ಹ. ಕೇರಳವು 'ಜನಸಂಖ್ಯೆ ನಿಯಂತ್ರಿಸಿದ್ದಕ್ಕೆ ಉತ್ತೇಜನ ಕೊಡಬೇಕೇ ಹೊರತು ಪಾಲಿನಲ್ಲಿ ಕಡಿತ ಮಾಡಬಾರದು' ಎಂದು ಒಂದು ಸಂದರ್ಭದಲ್ಲಿ ಹೇಳಿತ್ತು. 'ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗುತ್ತಿದೆ' ಎಂದು ತಮಿಳುನಾಡಿನ ಮುಖ್ಯಮಂತ್ರಿ ಹೇಳಿದ್ದರು. ಈ ಲೇಖನದಲ್ಲಿ ಕೊಟ್ಟ ಅಂಕಿಅಂಶಗಳ ಪ್ರಕಾರ, ಕೇರಳಕ್ಕೆ ಕಡಿತ, ತಮಿಳುನಾಡಿಗೆ ಏರಿಕೆ ಆಗಿದೆ. ಗುಜರಾತಿಗೆ ಹಂಚಿಕೆ ಹೆಚ್ಚಾಗಿರುವುದಕ್ಕೆ ಕೇಂದ್ರ ಸರ್ಕಾರ ವಿವರಣೆ ನೀಡುವುದು ಅಗತ್ಯ. ಉತ್ತಮ ಆಡಳಿತ ಅಲ್ಲಿ ಇದೆ ಎನ್ನಲು ಈಚೆಗಿನ ಎರಡು ಪ್ರಸಂಗಗಳು ಅಡ್ಡಿಯಾಗುತ್ತವೆ: ಒಂದು- ಛೋಟಾ ಉದೇಪುರ್ ಜಿಲ್ಲೆಯಲ್ಲಿ ಚಲಿಸುತ್ತಿದ್ದ ಟ್ರಕ್‌ನಿಂದ ಆರು ಬಾಲಕಿಯರು ಹಾರಿ ಮಾನಹಾನಿಯಾಗುವುದರಿಂದ ಪಾರಾಗಿದ್ದಾರೆ; ಎರಡು- ಮ್ಯಾನ್ಯುವಲ್ ಸ್ಕ್ಯಾವೆಂಜಿಂಗ್ ಕಾನೂನು– 2013 ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ಹಾಗೂ ಆ ಕೆಲಸದಲ್ಲಿ ತೊಡಗಿದ್ದಾಗ ಮರಣ ಹೊಂದಿದ (ಅವಧಿ 1993- 2014) ಹದಿನಾರು ಜನರ ಕುಟುಂಬಗಳಿಗೆ ಪರಿಹಾರ ಏಕೆ ಕೊಟ್ಟಿಲ್ಲ ಎಂದು ಅಲ್ಲಿನ ಹೈಕೋರ್ಟ್, ರಾಜ್ಯ ಸರ್ಕಾರವನ್ನು ಕೇಳಿದೆ.

ಇನ್ನು ತೆರಿಗೆ ಹಾಕುವ ಬಗೆಗೆ- ಕಾರ್ಪೊರೇಟ್ ಟ್ಯಾಕ್ಸ್ ದರ ಇಳಿಕೆಯಿಂದ ಆದ 'ಲಾಭ'ದ ಬಗೆಗೆ (ಪ್ರ.ವಾ., ಜ. 5) ಅರ್ಥ ಸಚಿವರು ವಿವರಣೆ ನೀಡುವರೇ? ವೆಲ್ತ್ ಕ್ರಿಯೇಟರ್ಸ್ ಎಂದು ಉದ್ಯಮಿಗಳನ್ನು ಸಂಬೋಧಿಸುವಾಗ ಅವರು ಎಷ್ಟು ಹಣ ಹೂಡಿದ್ದಾರೆ ಹಾಗೂ ಅದರಿಂದ ಎಷ್ಟು ಉದ್ಯೋಗಗಳು ಸೃಷ್ಟಿಯಾಗಿವೆ ಎಂಬ ಅಂಶಗಳೂ ಮುಖ್ಯ. ಸಂಪತ್ತಿನಲ್ಲಿ ಇವರು ಅವರನ್ನು ಹಿಂದಿಕ್ಕಿದರು, ಯಾವ ಯಾವ ಕಂಪನಿಗಳನ್ನು ಯಾರು ಯಾರು ಕೊಂಡುಕೊಂಡರು- ಈ ಮಾಹಿತಿಯಿಂದ ಜನಸಾಮಾನ್ಯರಿಗೇನು ಉಪಯೋಗ?

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಚಾತುರ್ವರ್ಣ ವ್ಯವಸ್ಥೆಯ ಶ್ರೇಣೀಕರಣ ನೀತಿ

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಗೇರುಮರಡಿಯ ಗೊಲ್ಲರಹಟ್ಟಿಯಲ್ಲಿ ದಂಡದ ಭೀತಿಯಿಂದ ಮಕ್ಕಳು ಶೂ ಧರಿಸದೇ ಶಾಲೆಗೆ ಹೋಗುತ್ತಿರುವ ಸುದ್ದಿ (ಪ್ರ.ವಾ., ಜ. 6) ಓದಿ, ಎಂಥ ವಿಚಿತ್ರ ಎನಿಸಿತು. ಸರ್ಕಾರ ಶೂ ಭಾಗ್ಯ ಒದಗಿಸಿದ್ದರೂ ಮಕ್ಕಳು ಅದನ್ನು ಧರಿಸಲಾಗುತ್ತಿಲ್ಲವಂತೆ! ಏಕೆಂದರೆ, ಶಾಲೆಯಲ್ಲಿ ನಡೆದಾಡುವಾಗ ಒಬ್ಬರ ಶೂ ಮತ್ತೊಬ್ಬರಿಗೆ ತಗುಲಿದರೆ ಮೈಲಿಗೆಯಾಗುತ್ತದೆ ಎಂಬ ನಂಬಿಕೆ ಈ ಸಮುದಾಯದಲ್ಲಿ ಇದೆ. ಹೀಗಾದಾಗ, ಮೈಲಿಗೆ ತೊಳೆಯುವ ಪೂಜೆಗೆ ಖರ್ಚಾಗುವ ನಾಲ್ಕೈದು ಸಾವಿರವನ್ನು ಕಾಲು ತುಳಿದ ಮಕ್ಕಳ ಪೋಷಕರೇ ಭರಿಸಬೇಕಾಗಿರುವುದರಿಂದ ಮಕ್ಕಳಿಗೆ ಚಪ್ಪಲಿ ಅಥವಾ ಶೂ ಹಾಕಿ ಶಾಲೆಗೆ ಕಳಿಸುವುದನ್ನೇ ಬಿಟ್ಟಿದ್ದಾರೆ.

ಇದು ನಮ್ಮ ಪರಂಪರೆಯಲ್ಲಿ ಬೆಳೆದುಬಂದಿರುವ ಚಾತುರ್ವರ್ಣ ವ್ಯವಸ್ಥೆಯ ಶ್ರೇಣೀಕರಣ ನೀತಿಯ ಉಪ ಉತ್ಪನ್ನವಲ್ಲದೇ ಮತ್ತೇನು? ನಮ್ಮ ಶರೀರದಲ್ಲಿ ಕೈಯಷ್ಟು ಕಾಲು ಸಮಾನವಲ್ಲ ಎಂದು ಪುರುಷಸೂಕ್ತ ಹೇಳುತ್ತದಲ್ಲವೆ! ಅದಕ್ಕೇ ಕಾಲಿನಿಂದ ಒದ್ದರೆ, ಕೈಯಿಂದ ಹೊಡೆದದ್ದಕ್ಕಿಂತ ಹೆಚ್ಚು ಅವಮಾನವಾಗುತ್ತದೆ. ಅಂತಹ ಕಾಲಿಗೆ ಧರಿಸುವ ಚಪ್ಪಲಿ ಅಥವಾ ಶೂ ಇನ್ನೂ ನೀಚವಲ್ಲವೆ? ಆದ್ದರಿಂದ ಶೂ ಸ್ಪರ್ಶವಾದ ವ್ಯಕ್ತಿಯನ್ನು ಶುಚಿಗೊಳಿಸಬೇಕು. ಅದಕ್ಕೆ ನಾಲ್ಕೈದು ಸಾವಿರ ಖರ್ಚು ಮಾಡಿ ಮಂತ್ರಪಠಣ ಮಾಡಿಬಿಟ್ಟರೆ ಪವಿತ್ರನಾಗಿಬಿಡುತ್ತಾನೆ! ಇದು, ಚಂದ್ರಯಾನದ ಗರಿ ಧರಿಸಿ ಮೆರೆದ ನಮ್ಮ ದೇಶದಲ್ಲಿ ಜಾರಿಯಲ್ಲಿದೆ! ನಾವು ಚಿಕ್ಕಂದಿನಲ್ಲಿ ನಮ್ಮ ಕಾಲು ಯಾರಿಗಾದರೂ ತಗುಲಿದರೆ, ಅವರನ್ನು ಕೈಯಿಂದ ಮುಟ್ಟಿ ನಮ್ಮ ಕೈಯನ್ನು ನಮ್ಮ ಕಣ್ಣಿಗೆ ನಮಸ್ಕರಿಸುವ ರೀತಿಯಲ್ಲಿ ಒತ್ತಿಕೊಳ್ಳುತ್ತಿದ್ದೆವು. 'ಅಯ್ಯೋ ನೋಡಲಿಲ್ಲ' ಎಂದು ಹೇಳುತ್ತಿದ್ದೆವು ಅಷ್ಟೆ. ಆಗ ತಗುಲಿಸಿಕೊಂಡವನಿಗೂ ಸಮಾಧಾನ, ನಮಗೂ ಸಮಾಧಾನ. ಅಲ್ಲಿಗೆ ಎಲ್ಲ ಮುಗಿಯುತ್ತಿತ್ತು. ಆದರೆ ಹಲವೆಡೆ ನಡೆಯುತ್ತಲೇ ಬಂದಿರುವ ತಾರತಮ್ಯದ ಆರ್ಭಟಗಳನ್ನು ಗಮನಿಸಿದರೆ, ಜಿ.ಎಸ್.ಶಿವರುದ್ರಪ್ಪ ಅವರ, 'ಯಾವುದೀ ಪ್ರವಾಹವು? ಮನೆಮನಗಳ ಕೊಚ್ಚಿ ಕೊರೆದು ಬುಸುಗುಡುತ್ತ ಧಾವಿಸುತಿದೆ...' ಎಂಬ ಕವನದ ಸಾಲುಗಳು ನೆನಪಾಗುತ್ತವೆ!

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಒಲುಮೆಯ ನಮನ

ತಾಯಿನುಡಿ ಮಲಯಾಳಂ ಆದರೂ
ಕನ್ನಡ, ತುಳುವಿನಲಿ ಹಗಲಿರುಳೂ
ದಣಿವರಿಯದೆ ದುಡಿದ ಸಂತ
ದುಡಿಮೆಯೇ ದೇವರೆಂದಿರಿ
ನಿಮ್ಮದೇ ಛಾಪು ಒತ್ತಿದಿರಿ
ಮೌಲಿಕ ಕೊಡುಗೆ ನೀಡಿದಿರಿ
ಸೃಜನ, ಸೃಜನೇತರ ಕ್ಷೇತ್ರಗಳಲಿ
ಮಗುಮನದ ಹೂನಗೆಯ ಅಮೃತ
ನೀವು ಸದಾ ಚಿರಂತನ ಸಾಹಿತ್ಯದಲಿ
ನಿಮಗಿದೋ ಒಲುಮೆಯ ನುಡಿನಮನ

(ಶನಿವಾರ ನಿಧನರಾದ ಪ್ರೊ. ಅಮೃತ ಸೋಮೇಶ್ವರ ಅವರ ನೆನಪಿನಲ್ಲಿ)

ಸಿ.ಪಿ.ಸಿದ್ಧಾಶ್ರಮ, ಮೈಸೂರು

ಪ್ರೇರಣೆಯ ಮಾತು ಅಮಾನವೀಯವೇ?

ಪದವಿಪೂರ್ವ ಶಿಕ್ಷಣ ಇಲಾಖೆಯ ಕೆಲವು ಜಿಲ್ಲೆಗಳ ಉಪನಿರ್ದೇಶಕರು ಸರ್ಕಾರಿ ಪದವಿಪೂರ್ವ ಮತ್ತು ಅನುದಾನಿತ ಕಾಲೇಜುಗಳಲ್ಲಿ ಶೇ 100ರಷ್ಟು ಫಲಿತಾಂಶಕ್ಕೆ ಪ್ರಾಂಶುಪಾಲರು ಹಾಗೂ ಉಪನ್ಯಾಸಕರ ಮೇಲೆ ಒತ್ತಡ ಹೇರುತ್ತಿದ್ದಾರೆ ಎಂಬ ಆಕ್ಷೇಪ ಕೇಳಿಬಂದಿದೆ. ಹಾಗಿದ್ದರೆ ಇದು ಅಮಾನವೀಯವೇ? ಅದಾಗಲೇ ಖಾಸಗಿ ಕಾಲೇಜುಗಳಲ್ಲಿ ಶೇ 100ರಷ್ಟು ಫಲಿತಾಂಶ ದಾಖಲಾಗುತ್ತಿದ್ದು, ಮಧ್ಯಮ ವರ್ಗದ, ಹಿಂದುಳಿದ ವರ್ಗದ ಬಹುತೇಕ ಮಕ್ಕಳು ಖಾಸಗಿ ಕಾಲೇಜುಗಳ ಕಡೆ ಮುಖ ಮಾಡಿದ್ದಾರೆ. ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಕ್ರಮೇಣ ಕಡಿಮೆಯಾಗುತ್ತಿರುವುದು ಗುಟ್ಟಿನ ಸಂಗತಿಯೇನಲ್ಲ. ಮೆರಿಟ್‌ನಲ್ಲಿ ಆಯ್ಕೆಯಾಗಿ ಬರುವ ಉಪನ್ಯಾಸಕರು ವರ್ಷವಿಡೀ ಬೋಧಿಸಿದ್ದರೂ ಫೇಲಾಗುವ ಈ ಮಕ್ಕಳು, ಕನಿಷ್ಠ ಅಂಕಗಳನ್ನಾದರೂ ಪಡೆದು ಉತ್ತೀರ್ಣರಾಗಿ ವಿದ್ಯಾಭ್ಯಾಸ ಮುಂದುವರಿಸಲಿ ಎಂಬುದು ಆ ಉಪನಿರ್ದೇಶಕರ ಕಾಳಜಿ ಯಾಕಾಗಿರಬಾರದು?

ಪಿಯುಸಿಯಲ್ಲಿ ಕನಿಷ್ಠ ಅಂಕಗಳನ್ನೂ ಪಡೆಯಲಾಗದ ಮಕ್ಕಳನ್ನು ನೋಡಿದರೆ, 15 ವರ್ಷಗಳ ಅವರ ಶಾಲಾ ಶಿಕ್ಷಣ ಅಷ್ಟೊಂದು ಕಳಪೆಯಾಗಿತ್ತೇ ಎಂಬ ಪ್ರಶ್ನೆ ಮೂಡುತ್ತದೆ. ಮನೆಪಾಠದ ನೆರವಿಲ್ಲದೆಯೇ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಬಹುತೇಕ ಸರ್ಕಾರಿ ಕಾಲೇಜುಗಳ ಮಕ್ಕಳು ಶೇ 100ರಷ್ಟು ಫಲಿತಾಂಶ ಪಡೆಯುತ್ತಿರುವುದನ್ನು ಗಮನಿಸಬೇಕು. ಇದು ಅಂಕಗಳ ಪ್ರಶ್ನೆಯಲ್ಲ, ಅಧ್ಯಾಪಕರ ಪರಿಶ್ರಮದ ಪ್ರಶ್ನೆ. ಸರ್ಕಾರಿ ಕಾಲೇಜಿನ ಮಕ್ಕಳ ಶೈಕ್ಷಣಿಕ ಭವಿಷ್ಯ ರೂಪಿಸಬೇಕಾದ ಹೊಣೆಯನ್ನು, ಸರ್ಕಾರಿ ಉಪನ್ಯಾಸಕರು ಅರ್ಥಮಾಡಿಕೊಳ್ಳಲಿ ಎಂಬ ಪ್ರೇರಣೆಯ ಮಾತು ಅಮಾನವೀಯ ಎನಿಸುವುದಿಲ್ಲ.

ಎ.ಆರ್.ಗೋವಿಂದಸ್ವಾಮಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಮಾಲ್ದೀವ್ಸ್ ಭಾರತದಿಂದ ದೂರ ಚೀನಾಕ್ಕೆ ಹತ್ತಿರ

ಪ್ರಜಾವಾಣಿ ವಾರ್ತೆ

ಪ್ರಧಾನಿ ನರೇಂದ್ರ ಮೋದಿ ಅವರು ಲಕ್ಷದ್ವೀಪಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದರು. ಮಾಲ್ದೀವ್ಸ್‌ಗೆ ಸರಿಸಾಟಿಯಾಗಿ ಲಕ್ಷದ್ವೀಪ ಪ್ರವಾಸೋದ್ಯಮಕ್ಕೆ ಒತ್ತು ನೀಡಲು ಪ್ರಧಾನಿ ಮೋದಿ ಅವರು ಅಲ್ಲಿಗೆ ಭೇಟಿ ನೀಡಿದರು ಎನ್ನುವ ಚರ್ಚೆ ಆರಂಭವಾಯಿತು. ಪ್ರಧಾನಿ ಅವರ ಚಿತ್ರ ಹಾಗೂ ವಿಡಿಯೊಗಳು ಇದಕ್ಕೆ ಪುಷ್ಟಿ ನೀಡಿದವು. ಈ ಚಿತ್ರ ಹಾಗೂ ವಿಡಿಯೊಗಳಿಗೆ ಮಾಲ್ದೀವ್ಸ್‌ನ ಸಚಿವೆಯಾಗಿದ್ದ ಮರಿಯಂ ಶಿವ್ನ ಪ್ರತಿಕ್ರಿಯಿಸಿ, 'ಎಂಥ ಕೋಡಂಗಿ, ಇಸ್ರೇಲ್‌ನ ಕೈಗೊಂಬೆ ಮಿಸ್ಟರ್ ನರೇಂದ್ರ ಮೋದಿ ಅವರು ಲೈಫ್ ಜಾಕೆಟ್‌ನೊಂದಿಗೆ ಸಮುದ್ರಕ್ಕೆ ಹಾರಿದರು' ಎಂದು 'ಎಕ್ಸ್' ಪೋಸ್ಟ್ ಮಾಡಿದರು. ಇದು ಭಾರತದಲ್ಲಿ ದೊಡ್ಡ ವಿವಾದಕ್ಕೆ ಕಾರಣ ಆಗಿದೆ. ಶಿವ್ನ ಅವರು ತಮ್ಮ ಎಕ್ಸ್ ಪೋಸ್ಟ್ ಅನ್ನು ಅಳಿಸಿದ್ದಾರೆ. ಆದರೂ, ಅವರ ಪೋಸ್ಟ್‌ನ ಸ್ಕ್ರೀನ್‌ಶಾಟ್‌ಗಳು ವಿವಾದವನ್ನು ಬಿಸಿಯಾಗಿಯೇ ಇರಿಸಿವೆ.



ಮುಸ್ಲಿಂ ದೇಶ ಮಾಲ್ದೀವ್ಸ್‌ನ ಕಡಲತೀರದ ರಾಜಕೀಯ ಲೆಕ್ಕಾಚಾರಗಳು ಈಗ ಬದಲಾಗಿವೆ. ಹಲವು ವರ್ಷಗಳಿಂದ ಇಲ್ಲಿನ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಗಳು ಭಾರತ ಹಾಗೂ ಚೀನಾದ 'ಪರ' ಅಥವಾ 'ವಿರೋಧ' ಎನ್ನುವ ಚರ್ಚೆಯ ಕುರಿತೇ ನಡೆದಿವೆ. ಚೀನಾ ಅಥವಾ ಭಾರತ ಎನ್ನುವ ಚರ್ಚೆಯು ಅಲ್ಲಿನ ಜನರ ಮೇಲೆ ಅಷ್ಟೇನು ಪ್ರಭಾವ ಬೀರಿಲ್ಲ ಎನ್ನುವುದು ಅಲ್ಲಿನ ರಾಜಕೀಯ ವಿಶ್ಲೇಷಕರ ಅಭಿಪ್ರಾಯ. ಆದರೂ, ಅಲ್ಲಿನ ರಾಜಕೀಯ ಮಾತ್ರ ಭಾರತ ಪರವೇ ಅಥವಾ ಚೀನಾ ಪರವೇ ಎನ್ನುವ ಚರ್ಚೆಯ ಸುತ್ತಲೇ ನಡೆಯುತ್ತಿದೆ. 2023ರಲ್ಲಿ ನಡೆದ ಚುನಾವಣೆಯಲ್ಲಿ ಭಾರತವನ್ನು ಹೆಚ್ಚು ಕಡಿಮೆ ಮಾಲ್ದೀವ್ಸ್‌ನಿಂದ ಹೊರ ಹಾಕಲಾಗಿದೆ. ಚೀನಾವು ಭಾರತದ ಸ್ಥಾನವನ್ನು ಪಡೆದುಕೊಂಡಿದೆ.

ಭಾರತಕ್ಕೆ ಮಾಲ್ದೀವ್ಸ್ ಸಾಂಪ್ರದಾಯಿಕ ಸ್ನೇಹ ವಲಯದ ದೇಶ. ಈ ಹಿಂದಿನ ಹಲವು ಅಧ್ಯಕ್ಷರು 'ಭಾರತ ಮೊದಲು' ಎನ್ನುವ ವಿದೇಶಾಂಗ ನೀತಿಯನ್ನು ಅನುಸರಿಸಿದ್ದರು. ಆದರೆ, 2013ರಿಂದ 2018ರ ವರೆಗೆ ಅಧ್ಯಕ್ಷರಾಗಿದ್ದ ಅಬ್ದುಲ್ಲಾ ಯಮೀನ್, ಚೀನಾದ ಪರ ಒಲವು ಹೊಂದಿದವರಾಗಿದ್ದರು. 'ಭಾರತ ಮೊದಲು' ಎಂದು ತೋರಿಸಿಕೊಂಡರೂ ಚೀನಾಕ್ಕೆ ಹೆಚ್ಚಿನ ಪ್ರಾಮುಖ್ಯ ನೀಡಿದರು. ಈ ಕುರಿತು ದೇಶದಲ್ಲಿ ದೊಡ್ಡ ಮಟ್ಟದ ವಿರೋಧ ವ್ಯಕ್ತವಾಯಿತು. ಈ ಕಾರಣಕ್ಕಾಗಿಯೇ 2018ರಲ್ಲಿ ಭಾರತದ ಪರ ಒಲವಿರುವ ಇಬ್ರಾಹಿಂ ಮೊಹಮ್ಮದ್ ಸಾಲಿಹ್ ಅಧ್ಯಕ್ಷರಾದರು. ಇವರು ಭಾರತದೊಂದಿಗೆ ಒಳ್ಳೆಯ ಸಂಬಂಧ ಇರಿಸಿಕೊಂಡಿದ್ದರು. ಹೀಗೆ, ಭಾರತ ಅಥವಾ ಚೀನಾ ಎನ್ನುವ ಚರ್ಚೆ ನಡೆಯುತ್ತಿದ್ದರೂ ಭಾರತದೊಂದಿಗೆ ಮಾಲ್ದೀವ್ಸ್ ಒಳ್ಳೆಯ ಸಂಬಂಧವನ್ನು ಇರಿಸಿಕೊಂಡಿತ್ತು. ಆದರೆ, 2023ರಲ್ಲಿ ಆಯ್ಕೆಯಾದ ಮೊಹಮ್ಮದ್ ಮುಯಿಜು, ಮಾಲ್ದೀವ್ಸ್‌ನೊಂದಿಗಿನ ಭಾರತದ ಸಂಬಂಧವನ್ನು ಸಂಪೂರ್ಣವಾಗಿ ವಿರೋಧಿಸಿದರು.

'ಭಾರತ ಹೊರಹೋಗಲಿ' ಅಭಿಯಾನ: 'ಭಾರತ ಮೊದಲು' ನೀತಿಯು ಈಗ 'ಭಾರತ ಹೊರಹೋಗಲಿ' ಎಂದು ಬದಲಾಗಿದೆ. ಮೊಹಮ್ಮದ್ ಮುಯಿಜು ಅವರ ಚುನಾವಣೆಯ ಪ್ರಚಾರದ ಕೇಂದ್ರವೇ 'ಭಾರತ ಹೊರಹೋಗಲಿ' ಎಂದಾಗಿತ್ತು. ತಮ್ಮ ಭಾಷಣಗಳಲ್ಲಿಯೂ ಅವರು ಇದನ್ನೇ ಪ್ರಸ್ತಾಪಿಸಿದ್ದರು. ಚೀನಾದ ಪರವಾಗಿ ಸಾರ್ವಜನಿಕವಾಗಿಯೇ ಮಾತನಾಡಿದ್ದರು.



ಮೊಹಮ್ಮದ್ ಮುಯಿಜು

ಅಧ್ಯಕ್ಷ ಯಮೀನ್ ಸಂಪುಟದಲ್ಲಿ ಸಚಿವರಾಗಿದ್ದ ಮುಯಿಜು ಅವರು ಮಾಲ್ದೀವ್ಸ್ ಅಭಿವೃದ್ಧಿಗಾಗಿ ಚೀನಾದಿಂದ ದೊಡ್ಡ ಮೊತ್ತದ ನೆರವು ಮತ್ತು ಸಾಲ ತಂದಿದ್ದರು. ಈ ಬಾರಿಯ ಚುನಾವಣಾ ಪ್ರಚಾರದ ವೇಳೆಯೇ, ಚೀನಾದ ಕಮ್ಯುನಿಸ್ಟ್ ಪಕ್ಷದೊಂದಿಗೆ ವಿಡಿಯೊ ಸಂವಾದ ನಡೆಸಿದ್ದ ಮುಯಿಜು ಅವರು, ಅಧಿಕಾರಕ್ಕೆ ಬಂದರೆ ಚೀನಾದೊಂದಿಗೆ ಗಟ್ಟಿ ಸಂಬಂಧ ಹೊಂದುವುದಾಗಿ ಹೇಳಿದ್ದರು.

ದೇಶಕ್ಕೆ ಸಾರ್ವಭೌಮತ್ವವಿದೆ. ಈ ದೇಶದಲ್ಲಿ ವಿದೇಶಿ ಸೇನೆ ಇರಕೂಡದು ಎಂದು ಭಾರತಕ್ಕೆ ಎಚ್ಚರಿಕೆಯನ್ನೂ ನೀಡಿದ್ದರು. ಅಂತೆಯೇ ಅವರು ಆಯ್ಕೆಯಾದ ಬಳಿಕ, ಭಾರತದ 77 ಸೈನಿಕರಿರುವ ತಂಡವನ್ನು ಮಾಲ್ದೀವ್ಸ್‌ನಿಂದ ಹಿಂಪಡೆಯುವಂತೆ ಪದೇ ಪದೇ ಹೇಳಲಾಗುತ್ತಿದೆ. ಮಾಲ್ದೀವ್ಸ್‌ನಲ್ಲಿ ಯಾರೇ ಅಧ್ಯಕ್ಷರಾದರೂ, ಅವರು ಮೊದಲು ಭಾರತಕ್ಕೆ ಭೇಟಿ ನೀಡುತ್ತಿದ್ದರು. ಆದರೆ, ಮುಯಿಜು ಅವರು ಈ ಸಂಪ್ರದಾಯವನ್ನು ಮುರಿದು, ಟರ್ಕಿಗೆ ಭೇಟಿ ನೀಡಿದರು. ಹಮಾಸ್ ಹಾಗೂ ಇಸ್ರೇಲ್ ವಿರುದ್ಧ ನಡೆಯುತ್ತಿರುವ ಯುದ್ಧದಲ್ಲಿ ಭಾರತದ ನಿಲುವಿನ ಕಾರಣಕ್ಕಾಗಿಯೇ ಮುಯಿಜು ಅವರು ಮೊದಲು ಟರ್ಕಿಗೆ ಭೇಟಿ ನೀಡಿದರು ಎನ್ನುವ ಚರ್ಚೆಯೂ ಇದೆ. ದುಬೈನಲ್ಲಿ ನಡೆದ ಹವಾಮಾನ ಬದಲಾವಣೆ ಶೃಂಗಸಭೆ–28ರಲ್ಲಿ ಭಾಗವಹಿಸಿದ್ದಾಗ, ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತುಕತೆ ನಡೆಸಿದ್ದರಷ್ಟೇ. ಈಗ ಜನವರಿ 8ರಿಂದ 12ರವರೆಗೆ ಚೀನಾ ಭೇಟಿಗೆ ಮುಯಿಜು ಸಿದ್ಧರಾಗಿದ್ದಾರೆ.

ಚೀನಾ ಸೇನೆಯ 'ಮುತ್ತಿನ ಮಾಲೆ'ಗೆ ಮತ್ತೊಂದು ಮುತ್ತು?

ಜಗತ್ತಿನ ಶೇ 40ರಷ್ಟು ವಿದೇಶಿ ವ್ಯಾಪಾರ ನಡೆಯುವ ಮಲಕ್ಕಾ ಸಮುದ್ರ ಮಾರ್ಗದಲ್ಲಿನ ಎಲ್ಲಾ ಆಯಕಟ್ಟಿನ ಜಾಗದಲ್ಲೂ ತನ್ನ ಪ್ರಾಬಲ್ಯ ಸಾಧಿಸುವ ಚೀನಾದ ಕಾರ್ಯತಂತ್ರವೇ 'ಮುತ್ತಿನ ಮಾಲೆ' (ಸ್ಟ್ರಿಂಗ್ ಆಫ್ ಪರ್ಲ್ಸ್). ದಕ್ಷಿಣ ಚೀನಾ ಸಮುದ್ರ, ಬಂಗಾಳ ಕೊಲ್ಲಿ, ಹಿಂದೂ ಮಹಾಸಾಗರ ಮತ್ತು ಅರಬ್ಬಿ ಸಮುದ್ರವನ್ನು ಈ ಸಮುದ್ರಮಾರ್ಗವು ಹಾದುಹೋಗುತ್ತದೆ. ಈ ಮಾರ್ಗದಲ್ಲಿ ಬರುವ ಪ್ರಮುಖ ಬಂದರುಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುವುದು ಚೀನಾದ 'ಮುತ್ತಿನ ಮಾಲೆ'ಯ ಕಾರ್ಯತಂತ್ರ.

ಬಂಗಾಳ ಕೊಲ್ಲಿ, ಹಿಂದೂ ಮಹಾಸಾಗರ ಮತ್ತು ಅರಬ್ಬಿ ಸಮುದ್ರದಲ್ಲಿ ಇರುವ ಪ್ರಮುಖ ದೇಶಗಳೊಂದಿಗೆ ಭಾರತದ ಸಂಬಂಧ ಈ ಹಿಂದೆ ಉತ್ತಮವಾಗಿಯೇ ಇತ್ತು. ಆದರೆ ಕಳೆದ ದಶಕದಲ್ಲಿ ಆ ಎಲ್ಲಾ ರಾಷ್ಟ್ರಗಳೊಂದಿಗೆ ಚೀನಾವು ತನ್ನ ಸಂಬಂಧವನ್ನು ಗಟ್ಟಿಗೊಳಿಸುತ್ತಾ ಬಂದಿದೆ. ಆರ್ಥಿಕ ನೆರವು, ಸಾಲದ ರೂಪದಲ್ಲಿ ಆ ದೇಶಗಳೊಂದಿಗೆ ಸಂಬಂಧ ಬೆಳೆಸಿದ ಚೀನಾ, ಆ ದೇಶಗಳ ವಿದೇಶಾಂಗ ನೀತಿಯ ಬದಲಾವಣೆಗೆ ಕಾರಣವಾಗಿದ್ದನ್ನು ಅಲ್ಲಗಳೆಯಲಾಗದು. ಬಾಂಗ್ಲಾದೇಶ, ಶ್ರೀಲಂಕಾ, ಮಾಲ್ದೀವ್ಸ್, ಪಾಕಿಸ್ತಾನ ಅಂತಹ ದೇಶಗಳಲ್ಲಿ ಪ್ರಮುಖವಾದವು. ಈ ಎಲ್ಲಾ ದೇಶಗಳಲ್ಲಿ ಚೀನಾವು ತನ್ನ ನೆಲೆಯನ್ನು ಗಟ್ಟಿಗೊಳಿಸುತ್ತಲೇ ಇದೆ.



ಬಾಂಗ್ಲಾದೇಶದ ಢಾಕಾ ಬಂದರು ಅಭಿವೃದ್ಧಿ, ಶ್ರೀಲಂಕಾದ ಹಂಬಂತೋಟ ಬಂದರು, ಪಾಕಿಸ್ತಾನದ ಗ್ವಾಡಾರ್ ಬಂದರುಗಳು ಈಗ ಸಂಪೂರ್ಣವಾಗಿ ಚೀನಾದ ತೆಕ್ಕೆಯಲ್ಲಿವೆ. ಈ ಬಂದರುಗಳನ್ನು ಅಭಿವೃದ್ಧಿಪಡಿಸುವ ಷರತ್ತಿನೊಂದಿಗೆ 75ರಿಂದ 100 ವರ್ಷಗಳವರೆಗೆ ಚೀನಾವು ಗುತ್ತಿಗೆ ಪಡೆದಿದೆ. ಇವುಗಳಲ್ಲದೆ, ಬೇರೆ ಯೋಜನೆಗಳಿಗೂ ಹಣಕಾಸು ಮತ್ತು ಸಾಲದ ನೆರವನ್ನು ನೀಡಿದೆ. ಆ ಮೂಲಕ ಭಾರತದ ಜಲಗಡಿಯಾಚೆಗಿನ ಆಯಕಟ್ಟಿನ ಜಾಗಗಳಲ್ಲಿ ಚೀನಾ ಬಂದು ಕುಳಿತಿದೆ.

ಚೀನಾದ ಈ ಕಾರ್ಯತಂತ್ರಕ್ಕೆ ಮಾಲ್ದೀವ್ಸ್ ಹೊಸ ಸೇರ್ಪಡೆಯಷ್ಟೆ. ಮಾಲ್ದೀವ್ಸ್‌ನ ಐದಕ್ಕೂ ಹೆಚ್ಚು ದ್ವೀಪಗಳನ್ನು ಚೀನಾದ ಕಂಪನಿಗಳು 50 ವರ್ಷಗಳಿಗೆ ಗುತ್ತಿಗೆ ಪಡೆದಿವೆ. ಈ ಹಿಂದಿನ ಎರಡು ಸರ್ಕಾರಗಳ ಅವಧಿಯಲ್ಲಿ ನಡೆದ ಬೆಳವಣಿಗೆ ಇದು. ಇದರ ಜತೆಯಲ್ಲಿ ಮಾಲೆ ವಿಮಾನ ನಿಲ್ದಾಣ ಅಭಿವೃದ್ಧಿ, ಮಾಲೆ ಸಮುದ್ರ ಸೇತುವೆ ಅಭಿವೃದ್ಧಿ ಯೋಜನೆಗಳ ವೆಚ್ಚದ ಶೇ 50ರಷ್ಟನ್ನು ಚೀನಾವೇ ಭರಿಸಿದೆ. ಉಳಿದ ಶೇ 50ರಷ್ಟು ವೆಚ್ಚವನ್ನು ಸಾಲದ ರೂಪದಲ್ಲಿ ಒದಗಿಸಿದೆ. ಇದು ಭಾರತದ ಕಳವಳಕ್ಕೆ ಕಾರಣವಾಗಿತ್ತು. ಮಾಲ್ದೀವ್ಸ್‌ನ ದ್ವೀಪವೊಂದರಲ್ಲಿ 'ಸಮುದ್ರ ಸರ್ವೇಕ್ಷಣಾ ನೆಲೆ'ಯನ್ನು ಸ್ಥಾಪಿಸುವ ಯೋಜನೆಗೆ 2016–17ರಲ್ಲಿ ಮಾಲ್ದೀವ್ಸ್ ಮತ್ತು ಚೀನಾ ಸಹಿ ಹಾಕಿದ್ದವು. ಅದನ್ನು ಭಾರತ ಪ್ರಬಲವಾಗಿ ವಿರೋಧಿಸಿತ್ತು. ಭಾರತದ ವಿರೋಧದ ಕಾರಣದಿಂದಲೇ 2019ರಲ್ಲಿ ಆ ಯೋಜನೆಯನ್ನು ರದ್ದುಪಡಿಸಲಾಗಿತ್ತು.

ಮಾಲೆ ಬಂದರು ಮತ್ತು ಮಾಲೆ ವಿಮಾನ ನಿಲ್ದಾಣವನ್ನು ತನ್ನ ಸೇನಾನೆಲೆಯನ್ನಾಗಿ ಬಳಸಿಕೊಳ್ಳಲು ಚೀನಾ ಮುಂದಾಗುತ್ತಿದೆ ಎಂದು ಜಾಗತಿಕ ಮಟ್ಟದ 'ಥಿಂಕ್ ಟ್ಯಾಂಕ್'ಗಳು ಈಗಾಗಲೇ ಹಲವು ವರದಿ ಪ್ರಕಟಿಸಿವೆ. ಇದನ್ನು ಮಾಲ್ದೀವ್ಸ್ ಮತ್ತು ಚೀನಾ ನಿರಾಕರಿಸುತ್ತಲೂ ಇಲ್ಲ, ಒಪ್ಪಿಕೊಳ್ಳುತ್ತಲೂ ಇಲ್ಲ. ಆದರೆ, ಮಾಲೆಯಲ್ಲಿ ಇರುವ ಭಾರತದ ಕಿರು ಸೇನಾಘಟಕವನ್ನು ವಾಪಸ್ ಕರೆಸಿಕೊಳ್ಳುವಂತೆ ಮಾಲ್ದೀವ್ಸ್ ಈಗಾಗಲೇ ಹಲವು ಬಾರಿ ಹೇಳಿದೆ.

ಚೀನಾದ 'ಮುತ್ತಿನ ಮಾಲೆ' ಕಾರ್ಯತಂತ್ರದ ಕೊನೆಯ ಮುತ್ತಾದ ಮಾಲ್ದೀವ್ಸ್, ಆ ಮಾಲೆಯನ್ನು ಪೂರ್ಣಗೊಳಿಸೀತೇ ಎಂಬುದು ಈಗಿನ ಬಹುದೊಡ್ಡ ಪ್ರಶ್ನೆ. ಭಾರತದೊಂದಿಗೆ ಮಾಲ್ದೀವ್ಸ್‌ನ ರಾಜತಾಂತ್ರಿಕ, ಸೇನಾ ಮತ್ತು ವ್ಯಾಪಾರಿ ಸಂಬಂಧಗಳು ಈ ಪ್ರಶ್ನೆಗೆ ಹೌದು ಎಂಬ ಉತ್ತರವನ್ನು ಸೂಚಿಸುತ್ತಿವೆ.

ಆಧಾರ: ರಾಯಿಟರ್ಸ್, ಪಿಟಿಐ

ರಫ್ತು ಕುಸಿತ

ವರ್ಷ	ರಫ್ತು
2021-22	₹4,982 ಕೋಟಿ
2022-23	₹3,835 ಕೋಟಿ
2023-24 (ಏಪ್ರಿಲ್–ಅಕ್ಟೋಬರ್)	₹3,268 ಕೋಟಿ

ಭಾರತ ಹಾಗೂ ಮಾಲ್ದೀವ್ಸ್‌ನ ವ್ಯಾಪಾರ ಸಂಬಂಧವು ಹಂತ ಹಂತವಾಗಿ ಕಡಿತಗೊಳ್ಳುತ್ತಾ ಬಂದಿದೆ. ಚೀನಾದೊಂದಿಗೆ ಮಾಲ್ದೀವ್ಸ್ ತನ್ನ ವ್ಯಾಪಾರವನ್ನು ಹಂತ ಹಂತವಾಗಿ ಹೆಚ್ಚಿಸಿಕೊಂಡಿದೆ. ಇದೇ ಕಾರಣಕ್ಕಾಗಿ ಮಾಲ್ದೀವ್ಸ್‌ಗೆ ಭಾರತದ ರಫ್ತು ಪ್ರಮಾಣವು ಕುಸಿಯುತ್ತಿದೆ.

2015ರಲ್ಲಿ ಚೀನಾ–ಮಾಲ್ದೀವ್ಸ್ ಮುಕ್ತ ವ್ಯಾಪಾರ ಒಪ್ಪಂದದ ಮಾತುಕತೆ ಆರಂಭಿಸಿತ್ತು. 2017ರ ಹೊತ್ತಿಗೆ ಈ ಮಾತುಕತೆಯು ತಾರ್ಕಿಕ ಅಂತ್ಯ ಕಂಡು, ಚೀನಾ ಹಾಗೂ ಮಾಲ್ದೀವ್ಸ್ ಮಧ್ಯೆ ವ್ಯಾಪಾರ ಸಂಬಂಧ ಬೆಳೆಯಿತು. ಎರಡೂ ದೇಶಗಳ ಮಧ್ಯೆ ನಡೆಯುತ್ತಿದ್ದ ಒಟ್ಟು ವ್ಯಾಪಾರದಲ್ಲಿ ಶೇ 96ರಷ್ಟು ವ್ಯಾಪಾರವು ಮುಕ್ತ ವ್ಯಾಪಾರ ಒಪ್ಪಂದದ ಅಡಿಯಲ್ಲಿಯೇ ನಡೆದವು. ಇದು ಎರಡು ದೇಶಗಳನ್ನು ವ್ಯಾವಹಾರಿಕವಾಗಿ ಒಗ್ಗೂಡಿಸಿತು. ಅಧ್ಯಕ್ಷರಾಗಿದ್ದ ಅಬ್ದುಲ್ಲಾ ಯಮೀನ್ 'ಭಾರತ ಮೊದಲು' ಎಂದು ಹೇಳಿದರೂ ಚೀನಾ ಮಾತ್ರ ಮಾಲ್ದೀವ್ಸ್‌ನ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ತೊಡಗಿಯೇ ಇತ್ತು. ಆದರೆ, ನಂತರ 2018ರಲ್ಲಿ ಇಬ್ರಾಹಿಂ ಸಾಲಿಹ್ ಅವರು ಮಾಲ್ದೀವ್ಸ್‌ನ ಅಧ್ಯಕ್ಷರಾದರು. ಇವರು 'ಭಾರತ ಮೊದಲು' ಎನ್ನುವ ನೀತಿಯನ್ನು ಅಳವಡಿಸಿಕೊಂಡರು.

ಭಾರತ ಹಾಗೂ ಮಾಲ್ದೀವ್ಸ್ ಸರ್ಕಾರಗಳ ಮಧ್ಯೆ ಒಳ್ಳೆಯ ಸಂಬಂಧ ಏರ್ಪಟಿತ್ತು. ಪ್ರಧಾನಿ ಮೋದಿ ಸೇರಿದಂತೆ, ವಿದೇಶಾಂಗ ಸಚಿವ ಜೈಶಂಕರ್, ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರೂ ಮಾಲ್ದೀವ್ಸ್‌ಗೆ ಭೇಟಿ ನೀಡಿದರು. ಸಾಲಿಹ್ ಸಹ ಭಾರತಕ್ಕೆ ಹಲವು ಬಾರಿ ಭೇಟಿ ನೀಡಿದರು. ಎರಡು ದೇಶಗಳೂ ಹಲವು ಒಪ್ಪಂದಗಳನ್ನು ಮಾಡಿಕೊಂಡಿತು. ಹಾಗಿದ್ದರೂ, ಮಾಲ್ದೀವ್ಸ್‌ಗೆ ಭಾರತದ ರಫ್ತು ಪ್ರಮಾಣವು ಕಡಿತಗೊಳ್ಳುತ್ತಲೇ ಬಂದಿತು.

2021–22ರಲ್ಲಿ ₹4,982 ಕೋಟಿಯಷ್ಟಿದ್ದ ಭಾರತದ ರಫ್ತು, 2022–23ರ ಹೊತ್ತಿಗೆ ₹3,835 ಕೋಟಿಗೆ ಇಳಿಕೆ ಕಂಡಿತು. 2023–24ರ ಏಪ್ರಿಲ್–ಅಕ್ಟೋಬರ್‌ನ ಏಳು ತಿಂಗಳಲ್ಲಿ ₹3,268 ಕೋಟಿಗೆ ಇಳಿಯಿತು. ನವೆಂಬರ್‌ನಲ್ಲಿ ಮೊಹಮ್ಮದ್ ಮುಯಿಜು ಅವರು ಅಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ. ಚೀನಾದ ಪರ ಹೆಚ್ಚಿನ ಒಲವು ಹೊಂದಿರುವ ಇವರ ಕಾಲಾವಧಿಯಲ್ಲಿ ಭಾರತದ ರಫ್ತು ಹೆಚ್ಚಿಗೆ ಆಗುವ ಲಕ್ಷಣಗಳಿಲ್ಲ.



ವಜ್ರಾಂಗ್ ಶೆಟ್ಟಿ

'ಸಲಾರ್' ವಿಷ್ಣುವಿಗೆ ಹೆಚ್ಚಿದ ಬೇಡಿಕೆ

ತೆಲುಗು ತಾರೆ ಪ್ರಭಾಸ್ ನಟನೆಯ 'ಸಲಾರ್' ಚಿತ್ರದಲ್ಲಿ ಸಾಕಷ್ಟು ಕನ್ನಡದ ನಟರಿದ್ದರು. ತೆರೆಯಲ್ಲಿ ಕಾಣಿಸಿಕೊಳ್ಳಲು ತೀವ್ರ ಪೈಪೋಟಿಯಿರುವಷ್ಟು ಖಳನಾಯಕರಿದ್ದರು. ಅವರೆಲ್ಲರ ನಡುವೆಯೂ ತೆರೆಯ ಮೇಲೆ ಹೆಚ್ಚು ಕಾಲ ಕಾಣಿಸಿಕೊಂಡು ಗಮನಸೆಳೆದ ಕನ್ನಡದ ನಟರಲ್ಲಿ ಕುಂದಾಪುರದ ವಜ್ರಾಂಗ್ ಶೆಟ್ಟಿ ಒಬ್ಬರು.

ಚಿತ್ರದಲ್ಲಿ ಒಂದಷ್ಟು ಭಯಂಕರ ಕೊಲೆಗಳು ನಡೆಯುತ್ತವೆ. ಮಹಾರ ಸಾಮ್ರಾಜ್ಯದಲ್ಲಿ ನಡೆಯುವ ಭರ್ಜರಿ ಫೈಟ್‌ನಲ್ಲಿ 'ವಿಷ್ಣು' ಪಾತ್ರಧಾರಿಯನ್ನು ಈಟಿಯಿಂದ ಕತ್ತು, ತಲೆ ಸೀಳಿ ಭೀಕರವಾಗಿ ಕೊಲ್ಲಲಾಗುತ್ತದೆ. ವಿಷ್ಣುವಿನ ಪಾತ್ರದಲ್ಲಿ ವಜ್ರಾಂಗ್ ಕಾಣಿಸಿಕೊಂಡಿದ್ದಾರೆ.

"2014 ರಲ್ಲಿ ಡಾ.ರಾಜ್‌ಕುಮಾರ್ ನಿರ್ಮಾಣ ಸಂಸ್ಥೆಯ 'ಸಿದ್ದಾರ್ಥ್' ಸಿನಿಮಾ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟೆ. 'ಮಂತ್ರಂ' ಸಿನಿಮಾದಲ್ಲಿ ನಾಯಕನಾಗಿ ಕಾಣಿಸಿಕೊಂಡೆ. ಆದರೆ 'ಸಲಾರ್' ಬಿಡುಗಡೆ ಬಳಿಕ ಎಲ್ಲರೂ ಗುರುತಿಸುತ್ತಿದ್ದಾರೆ. ತೆರೆಯಲ್ಲಿ ಹೆಚ್ಚು ಕಾಲ ಕಾಣಿಸಿಕೊಳ್ಳುವ ಉತ್ತಮ ಕಥೆಗಳನ್ನು ಒಪ್ಪಿಕೊಳ್ಳುತ್ತಿರುವೆ. 'ಮಾರ್ಟಿನ್' ಚಿತ್ರದಲ್ಲಿ ನಟಿಸಿದ್ದೇನೆ. 'ಬರ್ಮಾ' ಚಿತ್ರದಲ್ಲಿ ನಟಿಸುತ್ತಿರುವೆ. ತೆಲುಗಿನಿಂದ ಹೆಚ್ಚು ಅವಕಾಶಗಳು ಬರುತ್ತಿವೆ. ಆದರೆ ಯಾವುದನ್ನೂ ಅಂತಿಮಗೊಳಿಸಿಲ್ಲ" ಎನ್ನುತ್ತಾರೆ ವಜ್ರಾಂಗ್.

'ಉಗ್ರಂ' ಸಿನಿಮಾದಲ್ಲಿ ಬರುವ ಅತ್ಯಾಚಾರದ ದೃಶ್ಯವನ್ನೇ ಪ್ರಶಾಂತ್ ನೀಲ್ 'ಸಲಾರ್'ನಲ್ಲಿ ಇನ್ನೊಂದು ರೀತಿ ಹೆಣೆದಿದ್ದಾರೆ. ಖಾನ್ಸರ್ ಸಾಮ್ರಾಜ್ಯದ ರಾಜ ನಾರಂಗ್‌ನ ಮಗನೇ ವಿಷ್ಣು. 'ರಾಮೋಜಿ ರಾವ್ ಫಿಲ್ಮ್‌ಸಿಟಿಯಲ್ಲಿ ಹಾಕಿದ್ದ ಸೆಟ್‌ನಲ್ಲಿ ಈ ದೃಶ್ಯಗಳು ಚಿತ್ರೀಕರಣವಾಗಿದ್ದವು. ನನ್ನ ಭಾಗ 22 ದಿನ ಶೂಟ್ ಆಗಿತ್ತು. ಅದರಲ್ಲಿ ಮಹಾರದಲ್ಲಿ ನಡೆಯುವ ದೃಶ್ಯಾವಳಿಗಳನ್ನು 17 ದಿನ ಚಿತ್ರೀಕರಿಸಲಾಗಿತ್ತು' ಎಂದು ಚಿತ್ರದ ಕುರಿತು ಅನುಭವ ಹಂಚಿಕೊಂಡರು ವಜ್ರಾಂಗ್.

ರಾಗಿಣಿ 'ಇಮೇಲ್'ಗೆ ಪ್ರಜ್ವಲ್ ಸಾಥ್

ನಟಿ ರಾಗಿಣಿ ದ್ವಿವೇದಿ ಮುಖ್ಯಭೂಮಿಕೆಯಲ್ಲಿರುವ 'ಇಮೇಲ್' ಚಿತ್ರದ ಫಸ್ಟ್ ಲುಕ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಪ್ರಜ್ವಲ್ ದೇವರಾಜ್ ಈ ಚಿತ್ರದ ಫಸ್ಟ್ ಲುಕ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು.

ಎಸ್.ಆರ್ ರಾಜನ್ ಎಸ್ ಆರ್ ಫಿಲ್ಮ್ ಫ್ಯಾಕ್ಟರಿ ಮೂಲಕ ನಿರ್ಮಿಸಿ, ನಿರ್ದೇಶಿಸಿರುವ ಚಿತ್ರ ಕನ್ನಡ ಹಾಗೂ ತಮಿಳು ಭಾಷೆಗಳಲ್ಲಿ ಸಿದ್ಧಗೊಂಡಿದೆ. 'ಮಹಿಳಾ ಪ್ರಧಾನ ಚಿತ್ರವಾಗಿದ್ದು ಇಮೇಲ್, ಗೇಮಿಂಗ್ ಕುರಿತಾದ ಕಥೆ ಹೊಂದಿದೆ. ಚಿತ್ರೀಕರಣ ಪೂರ್ಣಗೊಂಡಿದ್ದು ಶೀಘ್ರದಲ್ಲಿ ತೆರೆಗೆ ಬರಲಿದೆ. ತಮಿಳಿನಲ್ಲಿ ನಿರ್ಮಾಣಗೊಂಡು ಕನ್ನಡಕ್ಕೆ ಡಬ್ ಆಗಿದ್ದರೂ ತಾಂತ್ರಿಕ ವರ್ಗದಲ್ಲಿ ಕನ್ನಡದ ತಂಡವೇ ಇದೆ' ಎಂದರು ರಾಗಿಣಿ.



ರಾಗಿಣಿ

ಮುರುಗ ಅಶೋಕ್, ಮನೋಬಲ, 'ಜೈಲರ್' ಚಿತ್ರದ ಖ್ಯಾತಿಯ ಬಿಲ್ಲಿ, ಮಂಜು ನಂಜನಗೂಡು ಮುಂತಾದವರು ಚಿತ್ರದಲ್ಲಿದ್ದಾರೆ. ಜುಬಿನ್ ಹಾಗೂ ಕಿರಣ್ ತೊಟಂಬೈಲ್ ಸಂಗೀತ ನೀಡಿದ್ದಾರೆ. ಸೆಲ್ವಂ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಕರ್ನಾಟಕ, ತಮಿಳುನಾಡು, ಪಾಂಡಿಚೇರಿ, ಗೋವಾ ಹಾಗೂ ಮುಂಬೈನಲ್ಲಿ ಚಿತ್ರೀಕರಣ ನಡೆದಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಜನವರಿ 8, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ದ್ವಾದಶಿ ಗಂ. 23-59 **ನಕ್ಷತ್ರ:** ಅನುರಾಧಾ ಗಂ. 22-03 **ಯೋಗ:** ಗಂಡ ಗಂ. 26-56 **ಕರಣ:** ಕೌಲವ ಗಂ. 12-29, ಧನು ಮಾಸದ 23 ನೇ ದಿನ,
ಮಳೆನಕ್ಷತ್ರ: ಪೂರ್ವಾಷಾಢ 4. **ರಾಹುಕಾಲ :** ಬೆಳಿಗ್ಗೆ 07-30 – 09-00
ಸೂರ್ಯೋದಯ : 06-59 **ಸೂರ್ಯಾಸ್ತ :** 06-15
ಮುಸ್ಲಿಂ ದಿನಾಂಕ : 25 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 12, 7

ಮೇಷ: ರಿಯಲ್ ಎಸ್ಟೇಟ್ ವ್ಯವಹಾರಸ್ಥರಿಗೆ ಕಾರ್ಯ ಸಾಧನೆಗೆ ಅನುಕೂಲಕರ ಹಾಗೂ ಲಾಭದಾಯಕವಾದ ವಾತಾವರಣ ಸಿಗುವುದು. ಜಾಹೀರಾತುಗಳ ಮೂಲಕ ವಹಿವಾಟನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಫಲ ಕೊಡಲಿದೆ.

ವೃಷಭ: ಸರ್ಕಾರಿ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಹೆಚ್ಚಿನ ಅನುಕೂಲಗಳಾಗುವ ಸಾಧ್ಯತೆ ಇದೆ. ಮಾನಸಿಕ ಕೊರಗು ನಿಮ್ಮ ಸಂತೋಷಕ್ಕೆ ಭಂಗ ಉಂಟುಮಾಡುವುದು. ಸಂಬಂಧಿಕರಲ್ಲಿ ಹಣದ ವ್ಯವಹಾರ ನಡೆಸಬೇಡಿ.

ಮಿಥುನ: ದಿನದ ಮೊದಲಾರ್ಧ ನಿಮಗೆ ಸ್ವಲ್ಪ ಮಟ್ಟಿಗಿನ ಬೇಸರವನ್ನು ತರಬಹುದು. ಆದರೆ ದಿನದ ಕೊನೆಯನ್ನು ಸಂತೋಷದಲ್ಲಿ ಕಳೆಯುತ್ತೀರಿ. ನಿಮ್ಮ ಸಂಪಾದನೆಯನ್ನು ನೋಡಿದ ಕೆಲವರು ಮತ್ಸರಪಡುವಂತಾಗುತ್ತದೆ.

ಕರ್ಕಾಟಕ: ಸಾಮಾಜಿಕ ವಲಯದಲ್ಲಿ ಬರುವ ಅವಕಾಶಗಳನ್ನು ನಿಮ್ಮತ್ತ ತಿರುಗಿಸಿಕೊಂಡು ಸದುಪಯೋಗಪಡಿಸಿಕೊಳ್ಳುವುದು ನಿಮ್ಮ ಕೈಗೆ ಬಿಟ್ಟ ವಿಷಯವಾಗಿರುತ್ತದೆ. ತಲೆ ನೋವಿನಂತಹ ಸಮಸ್ಯೆ ಎದುರಾಗಬಹುದು.

ಸಿಂಹ: ಪ್ರತಿಷ್ಠಿತ ಮತ್ತು ಪ್ರಭಾವಿ ವ್ಯಕ್ತಿಗಳ ಪರಿಚಯವು ನಿಮ್ಮ ಭವಿಷ್ಯದ ಆಲೋಚನೆಗಳನ್ನು ಉತ್ತಮಗೊಳಿಸಲು ಕಾರಣವಾಗುವುದು. ನಿಮ್ಮ ಕೆಲಸ ಕಾರ್ಯಗಳು ಯಾವುದೇ ಆತಂಕವಿಲ್ಲದೆ ನಡೆಯುವುದು.

ಕನ್ಯಾ: ಸಾಂಸ್ಕೃತಿಕವಾಗಿ ಅದರಲ್ಲೂ ಮುಖ್ಯವಾಗಿ ನಟನಾ ವೃತ್ತಿಯವರಿಗೆ ಖ್ಯಾತಿ ಮತ್ತು ಸಂಪತ್ತು ಹರಿದು ಬರಲಿದೆ. ಮೋಜು ಮಸ್ತಿಯ ಆಲೋಚನೆಯಿಂದ ದೂರವಿರುವ ಪ್ರಯತ್ನ ಒಳ್ಳೆಯದು. ಅಧ್ಯಾಪಕರಿಗೆ ಹೆಚ್ಚಿನ ಕೆಲಸಗಳು ಇರಲಿವೆ.

ತುಲಾ: ನೀವೇ ಸ್ವಂತವಾಗಿ ಶುರು ಮಾಡಿದಂತಹ ವ್ಯವಹಾರದಲ್ಲಿ ಲಾಭಗಳಿಸುವ ವಿಚಾರದಲ್ಲಿ ಸ್ವಲ್ಪ ದಿನಗಳ ಮಟ್ಟಿಗೆ ಕಾಯಬೇಕಾಗುವುದು. ಉದ್ಯೋಗದಲ್ಲಿ ಉತ್ತಮ ಹೆಸರು ಗಳಿಸುವ ಪ್ರಯತ್ನಕ್ಕೆ ಶುಭವಾಗುತ್ತದೆ.

ವೃಶ್ಚಿಕ: ಸದ್ಯದ ಪರಿಸ್ಥಿತಿಯಲ್ಲಿ ಇರುವ ಕೆಲಸ ಬಿಡುವ ಯೋಚನೆ ಸರಿಯಲ್ಲ. ವೈಯಕ್ತಿಕವಾದ ಕಷ್ಟಗಳನ್ನು ಯಾರಲ್ಲಿಯೂ ಹೇಳಿಕೊಳ್ಳಬೇಡಿ. ನಿಮ್ಮ ಈ ದಿನದ ಸಾಧನೆಗೆ ತಾಯಿಯ ಬೆಂಬಲ, ಪ್ರೋತ್ಸಾಹ ಸಿಗುವುದು.


ಧನು: ಕೆಲಸ ಕಾರ್ಯಗಳ ಬಗ್ಗೆ ಹೆಚ್ಚಿನ ನಿಗಾ ಕೊಡುವಂತೆ ಅಧಿಕಾರಿಗಳಿಂದ ಸಂದೇಶ ಬರಲಿದೆ. ಗೋವಿನ ಉತ್ಪನ್ನಗಳ ಮಾರಾಟಗಾರರಿಗೆ ಹೆಚ್ಚಿನ ಲಾಭ ಬರುವುದು. ಮಗನಿಗಾಗಿ ವೈದ್ಯಕೀಯ ಖರ್ಚು ಸಂಭವಿಸಬಹುದು.

ಮಕರ: ಆಪ್ತ ಸ್ನೇಹಿತರು ಮತ್ತು ನೆರೆಯವರೊಂದಿಗೆ ಬಾಂಧವ್ಯ ಉತ್ತಮಗೊಳ್ಳುವುದು. ಕೈ ಬಿಟ್ಟಿರುವ ಯೋಜನೆಗಳನ್ನು ಮತ್ತೆ ಮುಂದುವರೆಸಲು ಒತ್ತಡ ಬರಬಹುದು. ಶ್ರೀಮಂತ ಜೀವನವನ್ನು ಮನಸ್ಸು ಹಂಬಲಿಸಲಿದೆ.

ಕುಂಭ: ಸರ್ಕಾರಿ ವೃತ್ತಿಯವರಿಗೆ ಸ್ಥಾನ ಪಲ್ಲಟನೆಯ ಯೋಗ ಅಥವಾ ನೂತನ ಕ್ಷೇತ್ರದ ಹೊಣೆಗಾರಿಕೆಯನ್ನು ವಹಿಸಬೇಕಾದ ಸ್ಥಿತಿ ಎದುರಾಗಲಿದೆ. ವೃತ್ತಿ ನಿಮಿತ್ತದಲ್ಲಿ ಜೀವನ ಮುನ್ನಡೆಸುವ ಚಿಂತೆ, ಆತಂಕ ದೂರವಾಗುವುದು.

ಮೀನ: ರಾಜಕೀಯ ಜೀವನದಲ್ಲಿ ನಿಮ್ಮ ಪರಿಸ್ಥಿತಿ ಸುಧಾರಿಸಿಕೊಳ್ಳಲು ಅನುಕೂಲವಾಗುವ ಅವಕಾಶಗಳು ದೊರೆಯಲಿದೆ. ನಿಮ್ಮ ಪ್ರಯತ್ನಕ್ಕೆ ಸರಿಯಾಗಿ ನಿಮ್ಮ ಸಂಪಾದನೆಯನ್ನು ಉಳಿಸಿಕೊಳ್ಳಲು ಅಸಾಧ್ಯವಾಗಲಿದೆ.

ನಾವೇ ಬದಲಾವಣೆಯ ಬಿಂದುವಾಗೋಣ



ಎಚ್.ಎಸ್.ನವೀನಕುಮಾರ್, ಹೊಸದುರ್ಗ

ಕಡಲ ತೀರದ ಭಾರ್ಗವ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಶಿವರಾಮ ಕಾರಂತರು, ಶಿಸ್ತು ಹಾಗೂ ನುಡಿದಂತೆ ನಡೆಯುವ ವ್ಯಕ್ತಿತ್ವದ ಪ್ರತೀಕವಾಗಿದ್ದರು. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಕಾರಂತರು ಕೃಷಿ ಮಾಡದ ಸಾಹಿತ್ಯ ಪ್ರಕಾರವೇ ಇಲ್ಲ. ಅವರ ಜೊತೆಗಿನ ಕ್ಷಣ ಕಾಲದ ಒಡನಾಟ ಕೂಡ ವಿದ್ಯುತ್ ಸಂಚಲನ ಮೂಡಿಸುವಂಥದ್ದು. ಇದಕ್ಕಾಗಿಯೇ ವಿದೇಶಗಳಲ್ಲಿ ವಿದ್ವಾಂಸರು 'ಹೌ ಈಸ್ ಯುವರ್ ಕರೆಂಟ್?' ಎಂಬುದಾಗಿ ಕಾರಂತರ ಕುರಿತು ವಿಚಾರಿಸುತ್ತಿದ್ದರು ಎಂಬ ಪ್ರತೀತಿಯೂ ಇದೆ. ಇದರ ಒಂದು ಸುಂದರ ಅನುಭವ ನನಗೆ ನನ್ನ ಬಾಲ್ಯದಲ್ಲಾಗಿತ್ತು.

ನಾನು 7ನೇ ತರಗತಿಯಲ್ಲಿದ್ದಾಗ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯನ್ನು ಓದಿ ಪ್ರಭಾವಿತನಾದೆ. ಆಗ ಕಾರಂತರಿಗೊಂದು ಪೋಸ್ಟ್ ಕಾರ್ಡಿನಲ್ಲಿ ಪತ್ರ ಬರೆದೆ 'ನಿಮ್ಮ ಕಾದಂಬರಿ ಓದಿದೆ. ಬಹಳ ಚೆನ್ನಾಗಿದೆ' ಎಂಬುದಾಗಿ ನಾನು ನನ್ನ ಬಾಲ ಭಾಷೆಯಲ್ಲಿ ಬರೆದಿದ್ದ ಪುಟ್ಟ ಪತ್ರಕ್ಕೆ ಕೆಲವೇ ದಿನಗಳಲ್ಲಿ ಕಾರಂತರಿಂದ ಮರಳಿ ಉತ್ತರ ಬಂತು. ಎಲ್ಲಿಯ ಜ್ಞಾನಪೀಠ ಪುರಸ್ಕೃತ ದಿಗ್ಗಜ ಸಾಹಿತಿ ಹಾಗೂ ಎಲ್ಲಿಯ ಏಳನೇ ತರಗತಿಯ ಬಾಲಕ? ಕಾರಂತರ ವಿಶೇಷವೆಂದರೆ ಇದೇ. ಅವರು ತಮಗೆ ಪ್ರತಿದಿನ ಸಾವಿರ ಪತ್ರ ಬಂದಿದ್ದರೂ, ಅದು ಯಾರದ್ದೇ ಆಗಿದ್ದರೂ ಅಷ್ಟೂ ಪತ್ರಗಳಿಗೆ ತಮ್ಮದೇ ಕೈಬರಹದಲ್ಲಿ ಉತ್ತರ ಬರೆದು ಕಳಿಸುತ್ತಿದ್ದರಂತೆ. ಇದು ಅವರ ಶಿಸ್ತು. ಈ ಶಿಸ್ತೇ ಅವರನ್ನು ಸಾಹಿತ್ಯ ಲೋಕದ ಮೇರು ಶಿಖರವನ್ನಾಗಿಸಿದ್ದು. ಕಾರಂತರು ತಮ್ಮ ಪತ್ರದಲ್ಲಿ 'ನಾನು ಇಂಥ ದಿನ ಶೃಂಗೇರಿ ಸಮೀಪದ ಅಡ್ಡಗದ್ದೆಗೆ ಪರಿಸರ ಸಂರಕ್ಷಣೆ ಕುರಿತಾಗಿ ಒಂದು ಉಪನ್ಯಾಸ ನೀಡಲು ಬರುತ್ತಿದ್ದೇನೆ. ನೀನು ಅಲ್ಲಿ ನನ್ನನ್ನು ಭೇಟಿಯಾಗಬಹುದು' ಎಂಬುದಾಗಿ ಬರೆದಿದ್ದರು.

ಎಂತಹ ಸುವರ್ಣಾವಕಾಶ. ಆ ದಿನ ಅಲ್ಲಿಗೆ ತೆರಳಿದ ನಾನು ಪರಿಸರ ಕಾಳಜಿಯ ಕುರಿತು ಕಾರಂತರ ಅದ್ಭುತ ವಾಗ್ಝರಿಯನ್ನು ಆಲಿಸಿ, ಮೂಕವಿಸ್ಮಿತನಾದೆ. ಅದರ ನಂತರ ಇದ್ದ ಸಂವಾದ ಕಾರ್ಯಕ್ರಮದಲ್ಲಿ ಎಂದಿನಂತೆ ಮೊದಲು ಪ್ರಶ್ನೆ ಕೇಳಲು ನಾನು ಎದ್ದುನಿಂತೆ. 'ಪರಿಸರ ಸಂರಕ್ಷಿಸಲು ಜನರ ಮನಸ್ಸನ್ನು ತಿದ್ದಲು ನಾವೇನು ಮಾಡಬೇಕು?' ಎಂಬುದಾಗಿತ್ತು ನನ್ನ ಪ್ರಶ್ನೆ.

ಆಗ ಬಂತು ಕಾರಂತರಿಂದ ಚಾಟಿ ಏಟಿನಂಥ ಉತ್ತರ 'ಜನರನ್ನು ತಿದ್ದಲು ನೀನು ಯಾರು? ಮೊದಲು ನಿನ್ನನ್ನು ನೀನು ತಿದ್ದಿಕೋ ನಿನ್ನ ಮನೆಯ ಹಿತ್ತಿಲಿನಲ್ಲಿ ಮೊದಲು ಗಿಡ ನೆಡು'.


ಇನ್ನೊಬ್ಬರನ್ನು ಬದಲಾಯಿಸುತ್ತೇವೆ ಎಂಬ ಭ್ರಮೆಯ ಬದಲು ನಾವು ಬದಲಾದರೆ ಜಗತ್ತು ಬದಲಾಗುತ್ತದೆ, ಅದಕ್ಕೆ ನಾವು ನುಡಿದಂತೆ ನಡೆಯಬೇಕು ಎನ್ನುವ ಅದ್ಭುತ ಸಂದೇಶ ಕಾರಂತರ ಈ ಮಾತಿನಲ್ಲಿತ್ತು. ಮಹಾತ್ಮ ಗಾಂಧೀಜಿಯವರು ಹೇಳಿದಂತೆ You be the change to change the world. ಅಂದರೆ ಈ ಜಗತ್ತಿನಲ್ಲಿ ಬದಲಾವಣೆ ಮೂಡಬೇಕಾದರೆ ನಾವೇ ಬದಲಾವಣೆಯ ಬಿಂದುವಾಗಬೇಕು.

ಪದಬಂಧ 5554

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪುರದ ಹಿತವನ್ನು ಬಯಸುವ ಪೂಜಾರಿ (4)
3.ಲೆಕ್ಕ ಬರೆಯುವವನು (4)
5.ಗುರುಗುಟ್ಟುತ್ತಿರುವ ಗಂಡುಕುರಿ (3)
7.ಪ್ರತ್ಯಯ ಸಹಿತವಾದ ಶಬ್ದ (2)
8.ಅತ್ಯಂತ ಚಲುವಾದುದು (5)
10.ದುಃಖಾಭರಿತ ನಾಟಕ (5)
12.ತಪ್ಪಲ್ಲ! ಒಪ್ಪಿಗೆ ಸೂಚಿಸುವಾಗ ಹೇಳುವ ಮಾತು (2)
13.ಪರವಾಗಿ ಹಿಡಿದ ಕೊಡಲಿ! (3)
15.ಶ್ರೀ ವೆಂಕಟೇಶ್ವರನ ನೆಲೆನಾಡು (4)
16.ಕಲ್ಲನ್ನು ಕೆತ್ತುವವನು (4)

ಮೇಲಿಂದ ಕೆಳಕ್ಕೆ
1.ನಡುವಿನ ಗಾಡಿ ತಿರುಗಿಸಿದಾಗ ಸಿಕ್ಕಿರುವ ಚಿಲ್ಲರೆಹಣ! (4)
2.ತಟ್ಟಕ್ಕನೆ ತಲುಪಿದ ನದಿಯ ದಡ (2)
3.ಹಸುವಿನ ಮರಿ (2)
4.ಹತ್ತರ ಗುಂಪು ಉಲ್ಟಾ ಆಗಿದೆ (3)
6.ಈತ ಹಳ್ಳಿಯವನು (3)
7.ಪಟ ಹಿಡಿಯಲು ಈ ತೊಳಲಾಟ! (4)
9.ಈ ಹೆಣ್ಣು ದುಂಬಿ ಇನ್ನೂ ಮರಿ! (4)
10.ರಕ್ತ ಇಲ್ಲಿ ಕಾಣುತ್ತಿದೆ (3)
11.ಹಾಲು ಮಾರುವವನು (4)
12.ಈಕೆ ಉಪಪತ್ನಿ (3)
13.ಪದಾತಿಯಲ್ಲಿರುವ ಗಂಡ (2)
14.ಶುನಕವನ್ನು ನೋಡುತ್ತಿರುವ ಗಿಳಿ (2)



5553ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
5.ರಕ್ತಸ್ರಾವ 6.ರಹದಾರಿ
7.ರೆಕ್ಕಸ 9.ಗಟಾರ
10.ವಾದಸರಣಿ 11.ಕತ್ತರಿ
12.ತಪ್ಪಲೆ 16.ಡಬ್ಬುಗಾತಿ
17.ರಕೋಡಿಚಾ

ಮೇಲಿಂದ ಕೆಳಕ್ಕೆ:
1.ಕ್ಷೀರಧಾರೆ 2.ಅವನಿ
3.ಅರಳೆ 4.ಪರಿವಾರ
8.ಸವಾರಿ 9.ಗಣಿತ
11.ಕಮಂಡಲು 13.ಲೆಕ್ಕಾಚಾರ
14.ಅಂತಿಮ 15.ಚರಕ

ಸುಡೊಕು 5939

8		3		1				
		9		5		7		3
	1				3		2	
	4					8		
3			8		1			2
1	9			2				7
	8						7	
2		4	9		7	1		6
	5			3				9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5938 ಸುಡೊಕು

8	7	2	3	4	6	1	9	5
5	1	4	8	2	9	7	6	3
9	3	6	5	1	7	2	8	4
3	8	9	1	6	5	4	2	7
4	2	1	9	7	3	8	5	6
6	5	7	2	8	4	3	1	9
7	4	8	6	9	2	5	3	1
1	9	5	7	3	8	6	4	2
2	6	3	4	5	1	9	7	8

ಎಫ್‌ಪಿಐ: ₹4,800 ಕೋಟಿ ಹೂಡಿಕೆ



ನವದೆಹಲಿ (ಪಿಟಿಐ): ಭಾರತದ ಅರ್ಥ ವ್ಯವಸ್ಥೆಯ ಮೂಲಭೂತ ಅಂಶಗಳು ಬಲವಾಗಿರುವುದರ ವಿಶ್ವಾಸದಿಂದಾಗಿ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಜನವರಿ ಮೊದಲ ವಾರದಲ್ಲಿ ದೇಶದ ಷೇರು ಮಾರುಕಟ್ಟೆಯಲ್ಲಿ ₹4,800 ಕೋಟಿ ಹಾಗೂ ಸಾಲದ ಮಾರುಕಟ್ಟೆಯಲ್ಲಿ ಹೆಚ್ಚುವರಿಯಾಗಿ ₹4 ಸಾವಿರ ಕೋಟಿ ಹೂಡಿಕೆ ಮಾಡಿದ್ದಾರೆ.

2024ರ ಉದ್ದಕ್ಕೂ ಅಮೆರಿಕದ ಬಡ್ಡಿ ದರದಲ್ಲಿ ನಿರಂತರ ಇಳಿಕೆಯ ಸಾಧ್ಯತೆ ಇರುವುದು, ಹೊಸ ವರ್ಷದ ಆರಂಭಿಕ ತಿಂಗಳುಗಳಲ್ಲಿ ಹಾಗೂ ಸಾರ್ವತ್ರಿಕ ಚುನಾವಣೆಗೆ ಮುನ್ನ ಎಫ್‌ಪಿಐಗಳು ತಮ್ಮ ಖರೀದಿಯನ್ನು ಹೆಚ್ಚಿಸುವ ನಿರೀಕ್ಷೆಯಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ. ಇದಲ್ಲದೆ, ಸಾಲದ ಮಾರುಕಟ್ಟೆಯಲ್ಲೂ ಎಫ್‌ಪಿಐ ಒಳಹರಿವು ವೇಗವರ್ಧನೆ ಆಗಲಿದೆ ಎಂದು ಸಹ ತಿಳಿಸಿದ್ದಾರೆ.

ಅಂಕಿ ಅಂಶಗಳ ಪ್ರಕಾರ, ವಿದೇಶಿ ಹೂಡಿಕೆದಾರರು ಜನವರಿ 5ರವರೆಗೆ ದೇಶದ ಷೇರು ಮಾರುಕಟ್ಟೆಯಲ್ಲಿ ₹4,773 ಕೋಟಿ ನಿವ್ವಳ ಹೂಡಿಕೆ ಮಾಡಿದ್ದಾರೆ. ಕಳೆದ ಡಿಸೆಂಬರ್ ಹಾಗೂ ನವೆಂಬರ್ ತಿಂಗಳಲ್ಲಿ ಕ್ರಮವಾಗಿ ₹66,134 ಕೋಟಿ ಮತ್ತು ₹9 ಸಾವಿರ ಕೋಟಿ ಹೂಡಿಕೆ ಮಾಡಿದ್ದರು.

2023ರಲ್ಲಿ ವಿದೇಶಿ ಹೂಡಿಕೆದಾರರು ಷೇರುಗಳಲ್ಲಿ ₹1.71 ಲಕ್ಷ ಕೋಟಿ ಮತ್ತು ಸಾಲದ ಮಾರುಕಟ್ಟೆಯಲ್ಲಿ ₹68,663 ಕೋಟಿಯಷ್ಟು ಹೂಡಿಕೆ ಮಾಡಿದ್ದಾರೆ. ಬಂಡವಾಳ ಮಾರುಕಟ್ಟೆಯಲ್ಲಿ ಒಟ್ಟು ₹2.4 ಲಕ್ಷ ಕೋಟಿ ಹೂಡಿಕೆ ಆಗಿದೆ ಎಂದು ಅಂಕಿ ಅಂಶಗಳು ತಿಳಿಸಿವೆ.

ಚೆನ್ನೈನಲ್ಲಿ ಕ್ವಾಲ್‌ಕಾಮ್ ಇಂಡಿಯಾದ ಹೊಸ ವಿನ್ಯಾಸ ಕೇಂದ್ರ ವಿಸ್ತರಣೆ

ನವದೆಹಲಿ (ಪಿಟಿಐ): ಚಿಪ್ ವಿನ್ಯಾಸಕ ಕಂಪನಿ ಕ್ವಾಲ್‌ಕಾಮ್ ಚೆನ್ನೈನಲ್ಲಿ ಹೊಸ ವಿನ್ಯಾಸ ಕೇಂದ್ರವನ್ನು ವಿಸ್ತರಣೆ ಮಾಡುವುದಾಗಿ ಭಾನುವಾರ ಘೋಷಿಸಿದೆ. ಇದು ₹177.27 ಕೋಟಿ ಪ್ರಸ್ತಾವಿತ ಹೂಡಿಕೆಯಾಗಿದೆ. 1,600 ನುರಿತ ವೃತ್ತಿಪರರಿಗೆ ಉದ್ಯೋಗ ಸಿಗಲಿದೆ ಎಂದು ಚೆನ್ನೈನಲ್ಲಿ ನಡೆದ ತಮಿಳುನಾಡು ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಕಂಪನಿಯು ತಿಳಿಸಿದೆ.

ನಿಸ್ತಂತು ಸಂಪರ್ಕದಲ್ಲಿ ಹೊಸ ಕೇಂದ್ರವು ಪರಿಣತಿಯನ್ನು ಹೊಂದಲಿದೆ. ವೈ-ಫೈ ತಂತ್ರಜ್ಞಾನಗಳಿಗೆ ಪೂರಕವಾದ ಸಂಶೋಧನೆಗಳ ಮೇಲೆ ಈ ಕೇಂದ್ರವು ಗಮನ ಹರಿಸಲಿದೆ. ಇದು 5ಜಿ ಸೆಲ್ಯುಲಾರ್ ತಂತ್ರಜ್ಞಾನದಲ್ಲಿ ಕ್ವಾಲ್‌ಕಾಮ್‌ನ ಜಾಗತಿಕ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯತ್ನಗಳಿಗೆ ಸಕ್ರಿಯ ಕೊಡುಗೆ ನೀಡಲಿದೆ. ವೈರ್‌ಲೆಸ್ ಸಂವಹನ ಉದ್ಯಮದಲ್ಲಿ ಮುಂಚೂಣಿಯಲ್ಲಿರಲು ಕಂಪನಿಯ ಬದ್ಧತೆಯನ್ನು ಹೊಂದಿದೆ. ಹೊಸ ವಿನ್ಯಾಸ ಕೇಂದ್ರವು ಚೆನ್ನೈನ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಕೊಡುಗೆ ನೀಡುತ್ತದೆ ಎಂದು ಹೇಳಿದೆ.

'ಭಾರತದಲ್ಲಿ ತಯಾರಿಸಿ ಮತ್ತು ಭಾರತದಲ್ಲಿ ವಿನ್ಯಾಸಗೊಳಿಸಿ ಎಂಬ ಕ್ವಾಲ್‌ಕಾಮ್‌ನ ಬದ್ಧತೆಗೆ ಈ ಹೊಸ ಕೇಂದ್ರವು ಬೆಂಬಲ ನೀಡಲಿದೆ. ಭಾರತದ ತಂತ್ರಜ್ಞಾನ ಪಾಲುದಾರರೊಂದಿಗಿನ ನಮ್ಮ ಸಹಭಾಗಿತ್ವವನ್ನು ಇದು ಇನ್ನಷ್ಟು ವಿಸ್ತರಿಸಲಿದೆ. ಹೊಸ ತಂತ್ರಜ್ಞಾನ ಅಳವಡಿಕೆಗೆ ವೇಗ ತುಂಬಲಿದೆ' ಎಂದು ಕ್ವಾಲ್‌ಕಾಮ್ ಇಂಡಿಯಾದ ಅಧ್ಯಕ್ಷ ಸವಿ ಸೊಯಿನ್ ಹೇಳಿದ್ದಾರೆ.

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹223-476
ದ್ವಿತಳಿ (ಬಿ.ವಿ)	₹244-571

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹575
12 ಮೊಟ್ಟೆಗೆ	₹78
ಮೈಸೂರು	
100 ಮೊಟ್ಟೆಗೆ	₹575

8,280 ಬಾಟಲಿ ಜೆನರಿಕ್ ಔಷಧ ಹಿಂಪಡೆದ ಡಾ.ರೆಡ್ಡೀಸ್

ನವದೆಹಲಿ (ಪಿಟಿಐ): ಪ್ಯಾಕೇಜಿಂಗ್‌ನಲ್ಲಿನ ದೋಷದಿಂದಾಗಿ ಅಮೆರಿಕದ ಮಾರುಕಟ್ಟೆಯಿಂದ ಜೆನರಿಕ್ ಔಷಧಿಯ 8 ಸಾವಿರ ಬಾಟಲಿಗಳನ್ನು ಡಾ.ರೆಡ್ಡೀಸ್ ಲ್ಯಾಬೋರೇಟರೀಸ್ ಹಿಂಪಡೆಯುತ್ತಿದೆ ಎಂದು ಅಮೆರಿಕದ ಆಹಾರ ಮತ್ತು ಔಷಧ ಆಡಳಿತವು (ಯುಎಸ್‌ಎಫ್‌ಡಿಎ) ತಿಳಿಸಿದೆ.

ಹೈದರಾಬಾದ್‌ನ ಡಾ.ರೆಡ್ಡೀಸ್ 8,280 ಬಾಟಲಿಗಳ ಟ್ಯಾಕ್ರೋಲಿಮಸ್ ಮಾತ್ರೆಗಳನ್ನು ಹಿಂಪಡೆಯುತ್ತಿದೆ. ಒಂದು 0.5 ಮಿಲಿ ಗ್ರಾಂ ಟ್ಯಾಕ್ರೋಲಿಮಸ್ ಕ್ಯಾಪ್ಸುಲ್ 1 ಮಿಲಿ ಗ್ರಾಂ (ಎಂ.ಜಿ) ಟ್ಯಾಕ್ರೋಲಿಮಸ್ ಕ್ಯಾಪ್ಸುಲ್‌ಗಳ ಬಾಟಲಿಯಲ್ಲಿ ಕಂಡು ಬಂದಿದೆ ಎಂದು ಯುಎಸ್‌ಎಫ್‌ಡಿಎ ತನ್ನ ಇತ್ತೀಚಿನ ವರದಿಯಲ್ಲಿ ತಿಳಿಸಿದೆ.

ಕಸಿ ಮಾಡಲಾದ ಅಂಗಾಂಗವನ್ನು ದೇಹವು ತಿರಸ್ಕರಿಸದಂತೆ ನೋಡಿಕೊಳ್ಳುವ ಔಷಧ ಇದಾಗಿದೆ. ಕಳೆದ ವರ್ಷ ಮಾರ್ಚ್‌ನಲ್ಲಿಯೂ ಇದೇ ಔಷಧದ 4 ಸಾವಿರ ಬಾಟಲಿಗಳನ್ನು ಡಾ.ರೆಡ್ಡೀಸ್ ಹಿಂಪಡೆದಿತ್ತು.

ಅರಿವಿಲ್ಲದೆ 'ಐಪಿಒ' ಹಿಂದೆ ಓಡಬೇಡಿ!



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಷೇರು ಮಾರುಕಟ್ಟೆ ಉತ್ತಮ ಸ್ಥಿತಿಯಲ್ಲಿರುವಾಗ 'ಐಪಿಒ'ಗಳ (ಆರಂಭಿಕ ಸಾರ್ವಜನಿಕ ಹೂಡಿಕೆ) ಭರಾಟೆ ಶುರುವಾಗುತ್ತದೆ. 2023ರಲ್ಲಿ ಸುಮಾರು 60 ಕಂಪನಿಗಳು ಐಪಿಒ ನಡೆಸಿವೆ. ಈ ಪೈಕಿ ಕೆಲವು ಕಂಪನಿಗಳು ಭರ್ಜರಿ ಲಾಭ ತಂದುಕೊಟ್ಟಿದ್ದರೆ ಒಂದಷ್ಟು ಕಂಪನಿಗಳು ಹೂಡಿಕೆದಾರರ ಮೇಲೆ ನಷ್ಟದ ಹೊರೆಯನ್ನು ಹೊರಿಸಿವೆ.

ಅರಿತು ಒಳ್ಳೆಯ ಕಂಪನಿಗಳ ಮೇಲೆ ಐಪಿಒ ಹೂಡಿಕೆ ಮಾಡಿದರೆ ಲಾಭದ ಸಾಧ್ಯತೆ ಹೆಚ್ಚು. ಲಾಭ ಸಿಗಬಹುದು ಎಂಬ ಅಂದಾಜಿನಲ್ಲಿ ಸಿಕ್ಕ ಸಿಕ್ಕ ಐಪಿಒಗಳಲ್ಲಿ ಹಣ ಹಾಕಿದರೆ ನಷ್ಟದ ಹೊರೆಯನ್ನೂ ಹೊರಬೇಕಾಗುತ್ತದೆ ಎನ್ನುವುದು ಮತ್ತೆ ಸಾಬೀತಾಗಿದೆ.

2024ರಲ್ಲೂ ಐಪಿಒಗಳು ಜರುಗಲಿವೆ. ಇದರಲ್ಲಿ ಹೂಡಿಕೆಗೂ ಮುನ್ನ ಯಾವೆಲ್ಲಾ ಅಂಶಗಳನ್ನು ಗಮನಿಸಬೇಕು ಬನ್ನಿ ತಿಳಿಯೋಣ.

ಹಿನ್ನೋಟ: 2023ರಲ್ಲಿ ನಡೆದ ಐಪಿಒಗಳ ಮೂಲಕ 60 ಕಂಪನಿಗಳು ₹52,521 ಕೋಟಿ ಸಂಗ್ರಹಿಸಿವೆ. 2023ರ ಮೊದಲ ಭಾಗದಲ್ಲಿ 9 ಐಪಿಒಗಳು ನಡೆದರೆ ದ್ವಿತೀಯಾರ್ಧದಲ್ಲಿ 51 ಕಂಪನಿಗಳ ಐಪಿಒ ಜರುಗಿದೆ.

ಕಳೆದ ವರ್ಷದಲ್ಲಿ ಐಪಿಒ ಮೇಲಿನ ಗೀಳು ಎಷ್ಟರಮಟ್ಟಿಗೆ ಇತ್ತೆಂದರೆ ಒಟ್ಟಾರೆ ಐಪಿಒಗಳ ಬೇಡಿಕೆಯು 36.81 ಪಟ್ಟು ಹೆಚ್ಚಾಗಿತ್ತು. 2023ರಲ್ಲಿ ನಿಫ್ಟಿ ಮತ್ತು ಸೆನ್ಸೆಕ್ಸ್ ಸೂಚ್ಯಂಕಗಳು ಕ್ರಮವಾಗಿ ಶೇ 18 ಮತ್ತು ಶೇ 20ರಷ್ಟು ಲಾಭಾಂಶ ಕೊಟ್ಟಿದ್ದರೆ ಐಪಿಒಗಳು ಕೊಟ್ಟಿರುವ ಸರಾಸರಿ ಗಳಿಕೆ ಶೇ 57.34 ರಷ್ಟು. ಆದರೆ, ಬಿಡ್ ಮಾಡಿದ ತಕ್ಷಣ ಎಲ್ಲಾ ಐಪಿಒಗಳು ಸಿಗುವುದಿಲ್ಲ ಮತ್ತು ಸಿಕ್ಕಿದ ಐಪಿಒಗಳೆಲ್ಲವೂ ಲಾಭ ತಂದುಕೊಟ್ಟಿಲ್ಲ ಎನ್ನುವುದು ಗಮನದಲ್ಲಿ ಇರಲಿ.

'ಐಪಿಒ' ಅರಿತರೆ ಜಾಕ್‌ಪಾಟ್, ಆತುರಪಟ್ಟರೆ ನಷ್ಟ: ಪ್ರತಿ ಐಪಿಒ ಹೂಡಿಕೆಯೂ ಜಾಕ್‌ಪಾಟ್ ಎನ್ನುವ ಅಂದಾಜಿನಲ್ಲಿ ಬಹುತೇಕರು ಹೂಡಿಕೆ ಮಾಡುತ್ತಾರೆ. ಆದರೆ, ಎಲ್ಲ ಕಂಪನಿಗಳು ಲಾಭ ತಂದುಕೊಡುವುದಿಲ್ಲ. ಲಾಭದ ಅಂದಾಜಿನಲ್ಲಿ ಧುತ್ತೆಂದು ಐಪಿಒಗಳನ್ನು ಖರೀದಿಸಿದವರು ಕೈಸುಟ್ಟುಕೊಂಡಿರುವ ನಿದರ್ಶನಗಳೂ ಇವೆ.

ಷೇರುಪೇಟೆಗೆ ಸೇರ್ಪಡೆಯಾಗುವ ದಿನವೇ ಅನೇಕ ಐಪಿಒಗಳು ಕುಸಿತ ಕಂಡಿವೆ. ಉದಾಹರಣೆಗೆ ಲಿಸ್ಟಿಂಗ್ ದಿನವೇ ಪೇಟಿಎಂ (ಒನ್ 97 ಕಮ್ಯೂನಿಕೇಷನ್ಸ್) ಶೇ 27.5ರಷ್ಟು ಕುಸಿದಿದೆ. ಅಬ್ಬಾಸ್ ಹೋಲ್ಡಿಂಗ್ಸ್ ಶೇ 19.98, ರೇನ್ ಬೋ ಚಿಲ್ಡ್ರನ್ ಮೆಡಿಕೇರ್ ಶೇ 16.96, ರೇಟ್ ಗೇನ್ ಟ್ರಾವೆಲ್ ಟೆಕ್ನಾಲಜೀಸ್ ಶೇ 19.88 ಮತ್ತು ಶ್ರೀರಾಮ್ ಪ್ರಾಪರ್ಟೀಸ್ ಶೇ 15.76ರಷ್ಟು ಇಳಿದಿವೆ.

ಷೇರುಪೇಟೆಗೆ ಸೇರ್ಪಡೆಯಾಗುವ ದಿನ (ಲಿಸ್ಟಿಂಗ್ ಡೇ) ನಷ್ಟದ ಹೊರೆ ಹೊರಿಸಿರುವ ಐಪಿಒಗಳು ಮಾತ್ರವಲ್ಲ ಭರ್ಜರಿ ಲಾಭ ತಂದುಕೊಟ್ಟಿರುವ ಕಂಪನಿಗಳೂ ಇವೆ. ಕಳೆದ ವರ್ಷ ಟಾಟಾ ಟೆಕ್ನಾಲಜೀಸ್ ಐಪಿಒ ಶೇ 162.85ರಷ್ಟು ಲಾಭ ಕೊಟ್ಟಿದೆ. ಐಡಿಯಾ ಫೋರ್ಜ್ ಟೆಕ್ನಾಲಜಿ ಶೇ 92.78, ಉತ್ಕರ್ಷ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಶೇ 91.76, ಐಆರ್‌ಇಡಿಎ ಶೇ 87.47, ನೆಟ್ ವೆಬ್ ಟೆಕ್ನಾಲಜೀಸ್ ಇಂಡಿಯಾ ಶೇ 82.10ರಷ್ಟು ಗಳಿಕೆ ಕೊಟ್ಟಿದೆ. ಹಾಗಾಗಿ, ಅರಿತು ಹೂಡಿಕೆ ಮಾಡುವುದು ಇಲ್ಲಿ ಬಹಳ ಮುಖ್ಯ.

ಗ್ರೇ ಮಾರ್ಕೆಟ್ ಪ್ರೀಮಿಯಂ ನಂಬಿ ಹೂಡಿಕೆ ಮಾಡಬೇಡಿ: ಷೇರು ಮಾರುಕಟ್ಟೆಯಲ್ಲಿ ಸೇರ್ಪಡೆಯಾಗುವ ಮುನ್ನ ಐಪಿಒವೊಂದಕ್ಕೆ ನಿಗದಿಯಾಗಿರುವ ದರಕ್ಕಿಂತ ಹೂಡಿಕೆದಾರರು ಎಷ್ಟು ಹೆಚ್ಚುವರಿ ಹಣ ನೀಡಲು ಸಿದ್ಧರಿದ್ದಾರೆ ಎನ್ನುವುದನ್ನು ಗ್ರೇ ಮಾರ್ಕೆಟ್ ಪ್ರೀಮಿಯಂ ಎನ್ನಲಾಗುತ್ತದೆ.

ಗ್ರೇ ಮಾರ್ಕೆಟ್ ಪ್ರೀಮಿಯಂ ಆಧರಿಸಿ ಕಂಪನಿಯೊಂದರ ಐಪಿಒ, ಷೇರು ಮಾರುಕಟ್ಟೆಯಲ್ಲಿ ಯಾವ ದರಕ್ಕೆ ಲಿಸ್ಟ್ ಆಗಬಹುದು ಎಂಬುದನ್ನು ಅಂದಾಜು ಮಾಡಲಾಗುತ್ತದೆ.

ಉದಾಹರಣೆಗೆ ಐಪಿಒವೊಂದರ ದರ ₹100 ಇದೆ ಎಂದು ಭಾವಿಸಿ. ಗ್ರೇ ಮಾರ್ಕೆಟ್ ಪ್ರೀಮಿಯಂ ₹20 ಇದೆ ಎಂದುಕೊಳ್ಳಿ. ಹೀಗಿರುವಾಗ ಆ ನಿಗದಿತ ಐಪಿಒ, ಷೇರು ಮಾರುಕಟ್ಟೆಯಲ್ಲಿ ₹120ಕ್ಕೆ ಲಿಸ್ಟ್ ಆಗಲಿದೆ ಎಂದು ಭಾವಿಸಲಾಗುತ್ತದೆ. ಆದರೆ, ಈ ಲೆಕ್ಕಾಚಾರ ನಿಖರ ಇರುವುದಿಲ್ಲ. ಗ್ರೇ ಮಾರ್ಕೆಟ್ ಪ್ರೀಮಿಯಂ ಎನ್ನುವುದು ಸದಾ ಬದಲಾಗು ತ್ತಿರುತ್ತದೆ. ಇದರಲ್ಲಿ ಕಾಣದ ಕೈಗಳ ಹಸ್ತಕ್ಷೇಪದ ಸಾಧ್ಯತೆಯೂ ಇರುವುದರಿಂದ ಗ್ರೇ ಮಾರ್ಕೆಟ್ ನಂಬಿ ಐಪಿಒ ಹೂಡಿಕೆ ಮಾಡುವುದು ಸರಿಯಲ್ಲ.

ಉದಾಹರಣೆ: ಎಲ್‌ಐಸಿ ಐಪಿಒ ವೇಳೆ ಕೆಲವೇ ದಿನಗಳಲ್ಲಿ ಗ್ರೇ ಮಾರ್ಕೆಟ್ ಪ್ರೀಮಿಯಂ ಶೇ 90ರಷ್ಟು ಕುಸಿದು ಹೋಯ್ತು.

ಲಿಸ್ಟಿಂಗ್ ಗಳಿಕೆಗೆ ಆಸೆಪಡಬೇಡಿ: ಐಪಿಒವೊಂದು ಷೇರು ಮಾರುಕಟ್ಟೆಗೆ ಸೇರ್ಪಡೆಗೊಳ್ಳುವ ದಿನ ಹೂಡಿಕೆ ಮೊತ್ತದ ಮೇಲೆ ಭರ್ಜರಿ ಲಾಭ ತಂದುಕೊಡುತ್ತದೆ ಎಂಬ ಅಂದಾಜಿನಲ್ಲಿ ಅನೇಕರು ಹೂಡಿಕೆ ಮಾಡುತ್ತಾರೆ. ಬೇಗ ಹಣ ಗಳಿಸುವ ಮಾರ್ಗ ಐಪಿಒ ಎಂದು ಭಾವಿಸುತ್ತಾರೆ. ಆದರೆ, ಇದು ಎಲ್ಲಾ ಸಮಯದಲ್ಲೂ ನಿಜವಾಗುವುದಿಲ್ಲ ಎಂಬ ಅರಿವಿರಲಿ.

ಅರಿತು ಹೂಡಿಕೆ ಮಾಡಿ: ಐಪಿಒಗಳಲ್ಲಿ ಹೂಡಿಕೆ ಮಾಡುವ ಮುನ್ನ ನಿರ್ದಿಷ್ಟ ಕಂಪನಿಯ ಬಗ್ಗೆ ಅರಿತು ಹೂಡಿಕೆ ಮಾಡುವುದು ಬಹಳ ಮುಖ್ಯ. ನಿರ್ದಿಷ್ಟ ಕಂಪನಿಯ ಬಿಸಿನೆಸ್ ಮಾಡೆಲ್, ಆ ಕ್ಷೇತ್ರದ ಬೆಳವಣಿಗೆ ಸಾಧ್ಯತೆ, ಹಣಕಾಸಿನ ಸ್ಥಿತಿಗತಿ, ಕಂಪನಿಯ ಆಡಳಿತ ಮಂಡಳಿಯ ಗಟ್ಟಿತನ, ಯಾವ ಕಾರಣಕ್ಕಾಗಿ ಐಪಿಒ ಮಾಡುತ್ತಿದ್ದಾರೆ ಎಂಬ ವಿಚಾರ ಹೀಗೆ ಎಲ್ಲಾ ಆಯಾಮಗಳಿಂದ ಅವಲೋಕನ ಮಾಡುವುದು ಮುಖ್ಯವಾಗುತ್ತದೆ.

ಕಂಪನಿಯ ಮೇಲೆ ಹಣ ಹಾಕಿರುವ ದೊಡ್ಡ ಹೂಡಿಕೆದಾರರಿಗೆ ಲಾಭ ಒದಗಿಸಲು ಐಪಿಒ ಮಾಡುತ್ತಿದ್ದಾರೆ ಎಂತಾದರೆ ಅಲ್ಲಿ ಎಚ್ಚರಿಕೆ ವಹಿಸುವ ಅಗತ್ಯವಿದೆ. ಕಂಪನಿಯ ಸಮಗ್ರ ವಿವರವಿರುವ ಮಾಹಿತಿಯು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ವೆಬ್‌ಸೈಟ್‌ನಲ್ಲಿ ಸಿಗುತ್ತದೆ.

ಮೌಲ್ಯಮಾಪನಕ್ಕಷ್ಟೇ ಆದ್ಯತೆ ಕೊಡಬೇಡಿ: 2020ಕ್ಕೂ ಮೊದಲು ಲಾಭದಾಯಕ ಕಂಪನಿಗಳು ಮಾತ್ರ ಐಪಿಒ ಮಾಡಬಹುದಿತ್ತು. ಆದರೆ, 2020ರ ನಂತರ ಹೊಸ ತಲೆಮಾರಿನ ಕಂಪನಿಗಳ ಐಪಿಒಗೆ ಸೆಬಿ ಅವಕಾಶ ಕಲ್ಪಿಸಿದೆ. ಭವಿಷ್ಯದ ಮೌಲ್ಯಮಾಪನದ ಅಂದಾಜಿನಲ್ಲಿ ನಷ್ಟದಲ್ಲಿರುವ ಕೆಲ ಕಂಪನಿಗಳೂ ಷೇರುಪೇಟೆ ಪ್ರವೇಶಿಸುತ್ತಿವೆ. ಆದ್ದರಿಂದ ಹೂಡಿಕೆದಾರರು ಸರಿಯಾಗಿ ಅರ್ಥೈಸಿಕೊಂಡು ಐಪಿಒ ಹೂಡಿಕೆ ಮಾಡಬೇಕು.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಅಲ್ಪ ಕುಸಿತ ಕಂಡ ಷೇರುಪೇಟೆ ಸೂಚ್ಯಂಕಗಳು



ಜನವರಿ 5ಕ್ಕೆ ಕೊನೆಗೊಂಡ ವಾರದಲ್ಲಿ ಅಲ್ಪ ಮೊತ್ತದ ಕುಸಿತ ದಾಖಲಿಸಿವೆ. 72,026 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.29ರಷ್ಟು ಕುಸಿದಿದೆ. 21,710 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 20.6ರಷ್ಟು ಇಳಿಕೆ ಕಂಡಿದೆ.

ವಿದೇಶಿ ಹೂಡಿಕೆದಾರರು ಖರೀದಿ ಭರಾಟೆಯಲ್ಲಿದ್ದರೂ ದೇಶೀಯ ಮಾರುಕಟ್ಟೆಯಲ್ಲಿ ಹೂಡಿಕೆದಾರರು ಗಳಿಕೆಯ ನಗದೀಕರಣಕ್ಕೆ ಮುಂದಾಗಿದ್ದರಿಂದ ಮಾರುಕಟ್ಟೆ ಕೊಂಚ ಇಳಿಕೆ ದಾಖಲಿಸಿತು.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ರಿಯಲ್ ಎಸ್ಟೇಟ್ ಶೇ 8, ಟೆಲಿಕಾಂ, ಹೆಲ್ತ್ ಕೇರ್, ಪವರ್ ಆ್ಯಂಡ್ ಆಯಿಲ್ ಗ್ಯಾಸ್ ಸೂಚ್ಯಂಕಗಳು ತಲಾ ಶೇ 3ರಷ್ಟು ಗಳಿಸಿಕೊಂಡಿವೆ. ಆಟೊ, ಮಾಹಿತಿ ತಂತ್ರಜ್ಞಾನ ಮತ್ತು ಲೋಹ ವಲಯಗಳು ಶೇ 1ರಿಂದ 2ರಷ್ಟು ಕುಸಿದಿವೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಇಕಾನಾಮಿಕ್ ಜೋನ್, ಇಂಡಸ್ ಟವರ್ಸ್, ಅದಾನಿ ಎನರ್ಜಿ ಸಲ್ಯೂಷನ್ಸ್, ಅದಾನಿ ಟೋಟಲ್ ಗ್ಯಾಸ್, ಗೋದ್ರೇಜ್ ಕನ್ಸ್ಯೂಮರ್ ಪ್ರಾಡೆಕ್ಟ್ಸ್, ಪೇಟಿಎಂ, ಜೊಮ್ಯಾಟೊ ಗಳಿಕೆ ಕಂಡಿವೆ.

ಐಷರ್ ಮೋಟರ್ಸ್, ಜೆಎಸ್‌ಡಬ್ಲ್ಯು ಸ್ಟೀಲ್, ಶ್ರೀ ಸಿಮೆಂಟ್ಸ್, ಅವೆನ್ಯೂ ಸೂಪರ್ ಮಾರ್ಕೆಟ್ಸ್ ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ಇಳಿಕೆ ಕಂಡಿವೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹3,290.23 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹7,296.50 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಮುನ್ನೋಟ: ಈ ವಾರ ಇನ್ಫೊಸಿಸ್, ಟಿಸಿಎಸ್, ಎಚ್‌ಸಿಎಲ್, ಎಚ್‌ಡಿಎಫ್‌ಸಿ ಲೈಫ್, ವಿಪ್ರೊ, ಎಚ್‌ಡಿಎಫ್‌ಸಿ ಬ್ಯಾಂಕ್, ಪಾಲಿ ಕ್ಯಾಬ್, ಪೇಟಿಎಂ, ಐಸಿಐಸಿಐ ಬ್ಯಾಂಕ್, ಜೆ.ಕೆ. ಸಿಮೆಂಟ್, ಐಡಿಎಫ್‌ಸಿ, ಡಾಬರ್, ಯೆಸ್ ಬ್ಯಾಂಕ್, ಸಿಪ್ಲಾ, ಬಿಇಎಲ್, ಬಾಷ್ ಲಿ., ಟಿವಿ ಟುಡೆ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳು ಹಾಗೂ ಜಾಗತಿಕ ವಿದ್ಯಮಾನಗಳು ಸೂಚ್ಯಂಕಗಳ ಗತಿಯನ್ನು ನಿರ್ಧರಿಸಲಿವೆ.

ಬಾಂಗ್ಲಾದಲ್ಲಿ ಚುನಾವಣೆ: ಶೇ 40ರಷ್ಟು ಮತದಾನ

ಎಣಿಕೆ ಶುರು, ಅವಾಮಿ ಲೀಗ್ ಮುನ್ನಡೆ

ಢಾಕಾ (ಪಿಟಿಐ): ಚುನಾವಣಾ ಬಹಿಷ್ಕಾರ ಹಾಗೂ ಹಿಂಸಾಚಾರದ ನಡುವೆ ಬಾಂಗ್ಲಾದೇಶದಲ್ಲಿ ಭಾನುವಾರ ಸಾರ್ವತ್ರಿಕ ಚುನಾವಣೆ ನಡೆಯಿತು. ಸಂಜೆಯಿಂದಲೇ ಮತ ಎಣಿಕೆ ಆರಂಭವಾಗಿದೆ. ಸೋಮವಾರ ನಸುಕಿನ ವೇಳೆಗೆ ಫಲಿತಾಂಶ ಘೋಷಣೆಯಾಗುವ ನಿರೀಕ್ಷೆ ಇದೆ. ಪ್ರಧಾನಿ ಶೇಖ್ ಹಸೀನಾ ಅವರು ದಾಖಲೆಯ ನಾಲ್ಕನೇ ಬಾರಿಗೆ ಅಧಿಕಾರಕ್ಕೇರುವ ಸಾಧ್ಯತೆ ಹೆಚ್ಚಿವೆ.

ಪ್ರಮುಖ ವಿರೋಧ ಪಕ್ಷ ಬಿಎನ್‌ಪಿ ಮತ್ತು ಅದರ ಮಿತ್ರಪಕ್ಷಗಳು ಕರೆ ನೀಡಿದ್ದ 48 ತಾಸುಗಳ ರಾಷ್ಟ್ರವ್ಯಾಪಿ ಮುಷ್ಕರದ ನಡುವೆ ಅಂದಾಜು ಶೇ 40ರಷ್ಟು ಮತದಾನ ಆಗಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ಕಾಝಿ ಹಬೀಬುಲ್ ಅವಾಲ್ ತಿಳಿಸಿದ್ದಾರೆ.

ಹಿಂಸಾಚಾರದ ಕೆಲವು ಘಟನೆಗಳನ್ನು ಹೊರತುಪಡಿಸಿ, 300 ಕ್ಷೇತ್ರಗಳ ಪೈಕಿ 299 ಕ್ಷೇತ್ರಗಳಲ್ಲಿ ಮತದಾನವು ಶಾಂತಿಯುತ ನಡೆದಿದೆ. ಅಭ್ಯರ್ಥಿ ಯೊಬ್ಬರು ಮೃತಪಟ್ಟ ಕಾರಣ ಒಂದು ಕ್ಷೇತ್ರದಲ್ಲಿ ಮತದಾನ ಸ್ಥಗಿತಗೊಳಿಸಲಾಗಿದೆ ಎಂದು ಚುನಾವಣಾ ಆಯೋಗ ಹೇಳಿದೆ.

ಚುನಾವಣೆಯ ಸಂಭ್ರಮ ಎಲ್ಲೂ ಕಾಣಲಿಲ್ಲ. ಮತಗಟ್ಟೆಗಳ ಮುಂದೆಯೂ ಆಡಳಿತ ಪಕ್ಷದ ಬೆಂಬಲಿಗರು ಮತ್ತು ಚುನಾವಣಾ ಏಜೆಂಟರನ್ನು ಹೊರತುಪಡಿಸಿ ಮತದಾರರು ಹೆಚ್ಚಾಗಿ ಕಾಣಿಸಲಿಲ್ಲ.

ಆಡಳಿತ ರೂಢ ಅವಾಮಿ ಲೀಗ್ ಪಕ್ಷವು ಮುನ್ನಡೆ ಯಲ್ಲಿರುವುದನ್ನು ಆರಂಭಿಕ ಫಲಿತಾಂಶಗಳು ತೋರಿಸುತ್ತಿವೆ. ಅವಾಮಿ ಲೀಗ್ 10 ಕ್ಷೇತ್ರಗಳಲ್ಲಿ ಜಯಗಳಿಸಿದೆ ಎಂದು 'ಢಾಕಾ ಟ್ರಿಬ್ಯೂನ್ ಪತ್ರಿಕೆ' ಅನಧಿಕೃತ ಮೂಲಗಳನ್ನು ಉಲ್ಲೇಖಿಸಿ ವರದಿ ಮಾಡಿದೆ.

ಎರಡು ಕಚ್ಚಾ ಬಾಂಬ್ ಸ್ಫೋಟ: ಢಾಕಾದ ಹಜಾರಿಬಾಗ್‌ನಲ್ಲಿರುವ ಮತದಾನ ಕೇಂದ್ರದ ಬಳಿ ಎರಡು ಕಚ್ಚಾ ಬಾಂಬ್‌ಗಳು ಸ್ಫೋಟಗೊಂಡಿದ್ದು, ಒಂದು ಮಗು ಸೇರಿ ನಾಲ್ವರು ಗಾಯಗೊಂಡಿದ್ದಾರೆ.

ಚಟ್ಟೋಗ್ರಾಮ್-10 ಸ್ಥಾನಕ್ಕೆ ಸ್ಪರ್ಧಿಸಿದ್ದ ಇಬ್ಬರು ಅಭ್ಯರ್ಥಿಗಳ ಬೆಂಬಲಿಗರ ನಡುವಿನ ಘರ್ಷಣೆಯಲ್ಲಿ ಗುಂಡಿನ ದಾಳಿ ನಡೆದಿದೆ. ಇಬ್ಬರು ವ್ಯಕ್ತಿಗಳಿಗೆ ಗುಂಡು ತಗುಲಿದ್ದು, ಇವರನ್ನು ಚಟ್ಟೋಗ್ರಾಮ್ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ.

ಜಮಾಲ್‌ಪುರದ ಶರೀಶಬರಿಯಲ್ಲಿರುವ ಮತಗಟ್ಟೆ ಕೇಂದ್ರದಲ್ಲಿ ಅವಾಮಿ ಲೀಗ್ ಅಭ್ಯರ್ಥಿ ಬೆಂಬಲಿಗರು ಮತ್ತು ಸ್ವತಂತ್ರ ಅಭ್ಯರ್ಥಿಯ ನಡುವೆ ಘರ್ಷಣೆ ನಡೆದಿದ್ದು, ಇಬ್ಬರು ಗಾಯಗೊಂಡಿದ್ದಾರೆ.

ರಿಲಯನ್ಸ್-ಬ್ರೂಕ್‌ಫೀಲ್ಡ್‌ನಿಂದ ಚೆನ್ನೈನಲ್ಲಿ ಡೇಟಾ ಸೆಂಟರ್



ಮುಕೇಶ್ ಅಂಬಾನಿ

ಚೆನ್ನೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್, ಕೆನಡಾದ ಬ್ರೂಕ್‌ಫೀಲ್ಡ್ ಸಹಭಾಗಿತ್ವದಲ್ಲಿ ಚೆನ್ನೈನಲ್ಲಿ ಡೇಟಾ ಸೆಂಟರ್ (ದತ್ತಾಂಶ ಕೇಂದ್ರ) ಅನ್ನು ಮುಂದಿನ ವಾರ ಆರಂಭಿಸಲಿದೆ ಎಂದು ಉದ್ಯಮಿ ಮುಕೇಶ್ ಅಂಬಾನಿ ಭಾನುವಾರ ಹೇಳಿದ್ದಾರೆ.

ತಮಿಳುನಾಡು ಜಾಗತಿಕ ಹೂಡಿಕೆದಾರರ ಸಭೆಯಲ್ಲಿ ಮಾತನಾಡಿದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಅಂಬಾನಿ, ನವೀಕರಿಸಬಹುದಾದ ಇಂಧನ, ಗ್ರೀನ್ ಹೈಡ್ರೋಜನ್ ಮತ್ತು ರಾಜ್ಯದಲ್ಲಿ ಡೇಟಾ ಕೇಂದ್ರವನ್ನು ಸ್ಥಾಪಿಸಲು ಹೂಡಿಕೆ ಮಾಡಲಿದೆ ಎಂದು ಹೇಳಿದರು.

ಜಂಟಿ ಉದ್ಯಮವು ಮುಂದಿನ ವಾರ ಚೆನ್ನೈನಲ್ಲಿ 20 ಮೆಗಾವಾಟ್ ಡೇಟಾ ಸೆಂಟರ್ ಅನ್ನು ಪ್ರಾರಂಭಿಸಲಿದೆ ಮತ್ತು ಮತ್ತೊಂದು 40 ಮೆಗಾವಾಟ್ ಡೇಟಾ ಸೆಂಟರ್ ನಿರ್ಮಿಸಲು ಮುಂಬೈನಲ್ಲಿ 2.15 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ.

ತಮಿಳುನಾಡು ಯಾವಾಗಲೂ ಶ್ರೀಮಂತವಾದ ಸಾಂಸ್ಕೃತಿಕ ಮತ್ತು ಬೌದ್ಧಿಕ ಪರಂಪರೆಯ ನಾಡು ಎಂದು ಹೇಳಿದ ಅಂಬಾನಿ, ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ನೇತೃತ್ವದಲ್ಲಿ ರಾಜ್ಯವು ದೇಶದ ಅತ್ಯಂತ ವ್ಯಾಪಾರಸ್ನೇಹಿ ರಾಜ್ಯಗಳಲ್ಲಿ ಒಂದಾಗಿದೆ. ತಮಿಳುನಾಡಿನ ಬೆಳವಣಿಗೆಯಲ್ಲಿ ರಿಲಯನ್ಸ್ ಪಾಲುದಾರಿಕೆ ಹೊಂದಿದೆ ಎಂದು ಅವರು ಹೇಳಿದರು.



ಅಹಮದಾಬಾದ್‌ನಲ್ಲಿ ಭಾನುವಾರ ನಡೆದ ಅಂತರರಾಷ್ಟ್ರೀಯ ಗಾಳಿಪಟ ಉತ್ಸವದಲ್ಲಿ ಗಮನಸೆಳೆದ ಗಾಳಿಪಟ – ಪಿಟಿಐ ಚಿತ್ರ

ಆದಾಯಕ್ಕಿಂತ 3 ಪಟ್ಟು ಹೆಚ್ಚು ವೆಚ್ಚ

ಒಂದನೇ ಪುಟದಿಂದ

2023-24, 2024-25, 2025-26ನೇ ಸಾಲಿಗೆ ಪ್ರಯೋಗಾಲಯಗಳ ಅಭಿವೃದ್ಧಿ, ನೀರು ಗುಣಮಟ್ಟ ನಿರ್ವಹಣೆ ವ್ಯವಸ್ಥೆ, ಸಾಫ್ಟ್‌ವೇರ್ ಉನ್ನತೀಕರಣ ಸೇರಿದಂತೆ ಅರಿವು, ಜಾಗೃತಿ ಕಾರ್ಯಕ್ರಮಗಳಿಗೆ ಹಣ ವೆಚ್ಚ ಮಾಡಲು ಮಂಡಳಿ ಸಭೆ ಸಮ್ಮತಿಸಿದೆ.

ಅಧ್ಯಕ್ಷರ ಅನುಮೋದನೆ ಇಲ್ಲದೆ ಸದಸ್ಯ ಕಾರ್ಯದರ್ಶಿಗಳು ಸಭೆಗಳ ಕಾರ್ಯಸೂಚಿಯನ್ನು ಸದಸ್ಯರಿಗೆ ಕಳುಹಿಸುವುದು ಸರಿಯಲ್ಲ ಎಂಬ ಅಧ್ಯಕ್ಷ ಶಾಂತ್ ತಮ್ಮಯ್ಯ ಅವರ ಅಭಿಪ್ರಾಯವನ್ನು ವಿರೋಧಿಸಿರುವ ಮಂಡಳಿ ಸದಸ್ಯರು, ಕಾರ್ಯಸೂಚಿಯನ್ನು ಸದಸ್ಯ ಕಾರ್ಯದರ್ಶಿ ಅವರು ಸದಸ್ಯರಿಗೆ ಕಳುಹಿಸಬಹುದು ಎಂದು ಹೇಳಿದ್ದಾರೆ.

ಅಲ್ಲದೆ, ಮಂಡಳಿ ಸಭೆಯ ವಿಡಿಯೊ–ಆಡಿಯೊ ರೆಕಾರ್ಡಿಂಗ್ ಬೇಡ ಎಂಬ ಅಧ್ಯಕ್ಷರ ಮಾತನ್ನೂ ಬದಿಗಿರಿಸಿ, ರೆಕಾರ್ಡಿಂಗ್ ಮಾಡಿಕೊಳ್ಳಲು ಸದಸ್ಯರು ಒಮ್ಮತದಿಂದ ತೀರ್ಮಾನಿಸಿದರು.


ಮಂಡಳಿಯ 220 ಹುದ್ದೆಗಳ ಭರ್ತಿಗೆ ಸಭೆ ಅನುಮೋದನೆ ನೀಡಿದ್ದು, ಚಾಲಕ ಮತ್ತು ಕಾವಲುಗಾರ ಹುದ್ದೆ ಹೊರತುಪಡಿಸಿ ಉಳಿದ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮೂಲಕ ಭರ್ತಿ ಮಾಡಲು ಸರ್ಕಾರವನ್ನು ಕೋರಲು ನಿರ್ಣಯ ಮಾಡಲಾಗಿದೆ.

ರಾಜ್ಯಮಟ್ಟದ ಜಾರಿ ಸಮಿತಿಯನ್ನು ಪುನರ್ ರಚಿಸಿದ್ದು, ಸರ್ಕಾರದಿಂದ ನಾಮನಿರ್ದೇಶಿತಗೊಂಡ ಸದಸ್ಯರಿಗೂ ಸ್ಥಾನ ಕಲ್ಪಿಸಲಾಗಿದೆ. ಕೆಟಿಪಿಪಿ ಕಾಯ್ದೆಯಂತೆ ಅಧ್ಯಕ್ಷ ಹಾಗೂ ಸದಸ್ಯ ಕಾರ್ಯದರ್ಶಿಯವರು ಅನುಮೋದಿಸುವ ಯೋಜನೆಗಳ ವೆಚ್ಚದ ಪ್ರಮಾಣವನ್ನು ಹೆಚ್ಚಿಸಲು ನಿರ್ಣಯಿಸಲಾಗಿದೆ. ₹50 ಲಕ್ಷವಿದ್ದ ಅಧ್ಯಕ್ಷರ ಅಧಿಕಾರವನ್ನು ₹5 ಕೋಟಿ ಹಾಗೂ ₹25 ಲಕ್ಷವಿದ್ದ ಸದಸ್ಯ ಕಾರ್ಯದರ್ಶಿ ಅಧಿಕಾರವನ್ನು ₹2 ಕೋಟಿಗೆ ವೃದ್ಧಿಸಲು ನಿಯಮಗಳಿಗೆ ತಿದ್ದುಪಡಿ ತರಲು ನಿರ್ಣಯಿಸಲಾಗಿದೆ.

ಕ್ರಿಯಾಯೋಜನೆ ವೆಚ್ಚ ವಿವರ

ಶಾಖೆ	ವೆಚ್ಚ (ಕೋಟಿಗಳಲ್ಲಿ)
ಹಣಕಾಸು	₹747.66
ಮುಖ್ಯ ಪರಿಸರ ಅಧಿಕಾರಿ–3	₹233.17
ತ್ಯಾಜ್ಯ ನಿರ್ವಹಣೆ ಕೋಶ–1	₹208.31
ಆಡಳಿತ	₹123.71
ಕಟ್ಟಡ	₹115
ಅಂತರ್ಜಲ ಗುಣಮಟ್ಟ ಅಧ್ಯಯನ	₹29.05
ಐಟಿ	₹24.50
ಗಣಿ ಮತ್ತು ಭೂವಿಜ್ಞಾನ ಶಾಖೆ	₹18.45
ಜಾಗೃತಿ ಮತ್ತು ತರಬೇತಿ	₹15
ಕೆರೆ ಅಭಿವೃದ್ಧಿ	₹13.35
17ನೇ ಪ್ರವರ್ಗ ಮತ್ತು ಇ–ವಿದ್ಯುನ್ಮಾನ ಕೋಶ	₹7.26
ತ್ಯಾಜ್ಯ ನಿರ್ವಹಣೆ ಕೋಶ–2	₹7.15
ಕಾನೂನು ಶಾಖೆ	₹3.83
ಕ್ರಿಯಾಯೋಜನೆ ಒಟ್ಟು ಮೊತ್ತ	₹1,546.44
ನಿರೀಕ್ಷಿತ ಆದಾಯ ಮೂಲಗಳಿಂದ	₹600
2023ರ ಏಪ್ರಿಲ್‌ವರೆಗೆ ಮಂಡಳಿಯಲ್ಲಿ ಉಳಿದಿರುವ ಮೊತ್ತ	₹1,050

ನಾರಾಯಣ ಮೂರ್ತಿಯವರನ್ನು ಪೆಟ್ಟಿಗೆ ಮೇಲೆ ಮಲಗಿಸಿದ್ದ ಅಮೆರಿಕ ಕ್ಲೈಂಟ್!



ಎನ್‌.ಆರ್‌.ನಾರಾಯಣಮೂರ್ತಿ

ನವದೆಹಲಿ (ಪಿಟಿಐ): ಇನ್ಫೊಸಿಸ್‌ನ ಆರಂಭಿಕ ದಿನಗಳಲ್ಲಿ ಎನ್.ಆರ್. ನಾರಾಯಣ ಮೂರ್ತಿ ಅವರು ಕ್ಲೈಂಟ್ ಒಬ್ಬರ ಕೆಲಸಕ್ಕಾಗಿ ಒಮ್ಮೆ ಅಮೆರಿಕಕ್ಕೆ ಭೇಟಿ ನೀಡಿದಾಗ, ಅಮೆರಿಕದ ಉದ್ಯಮಿಯೊಬ್ಬರು ಅವರ ಸ್ವಂತ ಮನೆಯಲ್ಲಿ ನಾಲ್ಕು ಬೆಡ್‌ರೂಮ್‌ಗಳಿದ್ದರೂ ಕರ್ಟನ್‌ಗಳಿಂದ ಮುಚ್ಚಿದ್ದ, ಕಿಟಕಿಗಳಿಲ್ಲದ ಸ್ಟೋರ್ ರೂಮ್‌ನಲ್ಲಿ ದೊಡ್ಡ ಪೆಟ್ಟಿಗೆ ಮೇಲೆ ಮೂರ್ತಿ ಅವರನ್ನು ಮಲಗಿಸಿದ್ದರಂತೆ.

ಭಾರತೀಯ ಮೂಲದ ಅಮೆರಿಕ ಲೇಖಕಿ ಚಿತ್ರಾ ಬ್ಯಾನರ್ಜಿ ದಿವಾಕರುಣಿ ಅವರು ಸುಧಾ ಮೂರ್ತಿ ಮತ್ತು ನಾರಾಯಣ ಮೂರ್ತಿ ದಂಪತಿಯ ಜೀವನದ ಆರಂಭಿಕ ವರ್ಷಗಳನ್ನು ಒಳಗೊಂಡ ಅವರ ಜೀವನ ಚರಿತ್ರೆಯಲ್ಲಿ ಈ ಅಂಶವನ್ನು ಉಲ್ಲೇಖಿಸಿದ್ದಾರೆ.

ಈ ದಂಪತಿಯ ಹಲವು ಅನುಭವದ ಕಥಾನಕಗಳು 'ಆ್ಯನ್ ಅನ್‌ಕಾಮನ್ ಲವ್: ದಿ ಅರ್ಲಿ ಲೈಫ್ ಆಫ್ ಸುಧಾ ಆ್ಯಂಡ್ ನಾರಾಯಣ ಮೂರ್ತಿ' ಕೃತಿಯಲ್ಲಿ ತುಂಬಿವೆ. ಮೂರ್ತಿ ದಂಪತಿಯ ಪ್ರಣಯದಿಂದ ಹಿಡಿದು ಅವರ ಮದುವೆ, ಪೋಷಕರಾದ ಹಂತ, ಇನ್ಫೊಸಿಸ್ ಸ್ಥಾಪನೆಯ ಆರಂಭಿಕ ವರ್ಷಗಳವರೆಗಿನ ಕಥನ ಈ ಕೃತಿಯಲ್ಲಿದೆ. ಇದನ್ನು ಜುಗರ್‌ನಾಟ್ ಬುಕ್ಸ್ ಪ್ರಕಟಿಸಿದೆ.

ನ್ಯೂಯಾರ್ಕ್ ಮೂಲದ ಡಾಟಾ ಬೇಸಿಕ್ಸ್ ಕಾರ್ಪೊರೇಷನ್ ಕಂಪನಿಯ ಮುಖ್ಯಸ್ಥರಾಗಿದ್ದ ಡಾನ್ ಲೈಲ್ಸ್ ಅವರೇ ವಿಚಿತ್ರ ಸ್ವಭಾವದ ಕ್ಲೈಂಟ್ ಆಗಿದ್ದರು. ಕೆಲವೊಮ್ಮೆ ಮೂರ್ತಿ ಅವರಿಗೆ ಡಾನ್ ಅವರಿಂದ ವಿಳಂಬ ಪಾವತಿ ಸೇರಿದಂತೆ ಹಲವು ಅಹಿತಕರ ಅನುಭವ ಆಗಿರುವುದನ್ನು ಈ ಪುಸ್ತಕದಲ್ಲಿ ಹೊರಗೆಡವಿದ್ದಾರೆ.

ತನ್ನ ಉದಯೋನ್ಮುಖ ಕಂಪನಿಯ ಸಲುವಾಗಿ ಮೂರ್ತಿ ಅವರು ಡಾನ್ ಅವರ ಈ ನಡವಳಿಕೆಯನ್ನು ಸಹಿಸಿಕೊಂಡಿದ್ದರು. ಆದರೆ, ಪೆಟ್ಟಿಗೆಯ ಮೇಲೆ ಮಲಗಿ ನಿದ್ರಿಸುವಂತೆ ಮಾಡಿದ್ದ ಈ ಘಟನೆಯು ನಿಜವಾಗಿಯೂ ಮೂರ್ತಿಯವರನ್ನು ಆಘಾತಗೊಳಿಸಿತ್ತು ಎಂದು ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ.

'ಸಣ್ಣ ಉಪಗ್ರಹ ಉಡ್ಡಯನಕ್ಕೆ 2ನೇ ಕೇಂದ್ರ'

ಪ್ರಜಾವಾಣಿ ವಾರ್ತೆ

ಚೆನ್ನೈ: 'ತಮಿಳುನಾಡಿನ ತೂತುಕುಡಿ ಜಿಲ್ಲೆಯಲ್ಲಿ ಎರಡನೇ ಉಡ್ಡಯನ ಕೇಂದ್ರವನ್ನು ನಿರ್ಮಿಸುವುದು ಶ್ರೀಹರಿಕೋಟಾದಲ್ಲಿನ ಕೇಂದ್ರವನ್ನು ಬದಲಿಸಲು ಅಲ್ಲ. ಬದಲಿಗೆ ಸಣ್ಣ ರಾಕೆಟ್‌ಗಳು ಮತ್ತು ಉಪಗ್ರಹಗಳ ಉಡ್ಡಯನ ಉತ್ತೇಜಿಸಲು ಪರ್ಯಾಯ ತಾಣವನ್ನು ಸ್ಥಾಪಿಸುವ ಉದ್ದೇಶ ಹೊಂದಿದೆ' ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮುಖ್ಯಸ್ಥ ಎಸ್. ಸೋಮನಾಥ್ ಭಾನುವಾರ ತಿಳಿಸಿದರು.

ತಮಿಳುನಾಡು ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್‌ನ ಮೂರನೇ ಆವೃತ್ತಿಯ ಅಧಿವೇಶನದಲ್ಲಿ ಮಾತನಾಡಿದ ಸೋಮನಾಥ್, ದೇಶಕ್ಕೆ ಭೌಗೋಳಿಕವಾಗಿ ಅನುಕೂಲಕರವಾದ ಪರ್ಯಾಯ ಉಡ್ಡಯನ ತಾಣದ ಅಗತ್ಯವನ್ನು ಕುಲಶೇಖರಪಟ್ಟಿನಂನಲ್ಲಿ ಸಿದ್ಧವಾಗುವ ಉಡ್ಡಯನ ಕೇಂದ್ರವು ಪೂರೈಸಲಿರುವುದಾಗಿ ಇಸ್ರೊ ಭಾವಿಸಿದೆ. ಸಣ್ಣ ಉಪಗ್ರಹ ಉಡಾವಣಾ ವಾಹನಗಳನ್ನು (ಎಸ್‌ಎಸ್‌ಎಲ್‌ವಿ) ಉಡಾವಣೆ ಮಾಡಲು ಮೀಸಲಾದ ಈ ಹೊಸ ತಾಣವು ಇಸ್ರೊಗೆ ಇಂಧನ ಉಳಿಸಲು ಸಹಾಯ ಮಾಡುತ್ತದೆ ಎಂದು ಹೇಳಿದ್ದಾರೆ.

ಕುಲಶೇಖರಪಟ್ಟಣಂನ ಉಡ್ಡಯನ ಕೇಂದ್ರದಿಂದ ಉಡಾವಣೆಯಾಗುವ ಉಪಗ್ರಹಗಳು ಶ್ರೀಹರಿಕೋಟಾದಿಂದ ಉಡಾವಣೆ ಮಾಡುವುದಕ್ಕಿಂತ ಭಿನ್ನವಾಗಿ, ನೇರವಾಗಿ ದಕ್ಷಿಣದ ಕಡೆಗೆ ಚಲಿಸಬಹುದು. ಶ್ರೀಲಂಕಾದ ಮೇಲೆ ಹಾರುವುದನ್ನು ತಪ್ಪಿಸ ಬಹುದಾಗಿದೆ ಎಂದು ಅವರು ಹೇಳಿದ್ದಾರೆ.

'ಹೊಸ ಉಡ್ಡಯನ ಕೇಂದ್ರವು ಇಸ್ರೊಗೆ ಹೆಚ್ಚಿನ ಪೇಲೋಡ್ ಸಾಮರ್ಥ್ಯ ನೀಡಲಿದೆ. ಉಡಾವಣೆಗಳಿಗೆ ಕಡಿಮೆ ಸಮಯ ಹಿಡಿಯಲಿದೆ' ಎಂದರು.


ಪರ್ಯಾಯ ಉಡ್ಡಯನ ಕೇಂದ್ರ ನಿರ್ಮಾಣದ ₹950 ಕೋಟಿಯ ಈ ಯೋಜನೆಗಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ತಮಿಳುನಾಡು ಸರ್ಕಾರ ಬಹುತೇಕ ಪೂರ್ಣಗೊಳಿಸಿದೆ. ತೂತುಕುಡಿ ಜಿಲ್ಲೆಯ ಕುಲಶೇಖರಪಟ್ಟಿಣಂ ಮತ್ತು ಸಾತಾಂಕುಳಂ ತಾಲ್ಲೂಕಿನ ಪಡುಕ್ಕಪತ್ತು, ಪಲ್ಲಕುರಿಚಿ ಮತ್ತು ಮಾಥವನ್‌ಕುರಿಚಿ ಗ್ರಾಮಗಳಲ್ಲಿ ಇಸ್ರೊಗೆ ಅಗತ್ಯವಿರುವ 2,300 ಎಕರೆ ಭೂಮಿಯಲ್ಲಿ 2,200 ಎಕರೆಗೂ ಹೆಚ್ಚು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ.

ಸಣ್ಣ ಉಪಗ್ರಹ ಮಾರುಕಟ್ಟೆಯು ಜಗತ್ತಿನಾದ್ಯಂತ ಕ್ಷಿಪ್ರಗತಿಯಲ್ಲಿ ಬೆಳೆಯುವ ನಿರೀಕ್ಷೆಯೊಂದಿಗೆ, ಬಾಹ್ಯಾಕಾಶ-ಸಂಬಂಧಿತ ಸಂಶೋಧನೆ ಮತ್ತು ಅಭಿವೃದ್ಧಿ (ಆರ್ ಆ್ಯಂಡ್‌ಡಿ) ಚಟುವಟಿಕೆಗಾಗಿ ಬಾಹ್ಯಾಕಾಶ ಕೈಗಾರಿಕಾ ಪಾರ್ಕ್ ಮತ್ತು ಪ್ರೊಪೆಲ್ಲಂಟ್ಸ್ ಪಾರ್ಕ್ ಅನ್ನು ಪ್ರಾರಂಭಿಸಲು ರಾಜ್ಯ ಸರ್ಕಾರವು ಚಿಂತನೆ ನಡೆಸುತ್ತಿದೆ.

ಇ.ಡಿ ಅಧಿಕಾರಿಗಳಿಗೆ ಥಳಿತ; ಆರೋಪಿ ಶಹಜಹಾನ್‌ಗೆ ಉಗ್ರರ ಸಂಪರ್ಕ ಕುರಿತು ದೂರು

ಬಂಧನಕ್ಕೆ ರಾಜ್ಯಪಾಲರಿಂದ ಸೂಚನೆ

ಕೋಲ್ಕತ್ತ (ಪಿಟಿಐ): ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ಮೇಲೆ ಪಶ್ಚಿಮ ಬಂಗಾಳದಲ್ಲಿ ನಡೆದ ದಾಳಿ ಪ್ರಕರಣದ ಪ್ರಮುಖ ಆರೋಪಿ, ಟಿಎಂಸಿ ನಾಯಕ ಶಹಜಹಾನ್ ಶೇಖ್ ಅವರನ್ನು ಕೂಡಲೇ ಬಂಧಿಸುವಂತೆ ರಾಜ್ಯದ ರಾಜ್ಯಪಾಲ ಸಿ.ವಿ. ಆನಂದ್ ಬೋಸ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.



ಸಿ.ವಿ. ಆನಂದ್ ಬೋಸ್

'ಶಹಜಹಾನ್ ಅವರು ರಾಜ್ಯದ ಗಡಿ ದಾಟಿ ಬೇರೆಡೆ ತೆರಳಿರಬಹುದು, ಅವರಿಗೆ ಉಗ್ರರ ಜೊತೆ ಸಂಪರ್ಕವಿರಬಹುದು. ಈ ಕುರಿತು ಕೂಡಲೇ ತನಿಖೆ ನಡೆಸಬೇಕು' ಎಂದು ರಾಜ್ಯಪಾಲರು ಹೇಳಿದ್ದಾರೆ ಎಂದು ರಾಜಭವನ ಹೊರಡಿಸಿರುವ ಪ್ರಕಟಣೆಯಲ್ಲಿ ಹೇಳಲಾಗಿದೆ.

ರಾಜ್ಯಪಾಲರ ಹೇಳಿಕೆಯನ್ನು ನಾವು ಬೆಂಬಲಿಸುತ್ತೇವೆ. ಶಹಜಹಾನ್ ಅವರನ್ನು ಬಂಧಿಸಿದರೆ, ಉಗ್ರವಾದದಲ್ಲಿ ಭಾಗಿ ಆಗಿರುವವರ ಬೃಹತ್ ಜಾಲ ಬಯಲಿಗೆ ಬರುತ್ತದೆ

ಸುಕಾಂತ ಮಜುಂದಾರ್, ಪಶ್ಚಿಮ ಬಂಗಾಳ ಬಿಜೆಪಿ ಅಧ್ಯಕ್ಷ

ಶಹಜಹಾನ್ ಸಂದೇಶ್‌ಖಾಲಿ ಪ್ರದೇಶದಲ್ಲೇ ಅಡಗಿದ್ದಾನೆ. ಇದು ಪೊಲೀಸರಿಗೂ ತಿಳಿದಿದೆ. ಆತನನ್ನು ಬಂಧಿಸಲು ಟಿಎಂಸಿ ನಾಯಕರ ಅಪ್ಪಣೆಗಾಗಿ ಕಾಯುತ್ತಿದ್ದಾರೆ

ಸುವೆಂದು ಅಧಿಕಾರಿ, ಬಿಜೆಪಿ ನಾಯಕ

ಪಡಿತರ ವಿತರಣೆ ಹಗರಣಕ್ಕೆ ಸಂಬಂಧಿಸಿ ದಾಳಿ ನಡೆಸಲು ಇ.ಡಿ ಅಧಿಕಾರಿಗಳು ಉತ್ತರ 24 ಪರ ಗಣ ಜಿಲ್ಲೆಯ ಸಂದೇಶ್‌ಖಾಲಿಗೆ ಶುಕ್ರವಾರ ಬಂದಿದ್ದರು. ಅವರ ಮೇಲೆ ಗುಂಪೊಂದು ದಾಳಿ ನಡೆಸಿತ್ತು. ಘಟನೆಯಲ್ಲಿ ಮೂವರು ಅಧಿಕಾರಿಗಳು ಗಾಯಗೊಂಡಿದ್ದರು. ಘಟನೆ ನಡೆದ ದಿನದಿಂದ ಶಹಜಹಾನ್ ನಾಪತ್ತೆ ಆಗಿದ್ದಾರೆ.

ಈ ಘಟನೆ ಕುರಿತು ರಾಜಭವನದ 'ಶಾಂತಿ ಕಕ್ಷಾ'ದಲ್ಲಿ ದೂರು ದಾಖಲಾಗಿದೆ. ಶಹಜಹಾನ್ ಶೇಖ್‌ಗೆ ಕೆಲವು ರಾಜಕೀಯ ನಾಯಕರ ಬೆಂಬಲ ಇದೆ. ಕೆಲವು ಪೊಲೀಸ್ ಅಧಿಕಾರಿಗಳೂ ಅವರ ಹಿಂದಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ.

ದೂರಿನ ಹಿನ್ನೆಲೆಯಲ್ಲಿ ರಾಜ್ಯಪಾಲರು, 'ಶಹಜಹಾನ್ ಅವರನ್ನು ಕೂಡಲೇ ಬಂಧಿಸಿ. ಅವರು ತಂಗಿರುವ ಸ್ಥಳದ ಕುರಿತು ಮಾಹಿತಿ ಕಲೆಹಾಕಿ. ಆದೇಶ ಪಾಲನೆ ಕುರಿತು ವರದಿ ನೀಡಿ' ಎಂದು ರಾಜ್ಯ ಪೊಲೀಸ್ ಮುಖ್ಯಸ್ಥರಿಗೆ ನಿರ್ದೇಶನ ನೀಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಟಿಎಂಸಿ ತಿರುಗೇಟು: ರಾಜ್ಯಪಾಲರ ಹೇಳಿಕೆಯನ್ನು ಆಡಳಿತಾರೂಢ ಟಿಎಂಸಿ ತೀವ್ರವಾಗಿ ವಿರೋಧಿಸಿದೆ. 'ಯಾವ ಆಧಾರದಲ್ಲಿ ರಾಜ್ಯಪಾಲರು ಇಂಥ ಹೇಳಿಕೆ ನೀಡಿದ್ದಾರೆ ಎಂದು ನಮಗೆ ತಿಳಿದಿಲ್ಲ. ಸಂವಿಧಾನದ ಪ್ರಕಾರ ರಾಜ್ಯಪಾಲರು ರಾಜ್ಯ ಸರ್ಕಾರದ ಜೊತೆಗೂಡಿ ಕೆಲಸ ಮಾಡಬೇಕು. ಯಾವುದೇ ಬಲವಾದ ಸಾಕ್ಷ್ಯ ಅಥವಾ ವರದಿಯಿಲ್ಲದೇ ಈ ರೀತಿ ಹೇಳಿಕೆ ನೀಡಲು ಹೇಗೆ ಸಾಧ್ಯ. ಅವರು ಇಲ್ಲಿ ಇರುವುದು ಸಮಾನಾಂತರ ಸರ್ಕಾರ ನಡೆಸಲು ಅಲ್ಲ' ಎಂದು ಟಿಎಂಸಿ ವಕ್ತಾರ ಕುನಾಲ್ ಘೋಷ್ ಅವರು ಹೇಳಿದ್ದಾರೆ.

ಬಿಜೆಪಿ ಆರೋಪ: ಇದೇವೇಳೆ, ಇ.ಡಿ ಅಧಿಕಾರಿಗಳ ಮೇಲಿನ ದಾಳಿ ಪ್ರಕರಣದಲ್ಲಿ ಗಡಿಯಾಚೆಗಿನ ಉಗ್ರರು ಮತ್ತು ರೋಹಿಂಗ್ಯಾ ಸಮುದಾಯದ ಕೈವಾಡವಿದೆ ಎಂದು ಪಶ್ಚಿಮ ಬಂಗಾಳ ಬಿಜೆಪಿ ಆರೋಪಿಸಿದೆ.

ಪರಸ್ಪರ ದೂರು

ದಾಳಿ ಪ್ರಕರಣದ ಕುರಿತು ರಾಜಕೀಯ ಕೆಸರೆರಚಾಟ ನಡೆಯುತ್ತಿರುವ ಬೆನ್ನಲ್ಲೇ, ಶಹಜಾನ್ ಅವರ ಕುಟುಂಬ ಮತ್ತು ಇ.ಡಿ ಪರಸ್ಪರರ ವಿರುದ್ಧ ಶನಿವಾರ ದೂರು ದಾಖಲಿಸಿವೆ. ಶಹಜಹಾನ್ ದೇಶದಿಂದ ಪರಾರಿಯಾಗುವ ಸಾಧ್ಯತೆ ಇರುವ ಕಾರಣ ಅವರಿಗೆ ಇ.ಡಿ ಲುಕ್‌ಔಟ್ ನೋಟಿಸ್ ನೀಡಿದೆ.

ಪೊಲೀಸರು ಕೂಡಾ ಸ್ವಯಂ ಪ್ರೇರಿತವಾಗಿ ಇ.ಡಿ ಅಧಿಕಾರಿಗಳ ವಿರುದ್ಧ ದೂರು ದಾಖಲಿಸಿಕೊಂಡಿದ್ದಾರೆ. ಅವರ ವಿರುದ್ಧ ಅತಿಕ್ರಮ ಪ್ರವೇಶ ಮತ್ತು ಕಳವು ಆರೋಪ ಹೊರಿಸಿದ್ದಾರೆ.

'ಇಂಡಿಯಾ' ಸೀಟು ಹಂಚಿಕೆ ಮಾತುಕತೆ ಆರಂಭಿಸಿದ ಕಾಂಗ್ರೆಸ್

ನವದೆಹಲಿ (ಪಿಟಿಐ): ಪಕ್ಷದೊಳಗೆ ವ್ಯಾಪಕ ಚರ್ಚೆ ನಡೆಸಿದ ನಡೆದ ಬಳಿಕ ಕಾಂಗ್ರೆಸ್, 'ಇಂಡಿಯಾ' ಮೈತ್ರಿಕೂಟದ ಕೆಲ ಪಕ್ಷಗಳ ಜೊತೆ ಕೆಲವು ರಾಜ್ಯಗಳಲ್ಲಿ ಲೋಕಸಭೆ ಚುನಾವಣೆಗೆ ಸೀಟು ಹಂಚಿಕೆ ಕುರಿತ ಮಾತುಕತೆಗೆ ಚಾಲನೆ ನೀಡಿದೆ.

ಅದರಂತೆ, ಪಂಜಾಬ್ ಮತ್ತು ದೆಹಲಿಯಲ್ಲಿ ಎಎಪಿ ಜೊತೆ ಸೋಮವಾರ ಮಾತುಕತೆ ಆರಂಭಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

'ಇಂಡಿಯಾ' ಪಕ್ಷಗಳ ಇತರ ನಾಯಕರ ಜೊತೆ ಮಾತುಕತೆ ನಡೆಸುವ ಜವಾಬ್ದಾರಿಯನ್ನು ಪಕ್ಷದ ಹಿರಿಯ ನಾಯಕರಿಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನೀಡಿದ್ದಾರೆ. ಈ ತಿಂಗಳ ಅಂತ್ಯದಲ್ಲಿ ಸ್ಥಾನ ಹಂಚಿಕೆ ಮಾತುಕತೆಗಳನ್ನು ಪೂರ್ಣಗೊಳಿಸಲು ಪಕ್ಷ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಸೀಟು ಹಂಚಿಕೆಗಾಗಿ ನೇಮಿಸಿರುವ 'ಐವರು ಸದಸ್ಯರ ಸಮಿತಿ'ಯು ರಾಜ್ಯ ಕಾಂಗ್ರೆಸ್ ಘಟಕಗಳ ಮುಖ್ಯಸ್ಥರ ಜೊತೆ ಈಗಾಗಲೇ ವಿಸ್ತೃತ ಚರ್ಚೆ ನಡೆಸಿದೆ. ಚರ್ಚೆಯ ಪ್ರಮುಖಾಂಶಗಳನ್ನು ಖರ್ಗೆ ಅವರಿಗೆ ವರದಿ ಮಾಡಿದೆ.

ತಮಿಳುನಾಡಿನಲ್ಲಿ ಡಿಎಂಕೆ, ಬಿಹಾರದಲ್ಲಿ ಆರ್‌ಜೆಡಿ ಮತ್ತು ಜೆಡಿಯು, ಜಾರ್ಖಂಡ್‌ನಲ್ಲಿ ಜೆಎಂಎಂ ಹಾಗೂ ಅಸ್ಸಾಂನಲ್ಲಿ ಕೆಲವು ಪಕ್ಷಗಳ ಜೊತೆ ಕಾಂಗ್ರೆಸ್ ವಿಧಾನಸಭೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿತ್ತು. ಆದರೆ ಕೇರಳ, ಪಶ್ಚಿಮ ಬಂಗಾಳ, ದೆಹಲಿ, ಪಂಜಾಬ್ ರಾಜ್ಯಗಳಲ್ಲಿ 'ಇಂಡಿಯಾ' ಮೈತ್ರಿಕೂಟದ ಸಹವರ್ತಿ ಪಕ್ಷಗಳ ಜೊತೆ ಸೀಟುಹಂಚಿಕೆ ಕಾಂಗ್ರೆಸ್‌ಗೆ ಅಷ್ಟು ಸುಲಭವಿಲ್ಲ ಎಂದೇ ಹೇಳಲಾಗಿದೆ.

ಈಚೆಗೆ ನಡೆದ ಮಧ್ಯಪ್ರದೇಶ ವಿಧಾನಸಭೆ ಚುನಾವಣೆ ವೇಳೆ ಅಖಿಲೇಶ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷದ (ಎಸ್‌ಪಿ) ಜೊತೆ ಸ್ಥಾನ ಹಂಚಿಕೆ ಮಾಡಿಕೊಳ್ಳಲು ಕಾಂಗ್ರೆಸ್ ನಿರಾಕರಿಸಿತ್ತು. ಇದು ಎಸ್‌ಪಿಯ ಅಸಮಾಧಾನಕ್ಕೆ ಕಾರಣವಾಗಿತ್ತು.


ಸದ್ಯ ಕಾಂಗ್ರೆಸ್ ಸೀಟುಹಂಚಿಕೆಗಾಗಿ ಮಾತುಕತೆ ಆರಂಭಿಸಿದೆ. ಬಿಜೆಪಿ ಎದುರು ವಿರೋಧ ಪಕ್ಷಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಮಧ್ಯಮ ಮಾರ್ಗ ತುಳಿಯುವ ನಿರೀಕ್ಷೆಯೂ ಇದೆ.

ಮೈತ್ರಿಕೂಟದ ವಿವಿಧ ಹುದ್ದೆಗಳನ್ನು ಮುಂದಿನ 10–15 ದಿನಗಳ ಒಳಗೆ ಹಂಚಿಕೆ ಮಾಡಲಾಗುವುದು. ಸ್ಥಾನ ಹಂಚಿಕೆ ಕುರಿತ ಸಮಸ್ಯೆಗಳನ್ನು ಶೀಘ್ರದಲ್ಲೇ ಬಗೆಹರಿಸಿಕೊಳ್ಳಲಾಗುವುದು ಎಂದು ಖರ್ಗೆ ಅವರು ಶನಿವಾರ ಹೇಳಿದ್ದರು.

ಸಂಕ್ಷಿಪ್ತ ಸುದ್ದಿ

ರಾಜನಾಥ್ ಸಿಂಗ್ ಬ್ರಿಟನ್ ಪ್ರವಾಸ ಇಂದಿನಿಂದ

ನವದೆಹಲಿ (ಪಿಟಿಐ): ಭಾರತ–ಬ್ರಿಟನ್ ದ್ವಿಪಕ್ಷೀಯ ಸಂಬಂಧ ವೃದ್ಧಿ ಉದ್ದೇಶದಿಂದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಸೋಮವಾರದಿಂದ ಎರಡು ದಿನ ಬ್ರಿಟನ್‌ಗೆ ಭೇಟಿ ನೀಡಲಿದ್ದಾರೆ. ಇದರೊಂದಿಗೆ, 22 ವರ್ಷಗಳ ನಂತರ ಭಾರತದ ರಕ್ಷಣಾ ಸಚಿವರೊಬ್ಬರು ಬ್ರಿಟನ್‌ಗೆ ಭೇಟಿ ನೀಡಿದಂತಾಗುತ್ತದೆ.



ರಾಜನಾಥ್ ಸಿಂಗ್

ಭೇಟಿ ಸಂದರ್ಭದಲ್ಲಿ, ಯುದ್ಧ ವಿಮಾನಗಳು ಮತ್ತು ಇತರೆ ಸೇನಾ ಸಲಕರಣೆಗಳನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವ ಒಪ್ಪಂದಕ್ಕೆ ಉಭಯ ದೇಶಗಳು ಸಹಿ ಹಾಕುವ ಸಾಧ್ಯತೆ ಇದೆ.

ಸಿಂಗ್ ಮತ್ತು ಬ್ರಿಟನ್ ರಕ್ಷಣಾ ಸಚಿವ ಗ್ರಾಂಟ್ ಶಾಪ್ಸ್ ಅವರು ರಕ್ಷಣೆ, ಭದ್ರತೆ ಮತ್ತು ಕೈಗಾರಿಕೆ ಕ್ಷೇತ್ರದಲ್ಲಿ ಸಹಕಾರದ ಕುರಿತು ಚರ್ಚಿಸಲಿದ್ದಾರೆ. ಇಂಡೊ–ಪೆಸಿಫಿಕ್, ಪಶ್ಚಿಮ ಏಷ್ಯಾ ಮತ್ತು ಉಕ್ರೇನ್ ಸ್ಥಿತಿಗತಿ ಕುರಿತೂ ಚರ್ಚೆ ನಡೆಸುವ ಸಾಧ್ಯತೆ ಇದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಬ್ರಿಟನ್ ಪ್ರಧಾನಿ ರಿಷಿ ಸುನಕ್ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವ ಡೇವಿಡ್ ಕ್ಯಾಮರೂನ್ ಅವರೊಂದಿಗೂ ಮಾತುಕತೆ ನಡೆಸುವ ನಿರೀಕ್ಷೆ ಇದೆ ಎಂದೂ ಹೇಳಿದೆ.



ನ್ಯಾಯ ರ್‍ಯಾಲಿ ಮುಂಬರುವ ಸಾರ್ವತ್ರಿಕ ಚುನಾವಣೆಗಳಿಗೆ ಪೂರ್ವಭಾವಿಯಾಗಿ ಕೋಲ್ಕತ್ತದಲ್ಲಿ ಭಾನುವಾರ ಸಿಪಿಎಂನ ಯುವ ಘಟಕ ಡಿವೈಎಫ್‌ಐ ಆಯೋಜಿಸಿದ್ದ 'ಇನ್ಸಾಫ್ ಯಾತ್ರೆ'ಯಲ್ಲಿ (ನ್ಯಾಯ ರ್‍ಯಾಲಿ) ಎಡಪಂಥೀಯ ಕಾರ್ಯಕರ್ತರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ್ದರು – ಎಎಫ್‌ಪಿ ಚಿತ್ರ

ಪ್ರಚಾರಕ್ಕೆ ಮೋದಿ ಚಾಲನೆ

ಪ್ರಜಾವಾಣಿ ವಾರ್ತೆ

ಮುಂಬೈ: ಪ್ರಧಾನಿ ನರೇಂದ್ರ ಮೋದಿ ಅವರು ಜನವರಿ 12ರಂದು ಮಹಾರಾಷ್ಟ್ರಕ್ಕೆ ಭೇಟಿ ನೀಡಲಿದ್ದು, ಕೆಲವು ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ. ಇನ್ನು ಕೆಲವು ಯೋಜನೆಗಳನ್ನು ಲೋಕಾರ್ಪಣೆಗೊಳಿಸಲಿದ್ದಾರೆ. ಪ್ರಧಾನಿ ಅವರ ಕಾರ್ಯಕ್ರಮಗಳು, ಬಿಜೆಪಿ–ಶಿವಸೇನಾ–ಎನ್‌ಸಿಪಿ ಮೈತ್ರಿಕೂಟದ ಲೋಕಸಭಾ ಚುನಾವಣಾ ಪ್ರಚಾರದ ಆರಂಭ ಎಂದೇ ಬಿಂಬಿತವಾಗಿವೆ.

ಬಿಜೆಪಿ–ಶಿವಸೇನೆ–ಎನ್‌ಸಿಪಿ ಮೈತ್ರಿಕೂಟವು ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಅಂತಿಮ ಮಾತುಕತೆ ನಡೆಸಲಿದೆ. ಜ. 12 ಸ್ವಾಮಿ ವಿವೇಕಾನಂದರ ಜನ್ಮದಿನವೂ ಹೌದು. ಮೋದಿ ಐದು ದಿನಗಳ ರಾಷ್ಟ್ರೀಯ ಯುವ ಉತ್ಸವವನ್ನು ನಾಸಿಕ್‌ನಲ್ಲಿ ಉದ್ಘಾಟಿಸಲಿದ್ದಾರೆ. ನವಿ ಮುಂಬೈನಲ್ಲಿ ನಡೆಯುವ ಒಂದು ಕಾರ್ಯಕ್ರಮದಲ್ಲಿ ಮೇಲ್ಸೇತುವೆಯೊಂದನ್ನು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲಿದ್ದಾರೆ.

ಪ್ರಧಾನಿಯವರ ಕಾರ್ಯಕ್ರಮವು ದೊಡ್ಡ ಮಟ್ಟದಲ್ಲಿ ಯಶಸ್ಸು ಕಾಣಬೇಕು ಎಂಬ ಉದ್ದೇಶದಿಂದ ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಹಲವು ಸಭೆಗಳನ್ನು ನಡೆಸಿದ್ದಾರೆ.

ಮಹಾ ಯುತಿ ಮೈತ್ರಿಕೂಟದಲ್ಲಿ ಬಿಜೆಪಿ, ಶಿವಸೇನಾದ ಏಕನಾಥ ಶಿಂದೆ ಬಣ, ಎನ್‌ಸಿಪಿಯ ಅಜಿತ್ ಪವಾರ್ ಬಣ ಮಾತ್ರವೇ ಅಲ್ಲದೆ, ರಾಮದಾಸ್ ಅಥಾವಳೆ ನೇತೃತ್ವದ ಆರ್‌ಪಿಐ, ಹಿತೇಂದ್ರ ಠಾಕೂರ್ ನೇತೃತ್ವದ ಬಹುಜನ ವಿಕಾಸ್ ಅಘಾಡಿ, ಬಚ್ಚು ಕಡು ನೇತೃತ್ವದ ಪ್ರಹಾರ್ ಜನಶಕ್ತಿ ಪಾರ್ಟಿ ಸೇರಿದಂತೆ ಕೆಲವು ಪಕ್ಷಗಳು ಇವೆ.

2014ರ ಲೋಕಸಭಾ ಚುನಾವಣೆಯಲ್ಲಿ 24 ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಬಿಜೆಪಿ 23ರಲ್ಲಿ ಗೆಲುವು ಸಾಧಿಸಿತ್ತು. ಶಿವಸೇನಾ 20 ಸ್ಥಾನಗಳಲ್ಲಿ ಸ್ಪರ್ಧಿಸಿ 18 ಸ್ಥಾನ ಗೆದ್ದುಕೊಂಡಿತ್ತು. ಕಾಂಗ್ರೆಸ್ ಪಕ್ಷವು 22 ಕಡೆ ಸ್ಪರ್ಧಿಸಿತ್ತಾದರೂ, ಗೆಲುವು ಕಂಡಿದ್ದು 2 ಸ್ಥಾನಗಳಲ್ಲಿ ಮಾತ್ರ. ಎನ್‌ಸಿಪಿ ಪಕ್ಷವು 21 ಸ್ಥಾನಗಳಲ್ಲಿ ಸ್ಪರ್ಧಿಸಿ ನಾಲ್ಕು ಸ್ಥಾನಗಳನ್ನು ಗೆದ್ದುಕೊಂಡಿತ್ತು.

2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 25 ಸ್ಥಾನಗಳಲ್ಲಿ ಸ್ಪರ್ಧಿಸಿ, 23 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಶಿವಸೇನಾ 23 ಕಡೆ ಸ್ಪರ್ಧಿಸಿತ್ತು, 18 ಸ್ಥಾನಗಳನ್ನು ಗೆದ್ದುಕೊಂಡಿತ್ತು. 25 ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್ ಒಂದು ಸ್ಥಾನ ಮಾತ್ರ ಗೆದ್ದುಕೊಂಡಿತ್ತು. ಎನ್‌ಸಿಪಿ 19 ಸ್ಥಾನಗಳಲ್ಲಿ ಸ್ಪರ್ಧಿಸಿ ನಾಲ್ಕು ಸ್ಥಾನಗಳನ್ನು ಗೆದ್ದುಕೊಂಡಿತ್ತು.

ಸಂಪಾದಕರಿಬ್ಬರ ಬಂಧನ; ಕಾಂಗ್ರೆಸ್ ಖಂಡನೆ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಸ್ಥಳೀಯ ಭಾಷಾ ಪತ್ರಿಕೆಗಳ ಇಬ್ಬರು ಸಂಪಾದಕರನ್ನು ಬಂಧಿಸಿರುವ ಕ್ರಮ ಕುರಿತು ಕಾಂಗ್ರೆಸ್ ಪಕ್ಷ ಭಾನುವಾರ ಅಸಮಾಧಾನ ವ್ಯಕ್ತಪಡಿಸಿದೆ. ಬಂಧಿತರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂದೂ ಅದು ಆಗ್ರಹಪಡಿಸಿದೆ.

ಈ ಕುರಿತು ಹೇಳಿಕೆ ನೀಡಿರುವ ಪಕ್ಷದ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು, 'ಪತ್ರಿಕಾ ಸ್ವಾತಂತ್ರ್ಯದ ಮೇಲೆ ಮತ್ತೊಮ್ಮೆ ದಾಳಿಯಾಗಿದೆ. ಮಣಿಪುರ ರಾಜ್ಯ ಸರ್ಕಾರವು ಇಬ್ಬರು ಸಂಪಾದಕರನ್ನು ಬಂಧಿಸಿದೆ' ಎಂದು ಟೀಕಿಸಿದ್ದಾರೆ.

ಡಿ.31ರಂದು ಪೊಲೀಸರು, ಕಾಂಗ್ಲಾಪಾಕ್ ಮೀರಾ ಪತ್ರಿಕೆಯ ಸಂಪಾದಕರಾದ ವಾಂಗ್‌ಖೇಮ್ಚಾ ಶ್ಯಾಮ್‌ಜಾಯ್ ಅವರನ್ನು ಬಂಧಿಸಿದ್ದರು. ಜ. 5ರಂದು ಮೈತೇಯಿ ಭಾಷೆ ಪತ್ರಿಕೆ 'ಹುಯೆಯೆನ್ ಲಾನ್‌ಪಾವೋ' ಸಂಪಾದಕ ಧನಬೀರ್ ಮೈಬಂ ಅವರನ್ನು ಬಂಧಿಸಿದ್ದರು. ಪ್ರಚೋದನಕಾರಿ ಸುದ್ದಿ ಪ್ರಸಾರ ಮಾಡಿದ್ದ ಆರೋಪದಲ್ಲಿ ಇಬ್ಬರನ್ನು ಬಂಧಿಸಲಾಗಿತ್ತು.

ಅತ್ಯಾಚಾರ: ಎಎಸ್‌ಪಿ ವಿರುದ್ಧ ಪ್ರಕರಣ

ಲಖನೌ (ಪಿಟಿಐ): ಉತ್ತರಪ್ರದೇಶದಲ್ಲಿ 23 ವರ್ಷದ ಮಹಿಳೆ ಮೇಲೆ ಅತ್ಯಾಚಾರ ಮತ್ತು ಬಲವಂತವಾಗಿ ಗರ್ಭಪಾತ ಮಾಡಿಸಿದ ಆರೋಪದ ಮೇರೆಗೆ ಭಯೋತ್ಪಾದನಾ ನಿಗ್ರಹ ದಳದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಆಗಿರುವ ರಾಹುಲ್ ಶ್ರೀವಾಸ್ತವ (ಎಎಸ್‌ಪಿ) ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಯುಪಿಎಸ್‌ಸಿ ಪರೀಕ್ಷೆ ಸಿದ್ಧತೆಯಲ್ಲಿ ತೊಡಗಿದ್ದ ಸಂತ್ರಸ್ತೆಯು ಐದು ವರ್ಷಗಳ ಹಿಂದೆ ರಾಹುಲ್ ಶ್ರೀವಾಸ್ತವ ಅವರೊಂದಿಗೆ ಸಂಪರ್ಕದಲ್ಲಿದ್ದರು.

'ಆರೋಪಿಯು ಹಲವು ವರ್ಷ ಲೈಂಗಿಕ ದೌರ್ಜನ್ಯವೆಸಗಿದ್ದಾನೆ. 2023ರಲ್ಲಿ ಬಲವಂತದಿಂದ ಗರ್ಭಪಾತ ಮಾಡಿಸಿದ್ದಾನೆ. ಅಲ್ಲದೆ, ನನ್ನ ಖಾಸಗಿ ವಿಡಿಯೊಗಳನ್ನು ಇಟ್ಟುಕೊಂಡು, ತನ್ನನ್ನು ಬೆದರಿಸುತ್ತಿದ್ದ' ಎಂದು ಸಂತ್ರಸ್ತೆ ದೂರಿದ್ದಾರೆ.

ಪೊಲೀಸ್ ಅಧಿಕಾರಿ ಎಸಗಿದ ದೌರ್ಜನ್ಯಗಳಿಗೆ ಸಂಬಂಧಿಸಿದ ಸಾಕ್ಷ್ಯಾಧಾರಗಳು ತನ್ನ ಬಳಿಯಿದ್ದು, ಎಎಸ್‌ಪಿ ಅವರನ್ನು ಅಮಾನತು ಮಾಡಬೇಕು ಎಂದು ಸಂತ್ರಸ್ತೆ ಒತ್ತಾಯಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರೋಪಿ ಸ್ಥಾನದಲ್ಲಿರುವ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮೂರು ತಿಂಗಳಿನಿಂದಲೂ ಒತ್ತಾಯಿಸುತ್ತಿರುವ ಸಂತ್ರಸ್ತೆಯು, ಈ ವಿಚಾರವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ. ಆ ಬಳಿಕ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ವ್ಯಕ್ತಿಗತ ಟೀಕೆಗೆ ತಿರುಗಿದ ವಾಕ್ಸಮರ

ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಬಣಗಳ ನಡುವಿನ ತಿಕ್ಕಾಟ

ಪ್ರಜಾವಾಣಿ ವಾರ್ತೆ

ಮುಂಬೈ: ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಬಣಗಳ ನಡುವಿನ ವಾಕ್ಸಮರ ಈಗ ಪವಾರ್ ಕುಟುಂಬದಲ್ಲಿ ವೈಯಕ್ತಿಕ ಮಟ್ಟಕ್ಕೆ ಇಳಿದಿದೆ. ಈ ಮೂಲಕ ಪಕ್ಷವು 2024ರ ಲೋಕಸಭೆ ಚುನಾವಣೆಗೆ ಸ್ಥಿತ್ಯಂತರಗೊಂಡಿದೆ.

ಉಭಯ ಬಣಗಳ ಮುಖಂಡರ ನಡುವಿನ ವಾಕ್ಸಮರದ ಹಿನ್ನೆಲೆಯಲ್ಲಿ ಪುಣೆ ಮತ್ತು ಬಾರಾಮತಿಯಲ್ಲಿ ರಾಜಕಾರಣದ ಸ್ವರೂಪವೇ ಬದಲಾಗಲಿದೆ. ಆದರೆ, ಈ ಬೆಳವಣಿಗೆಗಳ ನಂತರವು ಪಕ್ಷದ ಮುಖ್ಯಸ್ಥ, 83 ವರ್ಷದ ಶರದ್‌ಪವಾರ್ ಮೌನವಹಿಸಿದ್ದಾರೆ.

ವಿರೋಧಪಕ್ಷಗಳ ಮೈತ್ರಿಕೂಟ 'ಇಂಡಿಯಾ'ದ ಪ್ರಮುಖ ನಾಯಕರಾಗಿರುವ ಶರದ್ ಪವಾರ್, ಪ್ರಸ್ತುತ ಬಿಜೆಪಿಯ ಕಾರ್ಯತಂತ್ರದ ಫಲವಾಗಿ ಇಬ್ಭಾಗಗೊಂಡಿರುವ ಎನ್‌ಸಿಪಿ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಟ ನಡೆಸಿದ್ದಾರೆ.

ಪವಾರ್ ಅವರ ಸಂಬಂಧಿಯೂ ಆಗಿರುವ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು ಸದ್ಯ, ಕೇಂದ್ರದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿರುವ ಎನ್‌ಡಿಎ ಜೊತೆಗೆ ಗುರುತಿಸಿಕೊಂಡಿದ್ದಾರೆ.

ವರಿಷ್ಠ ಶರದ್ ಪವಾರ್ ಹಾಗೂ ಅವರ ಬಣದಲ್ಲಿರುವ ದಾಯಾದಿ, ಶಾಸಕ ರೋಹಿತ್ ಪವಾರ್ ಅವರ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಅಹ್ಮದ್‌ನಗರ ಜಿಲ್ಲೆಯ ಕರ್ಜಾತ್ ಜಾಮ್‌ಖೇಡ್ ಕ್ಷೇತ್ರದ ಶಾಸಕರಾದ ರೋಹಿತ್ ಪವಾರ್, ಪಕ್ಷ ಇಬ್ಭಾಗವಾದ ಹೊತ್ತಿನಲ್ಲಿ ಅಜಿತ್ ಪವಾರ್ ಅವರೊಂದಿಗೆ ಗುರುತಿಸಿಕೊಳ್ಳಲು ನಿರಾಕರಿಸಿದ್ದರು.

ಶರದ್‌ಪವಾರ್ ಅವರನ್ನು ಉಲ್ಲೇಖಿಸಿ, 'ನಿರ್ದಿಷ್ಟ ವಯಸ್ಸು ತಲುಪಿದ ಬಳಿಕ ಜನರು ವಿರಮಿಸಬೇಕು. ಇಂಥ ಸಂಪ್ರದಾಯ ಹಲವು ವರ್ಷಗಳಿಂದ ಚಾಲ್ತಿಯಲ್ಲಿದೆ. ಆದರೆ, ಕೆಲವರು ಇದನ್ನು ಕೇಳಿಸಿಕೊಳ್ಳಲು ಸಿದ್ಧರಿಲ್ಲ ಎಂದು ಅಜಿತ್ ಪವಾರ್ ಹೇಳಿದ್ದರು.

ಅಂತೆಯೇ ರೋಹಿತ್ ಪವಾರ್ ಅವರನ್ನು ಉಲ್ಲೇಖಿಸಿ, 'ಆತನಿನ್ನೂ ಹುಡುಗ. ಆತನ ಹೇಳಿಕೆಗೆ ಪ್ರತಿಕ್ರಿಯಿಸುವ ಅಗತ್ಯವಿಲ್ಲ. ಪ್ರತಿಕ್ರಿಯಿಸುವಷ್ಟು ಆತ ಬೆಳೆದಿಲ್ಲ' ಎಂದು ಹೇಳಿದ್ದರು.

ಈ ಮಾತುಗಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಶರದ್ ಪವಾರ್ ಅವರ ಪುತ್ರಿ, ಸಂಸದೆ ಸುಪ್ರಿಯಾ ಸುಳೆ, 'ಅಜಿತ್ ಪವಾರ್ ಅವರಿಗೆ 65 ವರ್ಷವಾಗಿದ್ದು, ಅವರೇ ಹಿರಿಯ ನಾಗರಿಕರಾಗಿದ್ದಾರೆ' ಎಂದು ಹೇಳಿದ್ದಾರೆ.

ದೆಹಲಿಯಲ್ಲಿ ಚಳಿ ಶಾಲೆ ರಜೆ ವಿಸ್ತರಣೆ

ನವದೆಹಲಿ (ಪಿಟಿಐ): ಚಳಿಯ ಪ್ರಮಾಣ ತೀವ್ರವಾಗಿರುವುದರಿಂದ ದೆಹಲಿಯ ಪ್ರಾಥಮಿಕ ಶಾಲೆಗಳಿಗೆ ನೀಡಿರುವ ಚಳಿಗಾಲದ ರಜೆಯನ್ನು ಜನವರಿ 12ರವರೆಗೆ ವಿಸ್ತರಿಸಲಾಗಿದೆ ಎಂದು ದೆಹಲಿ ಶಿಕ್ಷಣ ಸಚಿವೆ ಆತಿಶಿ ತಿಳಿಸಿದ್ದಾರೆ.

'ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳು ಮುಂದಿನ ಐದು ದಿನಗಳ ಕಾಲ ನರ್ಸರಿಯಿಂದ 5ನೇ ತರಗತಿವರೆಗಿನ ಮಕ್ಕಳನ್ನು ಶಾಲೆಗೆ ಕರೆಸುವಂತಿಲ್ಲ, ಸಾಧ್ಯವಾದರೆ ಆನ್‌ಲೈನ್ ಕ್ಲಾಸ್‌ಗಳನ್ನು ನಡೆಸಬೇಕು' ಎಂದು ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಪ್ರಾಂಶುಪಾಲರ ವಿರುದ್ಧ ಪ್ರಕರಣ ದಾಖಲು

ಕೊಚ್ಚಿ (ಪಿಟಿಐ): ಕೇರಳದ ಕೊಚ್ಚಿಯ ಮಾಹಿತಿ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ 'ಟೆಕ್ ಫೆಸ್ಟ್'ನಲ್ಲಿ ಕಾಲ್ತುಳಿತ ಸಂಭವಿಸಿ, ನಾಲ್ವರು ಮೃತಪಟ್ಟಿದ್ದ ಪ್ರಕರಣಕ್ಕೆ ಸಂಬಂಧಿಸಿ ಕಾಲೇಜಿನ ಪ್ರಾಂಶುಪಾಲ ಮತ್ತು ಇಬ್ಬರು ಉಪನ್ಯಾಸಕರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನಿರ್ಲಕ್ಷ್ಯ ವಹಿಸಿರುವ ಆರೋಪದಲ್ಲಿ ಪ್ರಾಂಶುಪಾಲ ದೀಪಕ್ ಕುಮಾರ್ ಸಾಹು ಮತ್ತು ಇಬ್ಬರು ಉಪನ್ಯಾಸಕರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಮೂಲಗಳು ತಿಳಿಸಿವೆ.

ನವೆಂಬರ್ 24ರಂದು ಟೆಕ್ ಫೆಸ್ಟ್ ಅಂಗವಾಗಿ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಡಿಜೆ ಕಾರ್ಯಕ್ರಮದ ವೇಳೆ ಸಂಭವಿಸಿದ್ದ ಕಾಲ್ತುಳಿತದಲ್ಲಿ 60 ವಿದ್ಯಾರ್ಥಿಗಳು ಗಾಯಗೊಂಡಿದ್ದರು.

ಪ್ರಕರಣದ ಕುರಿತು ಸ್ಥಳೀಯ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಪಿಎಂ ಮುಖಂಡ ಥಾಮಸ್ ಐಸಾಕ್‌ಗೆ ಇ.ಡಿ ಸಮನ್ಸ್

ಕೊಚ್ಚಿ (ಪಿಟಿಐ): ಕೇರಳ ಮೂಲ ಸೌಕರ್ಯ ಹೂಡಿಕೆ ನಿಧಿ ಮಂಡಳಿಯ (ಕಿಫ್‌ಬಿ) ಯೋಜನೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಕ್ಕೆ ಸಂಬಂಧಿಸಿ, ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಅಡಿ ದಾಖಲಾಗಿರುವ ಪ್ರಕರಣದ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಸಿಪಿಎಂ ಮುಖಂಡ ಥಾಮಸ್ ಐಸಾಕ್‌ಗೆ ಜಾರಿ ನಿರ್ದೇಶನಾಲಯ (ಇ.ಡಿ) ಸಮನ್ಸ್ ನೀಡಿದೆ.

ಕೊಚ್ಚಿಯಲ್ಲಿರುವ ಇ.ಡಿ. ಕಚೇರಿಗೆ ಇದೇ 12ರಂದು ಹಾಜರಾಗಿ ಹೇಳಿಕೆ ನೀಡುವಂತೆ ಥಾಮಸ್‌ಗೆ ತಿಳಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಥಾಮಸ್ ಅವರು ಎಲ್‌ಡಿಎಫ್ ಸರ್ಕಾರದಲ್ಲಿ ಹಣಕಾಸು ಸಚಿವರಾಗಿದ್ದಾಗ ಈ ಅವ್ಯವಹಾರ ನಡೆದಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಹಿಂದೆ ನೀಡಿದ್ದ ಸಮನ್ಸ್ ಅನ್ನು ಹಿಂಪಡೆದಿರುವುದಾಗಿ ಇ.ಡಿ ಡಿಸೆಂಬರ್‌ನಲ್ಲಿ ಹೈಕೋರ್ಟ್‌ಗೆ ಹೇಳಿತ್ತು. ಸಮನ್ಸ್ ಮೂಲಕ ಕೇವಲ ವೈಯಕ್ತಿಕ ಮಾಹಿತಿಗಳನ್ನು ಮಾತ್ರ ಇ.ಡಿ ಕೇಳಿದೆ ಎಂದು ಆರೋಪಿಸಿ ಥಾಮಸ್ ಮತ್ತು ಕಿಫ್‌ಬಿ ಅಧಿಕಾರಿಗಳು ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಗೆ ಪ್ರತಿಕ್ರಿಯಿಸಿ ಇ.ಡಿ ಈ ಹೇಳಿಕೆ ನೀಡಿತ್ತು.

ತನಿಖೆಯನ್ನು ಇ.ಡಿ ಮುಂದುವರಿಸಬಹುದು ಎಂದು ಅರ್ಜಿಯ ವಿಚಾರಣೆ ವೇಳೆ ಹೈಕೋರ್ಟ್ ಹೇಳಿತ್ತು.

ತನಿಖೆ ಮುಂದುವರಿಸುವಂತೆ ಹೈಕೋರ್ಟ್ ಅನುಮತಿ ನೀಡಿರುವ ಕಾರಣ ಥಾಮಸ್ ಅವರಿಗೆ ಮತ್ತೆ ಸಮನ್ಸ್ ನೀಲಾಗಿದೆ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ. ಫೆಮಾ ಕಾಯ್ದೆಯನ್ನು ಉಲ್ಲಂಘಿಸಿ ಮಸಾಲಾ ಬಾಂಡ್‌ಗಳ ಮೂಲಕ ಕಿಫ್‌ಬಿ ₹2,000 ಕೋಟಿ ಸಂಗ್ರಹಿಸಿತ್ತು ಎಂದು ಆರೋಪಿಸಲಾಗಿತ್ತು.

ದ್ವೇಷ ಭಾಷಣ ಪ್ರಕರಣ ದಾಖಲು

ಮುಂಬೈ (ಪಿಟಿಐ): 'ಸೊಲ್ಲಾಪುರದಲ್ಲಿ ನಡೆದ ಹಿಂದೂ ಜನ್ ಆಕ್ರೋಶ್ ರ್‍ಯಾಲಿಯಲ್ಲಿ ದ್ವೇಷ ಭಾಷಣ ಮಾಡಿದ ಆರೋಪದ ಮೇಲೆ ಬಿಜೆಪಿ ಶಾಸಕ ನಿತೇಶ್ ರಾಣೆ, ತೆಲಂಗಾಣ ಶಾಸಕ ಟಿ. ರಾಜಾ ಸಿಂಗ್ ಮತ್ತು ಇತರರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ' ಎಂದು ಪೊಲೀಸರು ಭಾನುವಾರ ಹೇಳಿದ್ದಾರೆ.

'ಶನಿವಾರ ರ್‍ಯಾಲಿ ನಡೆದ ಸಂದರ್ಭದಲ್ಲಿ ರಾಣೆ ಅವರು 'ಜಿಹಾದಿಗಳು' ಮತ್ತು ಮಸೀದಿಗಳ ಧ್ವಂಸದ ಬಗ್ಗೆ ಹಾಗೂ ಹೈದರಾಬಾದ್‌ನ ಗೋಶಾಮಹಲ್ ಶಾಸಕ ಟಿ. ರಾಜಾ ಸಿಂಗ್ ಅವರು 'ಲವ್ ಜಿಹಾದ್' ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ನಕ್ಸಲರಿಗೆ ಬೆಂಬಲ: ಶಿಕ್ಷಕರ ಬಂಧನ

ಮಾನ್‌ಪುರ (ಪಿಟಿಐ): ಛತ್ತೀಸಗಢದ ಮೊಹ್ಲಾ–ಮಾನ್‌ಪುರ್–ಅಂಬಾಗಢ ಚೌಕಿ ಜಿಲ್ಲೆಯಲ್ಲಿ ನಕ್ಸಲರಿಗೆ ಬೆಂಬಲ ನೀಡುತ್ತಿದ್ದ ಆರೋಪದ ಮೇಲೆ ಶಿಕ್ಷಕರೊಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದರು.

ರಾಮ್‌ಲಾಲ್ ನುರೇಟಿ ಬಂಧಿತ ಶಿಕ್ಷಕ. ಇವರು ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನಕ್ಸಲರ ಪರ ಬ್ಯಾನರ್ ಮತ್ತು ಫಲಕಗಳನ್ನು ಹಿಡಿದಿದ್ದರು ಎಂಬ ಆರೋಪ ಇದೆ ಎಂದು ತಿಳಿಸಿದ್ದಾರೆ.

ಇದರಿಂದ ಸಿಟ್ಟಿಗೆದ್ದ ಗ್ರಾಮಸ್ಥರು ಮತ್ತು ವಿದ್ಯಾರ್ಥಿಗಳು, ರಾಮ್‌ಲಾಲ್ ಅವರನ್ನು ಬಿಡುಗಡೆ ಮಾಡುವಂತೆ ಆಗ್ರಹಿಸಿ ಸೀತಾಗಾಂವ್ ಪೊಲೀಸ್ ಠಾಣೆ ಎದುರು ಧರಣಿ ಆರಂಭಿಸಿದ್ದಾರೆ.

ರಾಮ್‌ಲಾಲ್, ಕಾರೆಕಟ್ಟಾ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಅತಿಥಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಳೆದ ವರ್ಷ ಸೆ.15ರಂದು ಪೊಲೀಸರು, ಮದನ್‌ವಾಡಾ ಪ್ರದೇಶದಲ್ಲಿದ್ದ ನಕ್ಸಲ್ ಪರ ಫಲಕಗಳು ಮತ್ತು ಬ್ಯಾನರ್‌ಗಳನ್ನು ವಶಕ್ಕೆ ಪಡೆದಿದ್ದರು. ರಾಮ್‌ಲಾಲ್ ಅವರೂ ಫಲಕಗಳನ್ನು ಹಿಡಿದಿದ್ದರು ಎಂದು ತನಿಖೆ ವೇಳೆ ತಿಳಿದುಬಂದಿತ್ತು. ಆಗಿನಿಂದಲೂ ಪೊಲೀಸರು ಅವರ ಮೇಲೆ ಕಣ್ಣಿಟ್ಟಿದ್ದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಬಿಡುಗಡೆ ಮಾಡುವವರೆಗೂ ಧರಣಿ ಮುಂದುವರಿಸುತ್ತೇವೆ. ತನಿಖೆ ನಡೆಸದೇ ಶಾಲೆಯಿಂದಲೇ ಅವರನ್ನು ಬಂಧಿಸಲಾಗಿದೆ. ಅವರು ಶಾಲಾ ಶಿಕ್ಷಕರು, ನಕ್ಸಲ್ ಅಲ್ಲ' ಎಂದು ಪ್ರತಿಭಟನಕಾರರು ಹೇಳಿದ್ದಾರೆ. ಈ ಬೆನ್ನಲ್ಲೇ ಪೊಲೀಸ್ ಠಾಣೆ ಬಳಿ ಹೆಚ್ಚಿನ ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡಲಾಗಿದೆ.

ಮಾಲ್ದೀವ್ಸ್ ಸಚಿವರ ಅಮಾನತು

ಒಂದನೇ ಪುಟದಿಂದ

ಮಾಲ್ದೀವ್ಸ್‌ನಲ್ಲಿ ಭಾರತದ ಹೈಕಮಿಷನರ್ ಕಚೇರಿಯು ಈ ಮಾತುಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿತ್ತು. ತನ್ನ ಆಕ್ಷೇಪವನ್ನು ಮಾಲ್ದೀವ್ಸ್ ಸರ್ಕಾರಕ್ಕೆ ತಿಳಿಸಿತ್ತು. ಉಪ ಸಚಿವೆ ಮಾಲ್ಶಾ ಶರೀಫ್ ಅವರು ಮೋದಿ ಕುರಿತು ಹಿಂದೊಮ್ಮೆ ಆಡಿದ್ದ ಅವಮಾನಕಾರಿ ಮಾತುಗಳ ಬಗ್ಗೆಯೂ ಭಾರತವು ಆಕ್ಷೇಪ ವ್ಯಕ್ತಪಡಿಸಿತ್ತು. ಮಾಲ್ದೀವ್ಸ್ ಸರ್ಕಾರವು ಉಪ ಸಚಿವರಾದ ಶರೀಫ್, ಮಾಜಿದ್ ಮತ್ತು ಶಿವ್ನಾ ಅವರನ್ನು ಭಾನುವಾರ ಸಂಜೆಯ ವೇಳೆಗೆ ಅಮಾನತು ಮಾಡಿತು.

ಮಾಲ್ದೀವ್ಸ್‌ನ ಈ ಹಿಂದಿನ ಅಧ್ಯಕ್ಷರಲ್ಲಿ ಬಹುತೇಕರು ತಮ್ಮ ಮೊದಲ ವಿದೇಶ ಭೇಟಿಗೆ ಭಾರತವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಆದರೆ ಮುಯಿಜು ಅವರು ಚೀನಾವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇದು ಮಾಲ್ದೀವ್ಸ್ ದೇಶವು ಚೀನಾ ಕಡೆ ಒಲಿಯುತ್ತಿದೆ ಎಂಬ ಅನುಮಾನಕ್ಕೆ ಕಾರಣವಾಗಿದೆ.

ಸೂರ್ಯ ದೇಗುಲದಲ್ಲಿ ಅಯೋಧ್ಯೆ ಕಳಶ ಪ್ರತಿಷ್ಠಾಪನೆ

ಶ್ರೀನಗರ (ಪಿಟಿಐ): ಅಯೋಧ್ಯೆಯಿಂದ ತಂದ 'ಕಳಶ'ವನ್ನು ಜಮ್ಮು ಮತ್ತು ಕಾಶ್ಮೀರದ ಅನಂತ್‌ನಾಗ್ ಜಿಲ್ಲೆಯ ಪ್ರಸಿದ್ಧ ಸೂರ್ಯ ದೇವಾಲಯದ ಆವರಣದಲ್ಲಿರುವ ರಾಮ ಮಂದಿರದಲ್ಲಿ ಭಾನುವಾರ ಪ್ರತಿಷ್ಠಾಪಿಸಲಾಯಿತು.

ಉತ್ತರ ಪ್ರದೇಶ ಮತ್ತು ತಮಿಳುನಾಡು ಭಕ್ತರ ಸಮ್ಮುಖದಲ್ಲಿ ಸ್ಥಳೀಯರು ಕಳಶವನ್ನು ಪ್ರತಿಷ್ಠಾಪಿಸಿದರು. ಈ ವೇಳೆ ವಿಶೇಷ ಪೂಜೆ ಸಲ್ಲಿಸಲಾಯಿತು.

'ಕಾಶ್ಮೀರದಲ್ಲಿ ಶಾಂತಿ ಮತ್ತು ಸೌಹಾರ್ದ ನೆಲೆಸಲಿ ಎಂದು ಪ್ರಾರ್ಥಿಸುವ ಈ ದೇಶ ಜನರಿಗೆ ನಾವು ಕೃತಜ್ಞತೆ ಸಲ್ಲಿಸುತ್ತೇವೆ' ಎಂದು ಸ್ಥಳೀಯ ಭಕ್ತರೊಬ್ಬರು ತಿಳಿಸಿದರು.

ರಾಮ ಲಲ್ಲಾ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಕೇರಳ ಕಾಂಗ್ರೆಸ್ ಯಾವುದೇ ಕಾರ್ಯಕ್ರಮ ಆಯೋಜಿಸಿಲ್ಲ. ಅದು ಹಿಂದೂಗಳ ಭಾವನೆಗಳನ್ನು ಕಡೆಗಣಿಸುತ್ತಿದೆ

ಕೆ.ಸುರೇಂದ್ರನ್, ಬಿಜೆಪಿಯ ಕೇರಳ ರಾಜ್ಯ ಘಟಕದ ಅಧ್ಯಕ್ಷ

ಪ್ರಾಣ ಪ್ರತಿಷ್ಠಾಪನೆ ಕುರಿತಂತೆ ಮುಸ್ಲಿಮರು ನಕಾರಾತ್ಮಕ ಹೇಳಿಕೆ ನೀಡಿಲ್ಲ. ವಿರೋಧ ಪಕ್ಷಗಳು, ಹೇಳಿಕೆ ನೀಡುವ ಮೂಲಕ ರಾಮನ ವಿರೋಧಿ ಆಗುತ್ತಿವೆ

ಸೈಯದ್ ಶಹನವಾಜ್ ಹುಸೇನ್, ಬಿಜೆಪಿ ನಾಯಕ

ದೆಹಲಿ ದೇಗುಲಗಳಲ್ಲಿ ನೇರಪ್ರಸಾರ

ನವದೆಹಲಿ (ಪಿಟಿಐ): ಅಯೋಧ್ಯೆಯ ರಾಮ ಮಂದಿರದಲ್ಲಿ ಜ.22ರಂದು ನಡೆಯುವ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವನ್ನು ರಾಷ್ಟ್ರ ರಾಜಧಾನಿಯಾದ್ಯಂತ ಸುಮಾರು 14 ಸಾವಿರ ದೇಗುಲಗಳಲ್ಲಿ ನೇರ ಪ್ರಸಾರ ಮಾಡಲಾಗುತ್ತದೆ ಎಂದು ಬಿಜೆಪಿಯ ದೆಹಲಿ ಮುಜರಾಯಿ ಘಟಕದ ಅಧ್ಯಕ್ಷ ಕರ್ನೈಲ್ ಸಿಂಗ್ ಭಾನುವಾರ ತಿಳಿಸಿದರು.

ಪ್ರತಿ ದೇಗುಲದಲ್ಲಿ ಸುಮಾರು 200 ಮಂದಿ ಕಾರ್ಯಕ್ರಮವನ್ನು ವೀಕ್ಷಣೆ ಮಾಡುತ್ತಾರೆ. ಒಟ್ಟಾರೆ 30 ಲಕ್ಷ ಜನರು ದೇಗುಲಗಳಲ್ಲಿ ನೇರ ಪ್ರಸಾರ ಕಾರ್ಯಕ್ರಮ ವೀಕ್ಷಣೆ ಮಾಡುವ ನಿರೀಕ್ಷೆ ಇದೆ ಎಂದು ಹೇಳಿದರು.

ಈಶಾನ್ಯದಲ್ಲಿ ಉಗ್ರರೊಂದಿಗೆ ಮಾತುಕತೆ; ಮುಫ್ತಿ ವಾಗ್ದಾಳಿ

'ಜೆಕೆಯಲ್ಲಿ ಜನರಿಗೆ ಉಗ್ರರ ಪಟ್ಟ'

ಶ್ರೀನಗರ (ಪಿಟಿಐ): 'ಕೇಂದ್ರ ಸರ್ಕಾರವು ಈಶಾನ್ಯ ಭಾರತದಲ್ಲಿ ಭಯೋತ್ಪಾದಕರೊಂದಿಗೆ ಶಾಂತಿ ಮಾತುಕತೆ ನಡೆಸುತ್ತಿದೆ. ಆದರೆ, ಜಮ್ಮು ಮತ್ತು ಕಾಶ್ಮೀರದಲ್ಲಿ (ಜೆಕೆ) ಸಾಮಾನ್ಯ ನಾಗರಿಕರನ್ನು ಭಯೋತ್ಪಾದಕರಂತೆ ನಡೆಸಿಕೊಳ್ಳುತ್ತಿದೆ' ಎಂದು ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಭಾನುವಾರ ವಾಗ್ದಾಳಿ ನಡೆಸಿದ್ದಾರೆ.

ಪಿಡಿಪಿ ಸಂಸ್ಥಾಪಕ ಮತ್ತು ತಮ್ಮ ತಂದೆ ಮುಫ್ತಿ ಮೊಹಮ್ಮದ್ ಸಯೀದ್ ಅವರ ಎಂಟನೇ ಪುಣ್ಯತಿಥಿಯಂದು ಅನಂತನಾಗ್ ಜಿಲ್ಲೆಯ ಬಿಜ್‌ಬೆಹರಾದಲ್ಲಿ ಅವರ ಸಮಾಧಿ ಬಳಿ ಪಕ್ಷದ ಕಾರ್ಯಕರ್ತರು ಮತ್ತು ಬೆಂಬಲಿಗರ ಸಭೆ ಉದ್ದೇಶಿಸಿ ಮೆಹಬೂಬಾ ಮಾತನಾಡಿದರು.

'ನಾವು ಶರಣಾಗುವುದಿಲ್ಲ, ಬಿಳಿ ಬಾವುಟ ಹಾರಿಸಲ್ಲ. ನೀವು ನಮ್ಮೊಂದಿಗೆ ಘನತೆಯಿಂದ ಮಾತನಾಡಿದರೆ, ನಾವು ಗೌರವದಿಂದ ಪ್ರತಿಕ್ರಿಯಿಸುತ್ತೇವೆ. ಆದರೆ, ನೀವು ಬಫ್ಲಿಯಾಜ್‌ನಲ್ಲಿ ಮಾಡಿದಂತೆ, ನೀವು ಲಾಠಿಗಳ ಮೂಲಕ ಮಾತನಾಡಿದರೆ ಅದು ಫಲಿಸುವುದಿಲ್ಲ' ಎಂದು ಹೇಳಿದರು.



ಪಿಡಿಪಿ ಸಂಸ್ಥಾಪಕ ಮುಫ್ತಿ ಮೊಹಮ್ಮದ್ ಸಯೀದ್ ಅವರ 8ನೇ ಪುಣ್ಯತಿಥಿಯಂದು ಜಮ್ಮುವಿನ ಅನಂತನಾಗ್ ಜಿಲ್ಲೆಯ ಬಿಜ್‌ಬೆಹರಾದಲ್ಲಿರುವ ಅವರ ಸಮಾಧಿ ಬಳಿ ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಪಕ್ಷದ ಕಾರ್ಯಕರ್ತರು ಮತ್ತು ಬೆಂಬಲಿಗರನ್ನು ಉದ್ದೇಶಿಸಿ ಭಾನುವಾರ ಮಾತನಾಡಿದರು – ಪಿಟಿಐ ಚಿತ್ರ

'ಈಶಾನ್ಯ ರಾಜ್ಯಗಳಲ್ಲಿ ನೀವು ಉಗ್ರಗಾಮಿಗಳೊಂದಿಗೆ ಮಾತುಕತೆ ನಡೆಸುತ್ತಿದ್ದೀರಿ. ಆದರೆ, ಜಮ್ಮು ಮತ್ತು ಕಾಶ್ಮೀರದಲ್ಲಿ ಜನಸಾಮಾನ್ಯರಿಗೆ ಉಗ್ರಗಾಮಿಗಳ ಹಣೆಪಟ್ಟಿ ಹಚ್ಚಿದ್ದೀರಿ. ವಿವೇಚನಾರಹಿತವಾಗಿ ಜನರನ್ನು ಬಂಧಿಸಿ ಜೈಲುಗಳನ್ನು ಭರ್ತಿ ಮಾಡಿದ್ದೀರಿ. ಜಾರಿ ನಿರ್ದೇಶನಾಲಯ, ಎನ್‌ಐಎ, ಎಸ್‌ಐಎ ಮೂಲಕ ದಾಳಿಗಳನ್ನು ನಡೆಸಿ, ತಮ್ಮದೇ ಜನರನ್ನು ಹೀಗೆ ಯಾರಾದರೂ ನಡೆಸಿಕೊಳ್ಳುತ್ತಾರೆಯೇ' ಎಂದು ಮೆಹಬೂಬಾ ಪ್ರಶ್ನಿಸಿದರು.

'ಪ್ರತ್ಯೇಕತಾವಾದಿಗಳೊಂದಿಗೆ ವ್ಯವಹರಿಸುವಲ್ಲಿ ತಮ್ಮ ತಂದೆ ಸಯೀದ್ ಅವರು ಅನುಸರಿಸಿದ ವಿಧಾನದಿಂದ ಕೇಂದ್ರ ಸರ್ಕಾರ ಕಲಿಯಬೇಕಿದೆ. ತಮ್ಮ ತಂದೆ ಜನರ ಹೃದಯ ಬೆಸೆಯಲು ಪ್ರಯತ್ನಿಸಿದರು. ಅವರು ಪ್ರತ್ಯೇಕತಾವಾದಿಗಳಿಗೂ ಈ ದೇಶದೊಳಗೆ ಘನತೆಯಿಂದ ಬದುಕಲು ದಾರಿ ಮಾಡಿಕೊಟ್ಟಿದ್ದರು. ಜಮ್ಮು ಮತ್ತು ಕಾಶ್ಮೀರದ ಜನರು ಘನತೆ, ಶಾಂತಿ ಬಯಸುತ್ತಾರೆ ಎಂದು ಹೇಳಿದ್ದರು. ಅವರು ಎಂದಿಗೂ ಸಲ್ಲದ್ದನ್ನು ಹೇಳಲಿಲ್ಲ' ಎಂದು ಮೆಹಬೂಬಾ ಸ್ಮರಿಸಿದರು.

ಪಿಡಿಪಿ ಸಹ-ಸಂಸ್ಥಾಪಕ ಮುಜಾಫರ್ ಹುಸೇನ್ ಬೇಗ್ ಮತ್ತು ಅವರ ಪತ್ನಿ, ಬಾರಾಮುಲ್ಲಾ ಜಿಲ್ಲಾ ಅಭಿವೃದ್ಧಿ ಮಂಡಳಿಯ ಅಧ್ಯಕ್ಷೆ ಸಫೀನಾ ಬೇಗ್ ಅವರು ನಾಲ್ಕು ವರ್ಷಗಳ ನಂತರ ಪಿಡಿಪಿಗೆ ಮರಳಿದ್ದು, ಈ ಸಭೆಯಲ್ಲಿ ಪಕ್ಷ ಸೇರಿದರು.



ಭಾರತೀಯ ವಾಯುಪಡೆಯ ಸಿ–130 ಜೆ ಸೂಪರ್ ಹರ್ಕ್ಯುಲಸ್ ಸಾಗಣೆ ವಿಮಾನವು ಕಾರ್ಗಿಲ್‌ನ ಏರ್‌ಸ್ಟ್ರಿಪ್‌ನಲ್ಲಿ ರಾತ್ರಿ ಇಳಿದ ದೃಶ್ಯ –ಪಿಟಿಐ ಚಿತ್ರ

ಕಾರ್ಗಿಲ್‌ನಲ್ಲಿ ರಾತ್ರಿ ಇಳಿದ ವಾಯುಪಡೆಯ ವಿಮಾನ

ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆಯ ಸಿ–130 ಜೆ ಸೂಪರ್ ಹರ್ಕ್ಯುಲಸ್ ಸಾಗಣೆ ವಿಮಾನವು ಇದೇ ಮೊದಲ ಬಾರಿ ರಾತ್ರಿ ವೇಳೆ ಕಾರ್ಗಿಲ್‌ನ ಗಡಿ ನಿಯಂತ್ರಣ ರೇಖೆ ಬಳಿಯ ಎತ್ತರದ ಪ್ರದೇಶದಲ್ಲಿರುವ ಏರ್‌ಸ್ಟ್ರಿಪ್‌ನಲ್ಲಿ ಇಳಿದಿದೆ.

ವಾಯುಪಡೆಯ ಕಾರ್ಯಾಚರಣೆಯ ಸಾಮರ್ಥ್ಯವನ್ನು ಪ್ರದರ್ಶಿಸುವ ನಿಟ್ಟಿನಲ್ಲಿ ಗರುಡ ಕಮಾಂಡೊಗಳಿದ್ದ ಈ ವಿಮಾನವನ್ನು ಕಾರ್ಗಿಲ್‌ನಲ್ಲಿ ಇಳಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಅತ್ಯಾಧುನಿಕ ಲ್ಯಾಂಡಿಂಗ್ ವ್ಯವಸ್ಥೆಯಲ್ಲಿ (ಎಎಲ್‌ಜಿ) ವಾಯುಪಡೆಯ ಈ ವಿಮಾನವು ಈ ಹಿಂದೆ ಇಳಿದಿದ್ದರೂ ರಾತ್ರಿ ವೇಳೆ ಇಳಿದಿರುವುದು ಇದೇ ಮೊದಲು ಎಂದಿವೆ. ಕಾರ್ಗಿಲ್‌ನ ಏರ್‌ಸ್ಟ್ರಿಪ್ ಸುಮಾರು 10,500 ಅಡಿ ಎತ್ತರದಲ್ಲಿದೆ.

'ಗರುಡ ಕಮಾಂಡೊಗಳ ತರಬೇತಿಯ ಅಂಗವಾಗಿ ಸಿ–130 ಜೆ ವಿಮಾನವು ಈಚೆಗೆ ರಾತ್ರಿ ವೇಳೆ ಭೂಪ್ರದೇಶಕ್ಕೆ ಗೋಚರವಾಗದ ರೀತಿಯಲ್ಲಿ ಕಾರ್ಗಿಲ್‌ನಲ್ಲಿ ಇಳಿದಿದೆ' ಎಂದು ವಾಯುಪಡೆಯು ಎಕ್ಸ್ ವೇದಿಕೆಯಲ್ಲಿ ಹೇಳಿದೆ.

ರಣಜಿ ಟ್ರೋಫಿ ಕ್ರಿಕೆಟ್: ಕರ್ನಾಟಕಕ್ಕೆ ಬೃಹತ್ ಮುನ್ನಡೆ, ಪ್ರಭಸಿಮ್ರನ್ ಶತಕ

ಪಂಜಾಬ್ ತಂಡ ದಿಟ್ಟ ಉತ್ತರ

● ಸತೀಶ ಬಿ.



ಕರ್ನಾಟಕ ಎದುರಿನ ಪಂದ್ಯದಲ್ಲಿ ಶತಕ ಬಾರಿಸಿದ ಪಂಜಾಬ್ ತಂಡದ ಪ್ರಭಸಿಮ್ರನ್ ಸಿಂಗ್ ಅವರ ಬ್ಯಾಟಿಂಗ್ ವೈಖರಿ ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ಹುಬ್ಬಳ್ಳಿ: ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಬೃಹತ್ ಮುನ್ನಡೆ ಗಳಿಸಿದ ಕರ್ನಾಟಕ ತಂಡಕ್ಕೆ ಪಂಜಾಬ್ ದಿಟ್ಟ ಉತ್ತರ ನೀಡಿತು.

ಪಂದ್ಯದ ಮೂರನೇ ದಿನವಾದ ಭಾನುವಾರ ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ 140 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 514 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ತಂಡವು 362 ರನ್‌ಗಳ ಬೃಹತ್ ಮುನ್ನಡೆ ಗಳಿಸಿತು. ಆದರೆ, ಎರಡನೇ ಇನಿಂಗ್ಸ್ ಆರಂಭಿಸಿದ ಪಂಜಾಬ್ ತಂಡ ದಿಟ್ಟ ತಿರುಗೇಟು ನೀಡಿತು. ದಿನದಾಟದ ಮುಕ್ತಾಯಕ್ಕೆ ತಂಡವು ಪಂಜಾಬ್ 68 ಓವರ್‌ಗಳಲ್ಲಿ ಮೂರು ವಿಕೆಟ್ ಕಳೆದುಕೊಂಡು 238 ರನ್ ಗಳಿಸಿತು. ಕರ್ನಾಟಕದ ಬಾಕಿ ಚುಕ್ತಾ ಮಾಡಲು ಪಂಜಾಬ್‌ಗೆ 124 ರನ್‌ಗಳ ಅಗತ್ಯವಿದೆ. ಅದಕ್ಕೂ ಮುನ್ನವೇ ಉಳಿದಿರುವ ಏಳು ವಿಕೆಟ್‌ಗಳನ್ನು ಕಬಳಿಸಿದರೆ ಕರ್ನಾಟಕಕ್ಕೆ ಇನಿಂಗ್ಸ್ ಜಯದ ಅವಕಾಶವಿದೆ.

ಪಂಜಾಬ್ ತಂಡದ ಆರಂಭಿಕ ಜೋಡಿ ಅಭಿಷೇಕ್ ಶರ್ಮಾ (91; 123ಎ, 4X9, 6X3) ಮತ್ತು ಪ್ರಭಸಿಮ್ರನ್ ಸಿಂಗ್ ಕರ್ನಾಟಕದ ಬೌಲರ್‌ಗಳನ್ನು ದಂಡಿಸಿದರು. ಇವರಿಬ್ಬರು ಮೊದಲ ವಿಕೆಟ್ ಜತೆಯಾಟದಲ್ಲಿ 192 (267ಎ) ರನ್ ಸೇರಿಸಿದರು.

ಎಡಗೈ ಬ್ಯಾಟರ್ ಅಭಿಷೇಕ್ ಶರ್ಮಾ 68 ರನ್ ಗಳಿಸಿದ್ದಾಗ ಜೀವದಾನ ಪಡೆದರು. ವಿ.ಕೌಶಿಕ್ ಎಸೆದ 31ನೇ ಓವರ್‌ನ ಮೊದಲ ಎಸೆತದಲ್ಲಿ ಅಭಿಷೇಕ್ ದೊಡ್ಡ ಹೊಡೆತಕ್ಕೆ ಯತ್ನಿಸಿದರು. ಕ್ಷೇತ್ರ ರಕ್ಷಣೆ ವೇಳೆ ಗಾಯಗೊಂಡಿದ್ದ ವೈಶಾಕ್ ವಿಜಯಕುಮಾರ್ ಬದಲಿಗೆ ಕಣಕ್ಕಿಳಿದ ಕಿಶನ್ ಬೆದರೆ ಕ್ಯಾಚ್ ಕೈಚೆಲ್ಲಿದರು. ಬಳಿಕ ಬಿರುಸಿನ ಆಟವಾಡಿದ, ಅವರು ಎಡಗೈ ಸ್ಪಿನ್ನರ್ ರೋಹಿತ್ ಕುಮಾರ್‌ಗೆ ಒಂದೇ ಓವರ್‌ನಲ್ಲಿ ಮೂರು ಸಿಕ್ಸರ್ ಬಾರಿಸಿದರು. ಅಭಿಷೇಕ್ 91 (123ಎ, 4x9, 6x3) ರನ್ ಗಳಿಸಿದ್ದಾಗ ಸಾಂದರ್ಭಿಕ ಬೌಲರ್ ಆರ್.ಸಮರ್ಥ್ ಹಾಕಿದ 45ನೇ ಓವರ್‌ನಲ್ಲಿ ಕ್ಲೀನ್ ಬೌಲ್ಡ್ ಆದರು. ಬಲಗೈ ಬ್ಯಾಟರ್ ಪ್ರಭಸಿಮ್ರನ್ ಸಿಂಗ್ ಶತಕ (100; 146ಎ, 4X17) ಬಾರಿಸಿದರು. ಅವರು 46ನೇ ಓವರ್‌ನ 2ನೇ ಎಸೆತದಲ್ಲಿ ವೇಗಿ ವಿದ್ವತ್ ಕಾವೇರಪ್ಪಗೆ ವಿಕೆಟ್ ಒಪ್ಪಿಸಿದರು.

ನಮನ್ ಧೀರ್ (20; 44ಎ, 4x1, 6X1) ಶುಭಾಂಗ್ ಹೆಗ್ಡೆ ಬೌಲಿಂಗ್‌ನಲ್ಲಿ ರೋಹಿತ್ ಕುಮಾರ್‌ಗೆ ಕ್ಯಾಚಿತ್ತರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಪಂಜಾಬ್ 152 (46.5 ಓವರ್) ಕರ್ನಾಟಕ: 8ಕ್ಕೆ 514 ಡಿಕ್ಲೇರ್ (140 ಓವರ್) (ಶನಿವಾರ: 123 ಓವರ್‌ಗಳಲ್ಲಿ 6ಕ್ಕೆ 461)
ಶರತ್ ಎಲ್‌ಬಿಡಬ್ಲ್ಯು ಸಿದ್ಧಾರ್ಥ್ 76 (193ಎ, 4x6)
ವೈಶಾಖ ಎಲ್‌ಬಿಡಬ್ಲ್ಯು ಅರ್ಷದೀಪ್ 19 (29ಎ, 4x4)
ರೋಹಿತ್ ಔಟಾಗದೆ 22 (60ಎ, 4X3)
ವಿದ್ವತ್ ಔಟಾಗದೆ 4 (5ಎ, 4X1)
ಇತರೆ: 9 (ಲೆಗ್‌ಬೈ 7, ವೈಡ್ 1, ನೋಬಾಲ್ 1)
ವಿಕೆಟ್ ಪತನ: 7–466 (ವೈಶಾಖ; 123.3), 8–508 (ಶರತ್; 138.1)
ಬೌಲಿಂಗ್: ಬಲ್ತೇಜ್ ಸಿಂಗ್ 25–4–63–0, ಅರ್ಷದೀಪ್ ಸಿಂಗ್ 28–1–92–3 , ಸಿದ್ಧಾರ್ಥ್ ಕೌಲ್ 22–0–94–1, ಪ್ರೇರಿತ್ ದತ್ತಾ 22–1–84–2, ನಮನ್ ಧೀರ್ 12–1–46–2, ಮಯಂಕ್ ಮಾರ್ಕಂಡೆ 22–1–82–0, ಅಭಿಷೇಕ್ ಶರ್ಮಾ 9–0–46–0.

ಎರಡನೇ ಇನಿಂಗ್ಸ್: ಪಂಜಾಬ್ 3ಕ್ಕೆ 238 (68 ಓವರ್)
ಅಭಿಷೇಕ್ ಬಿ ಸಮರ್ಥ್ 91 (123ಎ, 4X9, 6X3)
ಪ್ರಭಸಿಮ್ರನ್ ಬಿ ವಿದ್ವತ್ 100 (146ಎ, 4X17)
ನಮನ್ ಸಿ ರೋಹಿತ್ ಬಿ ಶುಭಾಂಗ್ 20 (44ಎ, 4X1, 6X1)
ಮನದೀಪ್ ಔಟಾಗದೆ 15 (61ಎ, 4X1)
ನೇಹಲ್ ಔಟಾಗದೆ 9 (35ಎ, 4X1)
ಇತರೆ: 3 (ಲೆಗ್‌ಬೈ 2, ನೋಬಾಲ್ 1)
ವಿಕೆಟ್ ಪತನ: 1–192 (ಅಭಿಷೇಕ್ ಶರ್ಮಾ; 44.3), 2–192 (ಪ್ರಭಸಿಮ್ರನ್ ಸಿಂಗ್; 45.2), 3–220 (ನಮನ್ ಧೀರ್; 58.3)
ಬೌಲಿಂಗ್: ವಿದ್ವತ್ ಕಾವೇರಪ್ಪ 13–3–28–1, ವಿ.ಕೌಶಿಕ್ 14–4–37–0, ವಿ.ವೈಶಾಖ 11–1–52–0, ರೋಹಿತ್‌ಕುಮಾರ್ 10–0–53–0, ಶುಭಾಂಗ್ ಹೆಗ್ಡೆ 13–1–54–1, ಆರ್.ಸಮರ್ಥ್ 7–2–12–1

ದಿನದಾಟದ ಅಂತ್ಯಕ್ಕೆ ಪಂಜಾಬ್ ನಾಯಕ ಮನದೀಪ್ ಸಿಂಗ್ (15; 61ಎ, 4x1), ನೇಹಲ್ ವಧೇರಾ (9; 35ಎ, 4x1) ಕ್ರೀಸ್‌ನಲ್ಲಿದ್ದರು.

ಕರ್ನಾಟಕದ ಎಡಗೈ ಸ್ಪಿನ್ನರ್ ಗಳಾದ ಶುಭಾಂಗ್ ಹೆಗ್ಡೆ ಹಾಗೂ ಎ.ಸಿ. ರೋಹಿತ್ ಕುಮಾರ್ 23 ಓವರ್‌ಗಳಲ್ಲಿ 107 ರನ್ ಬಿಟ್ಟುಕೊಟ್ಟರು.

ಇದಕ್ಕೂ ಮುನ್ನ 6 ವಿಕೆಟ್‌ಗೆ 461 ರನ್‌ಗಳಿಂದ ಭಾನುವಾರ ಬೆಳಿಗ್ಗೆ ಮೊದಲ ಇನಿಂಗ್ಸ್ ಮುಂದುವರಿಸಿದ ಆತಿಥೇಯ ತಂಡ, ಊಟದ ವಿರಾಮಕ್ಕೂ ಒಂದು ಗಂಟೆ ಬಾಕಿ ಇರುವಾಗಲೇ 140 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 514 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು.

124 ನೇ ಓವರ್‌ನ ಮೂರನೇ ಎಸೆತದಲ್ಲಿ ವೈಶಾಖ ವಿಜಯಕುಮಾರ್ (19; 29ಎ, 4x3) ಅವರನ್ನು ವೇಗಿ ಅರ್ಷದೀಪ್ ಸಿಂಗ್ ಎಲ್‌ಬಿ ಬಲೆಗೆ ಕೆಡವಿದರು. ನಂತರ ಎಸ್.ಶರತ್ ಮತ್ತು ಸ್ಥಳೀಯ ಪ್ರತಿಭೆ ರೋಹಿತ್ ಕುಮಾರ್ (22; 60ಎ, 4X3) ಎಂಟನೇ ವಿಕೆಟ್ ಜತೆಯಾಟದಲ್ಲಿ 42 (88 ಎ) ಸೇರಿಸಿದರು. ಸಿದ್ಧಾರ್ಥ್ ಕೌಲ್ ಬೌಲಿಂಗ್‌ನಲ್ಲಿ ಶರತ್ (76; 193ಎ, 4x6) ಎಲ್‌ಬಿ ಬಲೆಗೆ ಬಿದ್ದ ನಂತರ ಡಿಕ್ಲೇರ್ ಘೋಷಿಸಲಾಯಿತು.

ಆಸ್ಟ್ರೇಲಿಯಾ ವನಿತೆಯರಿಗೆ ಗೆಲುವು

ಕಿಮ್ ಗಾರ್ಥ್ ಉತ್ತಮ ಬೌಲಿಂಗ್; ಎಲಿಸ್ ಪೆರಿ ಮಿಂಚು, ಸರಣಿ ಸಮಬಲ

ನವಿ ಮುಂಬೈ (ಪಿಟಿಐ): ಕಿಮ್ ಗಾರ್ಥ್ (27ಕ್ಕೆ2) ಹಾಗೂ ಎಲಿಸ್ ಪೆರಿ ಅವರ ಬ್ಯಾಟಿಂಗ್ (ಅಜೇಯ 34) ಬಲದಿಂದ ಆಸ್ಟ್ರೇಲಿಯಾ ತಂಡವು ಭಾನುವಾರ ಇಲ್ಲಿ ನಡೆದ ಎರಡನೇ ಟಿ20 ಪಂದ್ಯದಲ್ಲಿ ಭಾರತದ ಎದುರು ಜಯಿಸಿತು.

ಡಿ.ವೈ.ಪಾಟೀಲ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆರು ವಿಕೆಟ್‌ಗಳಿಂದ ಜಯಿಸಿದ ಆಸ್ಟ್ರೇಲಿಯಾ, ಮೂರು ಪಂದ್ಯಗಳ ಸರಣಿಯಲ್ಲಿ 1–1 ಸಮಬಲ ಸಾಧಿಸಿತು.

ಟಾಸ್ ಗೆದ್ದು ಆಸ್ಟ್ರೇಲಿಯಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಜಾರ್ಜಿಯಾ ವೇರ್ ಹ್ಯಾಮ್, ಕಿಮ್ ಗಾರ್ಥ್, ಅನಾಬೆಲ್ ಸದರ್ಲೆಂಡ್ ಅವರು ಭಾರತದ ಪ್ರಮುಖ ಬ್ಯಾಟರ್‌ಗಳ ವಿಕೆಟ್ ಕಬಳಿಸಿದರು.

ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 130 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಭಾರತದ ದೀಪ್ತಿ ಶರ್ಮಾ 30 (27ಎ) ಸ್ಮೃತಿ ಮಂದಾನಾ (23; 25ಎ)ಹಾಗೂ ರಿಚಾ ಘೋಷ್ (23, 19ಎ) ರನ್ ಗಳಿಸಿದರು.



ಆಸ್ಟ್ರೇಲಿಯಾದ ಎಲಿಸ್ ಪೆರಿ ಅವರ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಅದಕ್ಕುತ್ತರವಾಗಿ ಪ್ರವಾಸಿ ತಂಡವು 19 ಓವರ್‌ಗಳಲ್ಲಿ 4 ವಿಕೆಟ್‌ಗೆ 133 ರನ್ ಗಳಿಸಿ ಜಯಿಸಿತು.

300ನೇ ಅಂತರರಾಷ್ಟ್ರೀಯ ಪಂದ್ಯ ಆಡಿದ ಎಲಿಸ್ ಪೆರಿ 34 ರನ್ (21ಎ) ಗಳಿಸಿದರು. ಇವರಿಗೆ ಸಹ ಆಟಗಾರ್ತಿಯರಾದ ಅಲಿಸಾ ಹೀಲಿ (26), ಬೆತ್ ಮೂನಿ (20), ತಹ್ಲಿಯಾ ಮೆಗ್ರಾ (19) ಮತ್ತು ಫೋಬೆ ಲಿಚ್‌ಫೀಲ್ಡ್ (ಅಜೇಯ 18) ಬೆಂಬಲ ನೀಡಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 130 (ಸ್ಮೃತಿ ಮಂದಾನ 23, ರಿಚಾ ಘೋಷ್ 23, ದೀಪ್ತಿ ಶರ್ಮಾ 30, ಕಿಮ್ ಗಾರ್ಥ್ 27ಕ್ಕೆ2, ಸದರ್ಲೆಂಡ್ 18ಕ್ಕೆ2, ವೇರ್‌ಹ್ಯಾಮ್ 17ಕ್ಕೆ2) ಆಸ್ಟ್ರೇಲಿಯಾ: 19 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 133 (ಅಲಿಸಾ ಹೀಲಿ 26, ಬೆತ್ ಮೂನಿ 20, ಎಲಿಸ್ ಪೆರಿ 34. ದೀಪ್ತಿ ಶರ್ಮಾ 22ಕ್ಕೆ2)
ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 6 ವಿಕೆಟ್‌ಗಳ ಜಯ.
ಪಂದ್ಯದ ಆಟಗಾರ್ತಿ: ಕಿಮ್ ಗಾರ್ಥ್.

ರಣಜಿ : ಪೂಜಾರ ದಾಖಲೆ ದ್ವಿಶತಕ

ರಾಜ್‌ಕೋಟ್ (ಪಿಟಿಐ): ಸೌರಾಷ್ಟ್ರ ತಂಡದ ಬ್ಯಾಟರ್ ಚೇತೇಶ್ವರ್ ಪೂಜಾರ ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಟೂರ್ನಿಯ ಪಂದ್ಯದಲ್ಲಿ ಜಾರ್ಖಂಡ್ ಎದುರು ದ್ವಿಶತಕ ಗಳಿಸಿದರು.

ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಪೂಜಾರ (ಔಟಾಗದೆ 243; 356ಎ, 4X30) ಅವರಿಗೆ ಇದು 17ನೇ ದ್ವಿಶತಕವಾಗಿದೆ.

ಇದರೊಂದಿಗೆ ಅವರು ಇಂಗ್ಲೆಂಡ್‌ನ ಹರ್ಬರ್ಟ್ ಸಟ್‌ಕ್ಲಿಫ್ ಮತ್ತು ಮಾರ್ಕ್ ರಾಂಪ್ರಕಾಶ್ ಅವರ ದಾಖಲೆಯನ್ನು ಸರಿಗಟ್ಟಿದರು. ಈ ಪಟ್ಟಿಯ ಅಗ್ರಸ್ಥಾನದಲ್ಲಿ ಡಾನ್ ಬ್ರಾಡ್ಮನ್ (37) ಇದ್ದಾರೆ. ವ್ಯಾಲಿ ಹ್ಯಾಮಂಡ್ (36) ಮತ್ತು ಪ್ಯಾಟ್ಸ ಹೆಂಡ್ರೆನ್ (22) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ.

ರಣಜಿ ಟ್ರೋಫಿ ಟೂರ್ನಿಯಲ್ಲಿ ಪೂಜಾರ ಅವರಿಗೆ ಇದು 8ನೇ ದ್ವಿಶತಕವಾಗಿದೆ. ಈ ಪಟ್ಟಿಯಲ್ಲಿ ಅವರು 2ನೇ ಸ್ಥಾನದಲ್ಲಿದ್ದಾರೆ. ಪಾರಸ್ ಡೋಗ್ರಾ (9) ಮೊದಲ ಸ್ಥಾನದಲ್ಲಿದ್ದಾರೆ. ಪೂಜಾರ ಅವರು ಭಾರತ ತಂಡಕ್ಕೆ ಮರಳುವ ಪ್ರಯತ್ನದಲ್ಲಿದ್ದಾರೆ. ಕಳೆದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಿಂದ ಇಲ್ಲಿಯವರೆಗೆ ಅವರಿಗೆ ರಾಷ್ಟ್ರೀಯ ತಂಡದಲ್ಲಿ ಅವಕಾಶ ಲಭಿಸಿಲ್ಲ.



ಚೇತೇಶ್ವರ್ ಪೂಜಾರ

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಜಾರ್ಖಂಡ್: 142. ಸೌರಾಷ್ಟ್ರ: 156 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 578 (ಹರ್ವಿಕ್ ದೇಸಾಯಿ 85, ಚೇತೇಶ್ವರ್ ಪೂಜಾರ ಔಟಾಗದೆ 243, ಪ್ರೇರಕ್ ಮಂಕಡ್ ಔಟಾಗದೆ 104) ಎರಡನೇ ಇನಿಂಗ್ಸ್: ಜಾರ್ಖಂಡ್: 45 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 140 (ಕುಮಾರ್ ದೇವವ್ರತ್ ಬ್ಯಾಟಿಂಗ್ 74, ನಝಿಂ ಸಿದ್ದೀಕಿ 45, ಪ್ರೇರಕ್ ಮಂಕಡ್ 12ಕ್ಕೆ2

ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್: ಚೇತರಿಸಿದ ಹೈದರಾಬಾದ್ ತಂಡ

ಮೈಸೂರು: ಆತಿಥೇಯ ಕರ್ನಾಟಕ ತಂಡವು ಭಾನುವಾರ ಇಲ್ಲಿ ಆರಂಭವಾದ ಸಿ.ಕೆ. ನಾಯ್ಡು ಟ್ರೋಫಿ 23 ವರ್ಷದ ಒಳಗಿನವರ ಕ್ರಿಕೆಟ್ ಟೂರ್ನಿಯ ಟೆಸ್ಟ್ ಪಂದ್ಯದ ಮೊದಲ ದಿನ ಹೈದರಾಬಾದ್‌ಗೆ ಆರಂಭಿಕ ಆಘಾತ ನೀಡಿತು. ಆದರೆ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ಪ್ರವಾಸಿ ತಂಡವನ್ನು ಸಂಕಷ್ಟದಿಂದ ಮೇಲೆತ್ತಿದರು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಬೆಳಿಗ್ಗೆ ಟಾಸ್ ಗೆದ್ದ ಕರ್ನಾಟಕವು ಎದುರಾಳಿಯನ್ನು ಬ್ಯಾಟಿಂಗ್ ಗೆ ಆಹ್ವಾನಿಸಿತು. ನಾಯಕನ ನಿರ್ಧಾರವನ್ನು ಸಮರ್ಥಿಸುವಂತೆ ಬೌಲ್ ಮಾಡಿದ ಕರ್ನಾಟಕದ ಬೌಲರ್‌ಗಳು ಎದುರಾಳಿ ತಂಡವನ್ನು ಕಾಡಿದರು. ಹೈದರಾಬಾದ್ ತಂಡ ಕೇವಲ 16 ರನ್ ಗಳಿಸುವಷ್ಟರಲ್ಲೇ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು.



ಮೈಸೂರಿನ ವೇಗಿ ಎಲ್. ಮನ್ವಂತ್ ಕುಮಾರ್ ಬೌಲಿಂಗ್

ಮೈಸೂರಿನ ವೇಗಿ ಎಲ್. ಮನ್ವಂತ್ ಕುಮಾರ್ ಎದುರಾಳಿಗಳನ್ನು ಕಂಗೆಡಿಸಿದರು. 15 ಓವರ್ ಬೌಲ್ ಮಾಡಿದ ಅವರು 3 ವಿಕೆಟ್ ಉರುಳಿಸಿ ಗಮನ ಸೆಳೆದರು. ಸ್ಪಿನ್ನರ್ ಕೆ. ಶಶಿಕುಮಾರ್ 2 ಹಾಗೂ ಯಶೋವರ್ಧನ್ 1 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್: ಹೈದರಾಬಾದ್: 81 ಓವರ್‌ಗಳಲ್ಲಿ 223ಕ್ಕೆ 6 (ಇಲ್ಯಾನ್ ಸಥಾನಿ ಔಟಾಗದೇ 94, ಸಿಟಿಎಲ್ ರಕ್ಷಣ್ ಔಟಾಗದೇ 36. ಎಲ್. ಮನ್ವಂತ್ ಕುಮಾರ್ 46ಕ್ಕೆ 3, ಕೆ.ಶಶಿಕುಮಾರ್ 73ಕ್ಕೆ 2)

‘ಡಬ್ಲ್ಯುಎಫ್‌ಐ ಕಾರ್ಯಕ್ರಮಗಳಿಗೆ ಮಾನ್ಯತೆಯಿಲ್ಲ’

ನವದೆಹಲಿ (ಪಿಟಿಐ): ‘ಅಮಾನತುಗೊಂಡಿರುವ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ರಾಷ್ಟ್ರೀಯ ಚಾಂಪಿಯನ್‌ಷಿಪ್ ಆಯೋಜಿಸಲು ಯಾವುದೇ ಅಧಿಕಾರ ಇಲ್ಲ. ಫೆಡರೇಷನ್ ನಡೆಸುವ ಕಾರ್ಯಕ್ರಮಗಳಿಗೆ ಮಾನ್ಯತೆ ಇರುವುದಿಲ್ಲ’ ಎಂದು ಕೇಂದ್ರ ಕ್ರೀಡಾ ಸಚಿವಾಲಯ ಭಾನುವಾರ ತಿಳಿಸಿದೆ.

ರಾಷ್ಟ್ರೀಯ ಕ್ರೀಡಾ ಸಂಹಿತೆ ಮತ್ತು ಡಬ್ಲ್ಯುಎಫ್‌ಐ ನಿಯಮ ಉಲ್ಲಂಘನೆಯನ್ನು ಉಲ್ಲೇಖಿಸಿ ಕ್ರೀಡಾ ಸಚಿವಾಲಯವು ಡಿ.24 ರಂದು ಕುಸ್ತಿ ಫೆಡರೇಷನ್‌ನ ನೂತನ ಆಡಳಿತ ಮಂಡಳಿಯನ್ನು ಅಮಾನತುಗೊಳಿಸಿತ್ತು.

‘ಡಬ್ಲ್ಯುಎಫ್‌ಐನ ಲೆಟರ್‌ಹೆಡ್ ಮತ್ತು ಕ್ರೀಡಾ ಸಚಿವಾಲಯದ ಹೆಸರು, ಲಾಂಛನ ಬಳಸುವುದನ್ನು ತಕ್ಷಣ ನಿಲ್ಲಿಸಬೇಕು’ ಎಂದು ಕ್ರೀಡಾ ಸಚಿವಾಲಯವು ಸಂಜಯ್ ಸಿಂಗ್‌ಗೆ ಪತ್ರ ಬರೆದು ಸೂಚಿಸಿದೆ.

ಟೆನಿಸ್: ಶಿವಾಂಕ್ ಮುಖ್ಯ ಸುತ್ತಿಗೆ

ಪ್ರಜಾವಾಣಿ ವಾರ್ತೆ

ಮಂಡ್ಯ: ಭಾರತದ ಶಿವಾಂಕ್ ಭಟ್ನಾಗರ್ ಹಾಗೂ ವಿಷ್ಣುವರ್ಧನ್ ಇಲ್ಲಿನ ಪಿಇಟಿ ಟೆನಿಸ್ ಅಂಗಳದಲ್ಲಿ ಭಾನುವಾರ ಆರಂಭವಾದ ಪಿಇಟಿ ಮಂಡ್ಯ ಓಪನ್ ಪುರುಷರ ಐಟಿಎಫ್ ಟೆನಿಸ್ ಟೂರ್ನಿಯ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಗೆಲುವು ದಾಖಲಿಸಿ ಮುಖ್ಯ ಸುತ್ತಿಗೆ ಮುನ್ನಡೆದರು.

ಅರ್ಹತಾ ಸುತ್ತಿನ ಮೊದಲ ಪಂದ್ಯದಲ್ಲಿ 23 ವರ್ಷ ವಯಸ್ಸಿನ ಶಿವಾಂಕ್ 14ನೇ ಶ್ರೇಯಾಂಕಿತ ಭರತ್ ನಿಶೊಕ್ ಕುಮಾರನ್ ಎದುರು 6-3, 7-6 ನೇರ ಸೆಟ್‌ಗಳಿಂದ ಗೆಲುವು ದಾಖಲಿಸಿದರು.

ಶ್ರೇಯಾಂಕದಲ್ಲಿ ಭರತ್ ಅವರಿಗಿಂತ 93 ಸ್ಥಾನ ಕೆಳಗಿರುವ ಶಿವಾಂಕ್ ಮೊದಲ ಸೆಟ್‌ನ 2ನೇ ಗೇಮ್‌ನಲ್ಲೇ ಎದುರಾಳಿಯ ಸರ್ವ್ ಮುರಿದು 3-0 ಅಂತರದಿಂದ ಮುನ್ನಡೆದರು. ಅಂತಿಮವಾಗಿ 6-3ರಿಂದ ಸೆಟ್ ಗೆದ್ದರು.

ಪಂದ್ಯದ 2ನೇ ಸೆಟ್‌ನಲ್ಲಿ ಇಬ್ಬರೂ ಆಟಗಾರರು ಪೈಪೋಟಿ ನೀಡಿದ್ದು, ಟೈಬ್ರೇಕರ್ ಮೊರೆ ಹೋಗಲಾಯಿತು. ಎದುರಾಳಿಗೆ ಯಾವುದೇ ಅವಕಾಶ ನೀಡದ ಶಿವಾಂಕ್ 7-6 ರಿಂದ ಸೆಟ್ ತಮ್ಮದಾಗಿಸಿಕೊಂಡರು.

ಮತ್ತೊಂದು ಪಂದ್ಯದಲ್ಲಿ ಭಾರತದ ಫೈಸಲ್ ಖಮರ್ 15ನೇ ಶ್ರೇಯಾಂಕಿತ ರೋಹನ್ ಮೆಹ್ರಾ (ಭಾರತ) ಎದುರು 5-7, 6-4, 10-1ರಿಂದ ಅಚ್ಚರಿಯ ಗೆಲುವು ದಾಖಲಿಸಿದರು. ನೆದರ್ಲೆಂಡ್ಸ್‌ನ ಥಿಜ್ಮೆನ್ ಲೂಫ್ 10ನೇ ಶ್ರೇಯಾಂಕದ ಮೊರೊಕ್ಕೊದ ಇಮ್ರಾನ್ ಸಿಬಿಲ್ಲೆ ಅವರನ್ನು 6-1, 6-0 ನೇರ ಸೆಟ್‌ಗಳಿಂದ ಮಣಿಸಿದರು.



ಶಿವಾಂಕ್ ಭಟ್ನಾಗರ್ ಆಟದ ವೈಖರಿ

ಮಾಜಿ ಡೇವಿಸ್ ಕಪ್ ಆಟಗಾರ, ಏಷ್ಯನ್ ಕ್ರೀಡಾಕೂಟದ ಪದಕ ವಿಜೇತ ವಿಷ್ಣುವರ್ಧನ್ ಅವರು ಧೀರಜ್ ಕೊಡಂಚಾ ಶ್ರೀನಿವಾಸನ್ ಅವರನ್ನು 6-0, 6-7(6), 10-5 ಅಂತರದಿಂದ ಮಣಿಸಿದರು. ಮತ್ತೊಂದು ಪಂದ್ಯದಲ್ಲಿ ಎಸ್.ವಿ. ಪ್ರಜ್ವಲ್ ಹೆಚ್ಚಿನ ಪ್ರತಿರೋಧ ತೋರದೇ 9ನೇ ಶ್ರೇಯಾಂಕದ ಆಸ್ಟ್ರೇಲಿಯಾದ ಮ್ಯಾಟ್ ಹುಲ್ಮೆ ಎದುರು 6-0, 6-1 ಅಂತರದಿಂದ ಸೋತರು.

ಟಿ20 ತಂಡಕ್ಕೆ ರೋಹಿತ್, ವಿರಾಟ್

ರಾಜ್‌ಕೋಟ್ (ಪಿಟಿಐ): ದೀರ್ಘ ಕಾಲದ ನಂತರ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಭಾರತ ಕ್ರಿಕೆಟ್ ಟಿ–20 ತಂಡಕ್ಕೆ ಮರಳಿದ್ದಾರೆ.

ಭಾರತದ ಆತಿಥ್ಯದಲ್ಲಿ ನಡೆಯಲಿರುವ ಅಫ್ಗಾನಿಸ್ತಾನ ಎದುರಿನ ಮೂರು ಟಿ20 ಪಂದ್ಯಗಳ ಸರಣಿಯಲ್ಲಿ ಆಡುವ ಭಾರತ ತಂಡವನ್ನು ಭಾನುವಾರ ಪ್ರಕಟಿಸಲಾಗಿದೆ. ರೋಹಿತ್ ಶರ್ಮಾ ಅವರು ನಾಯಕತ್ವ ವಹಿಸಲಿದ್ದಾರೆ.

2022ರಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಸೆಮಿಫೈನಲ್ ನಂತರ ರೋಹಿತ್ ಮತ್ತು ಕೊಹ್ಲಿ ಅವರು ಟಿ20 ತಂಡದಲ್ಲಿ ಆಡಿರಲಿಲ್ಲ. ಆದರೆ ಈಗ ಗಾಯಗೊಂಡಿರುವ ಹಾರ್ದಿಕ್ ಪಾಂಡ್ಯ ಮತ್ತು ಸೂರ್ಯಕುಮಾರ್ ಯಾದವ್ ಅವರು ವಿಶ್ರಾಂತಿಯಲ್ಲಿರುವುದರಿಂದ ರೋಹಿತ್ ನಾಯಕತ್ವಕ್ಕೆ ಮರಳಿದ್ದಾರೆ.

ಅಲ್ಲದೇ ಮುಂಬರಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಆಟಗಾರರನ್ನು ಸಿದ್ಧಗೊಳಿಸುವ ಪ್ರಕ್ರಿಯೆಯೂ ಇಲ್ಲಿಂದ ಆರಂಭವಾಗಲಿದೆ ಎಂದು ತಿಳಿದುಬಂದಿದೆ. ಇಬ್ಬರನ್ನೂ ಬಿಟ್ಟರೆ ಯುವ ಆಟಗಾರರೇ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾನ ಪಡೆದಿದ್ದಾರೆ. ಕೆ.ಎಲ್. ರಾಹುಲ್ ಈ ಸರಣಿಯಲ್ಲಿ ಆಡುತ್ತಿಲ್ಲ.



ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ

ತಂಡ: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ತಿಲಕ್ ವರ್ಮಾ, ರಿಂಕು ಸಿಂಗ್, ಜಿತೇಶ್ ಶರ್ಮಾ (ವಿಕೆಟ್‌ಕೀಪರ್), ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ಶಿವಂ ದುಬೆ, ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್, ರವಿ ಬಿಷ್ಣೋಯಿ, ಕುಲದೀಪ್ ಯಾದವ್, ಅರ್ಷದೀಪ್ ಸಿಂಗ್, ಆವೇಶ್ ಖಾನ್, ಮುಕೇಶ್ ಕುಮಾರ್.

ಪುಣೇರಿ ಪಲ್ಟನ್‌ಗೆ ಜಯ

ಮುಂಬೈ: ಸಾಂಘಿಕ ಆಟ ಪ್ರದರ್ಶಿಸಿದ ಪುಣೇರಿ ಪಲ್ಟನ್ ತಂಡ, ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಭಾನುವಾರ 29–26ರಿಂದ ತಮಿಳ್ ತಲೈವಾಸ್ ತಂಡವನ್ನು ಸೋಲಿಸಿತು. ಈ ಗೆಲುವಿನೊಂದಿಗೆ ಪುಣೇರಿ 46 ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನದಲ್ಲಿ ಮುಂದುವರಿದಿದೆ.

ಪುಣೇರಿ ಪರ ಮೊಹಮ್ಮದ್ ರೇಜಾ ಶಾಡ್ಲೌಯಿ 8 ಮತ್ತು ಗೌರವ್ ಖತ್ರಿ 6 ಅಂಕ ಕಲೆ ಹಾಕಿ ಮಿಂಚಿದರು. ತಂಡವು ರೈಡಿಂಗ್‌ನಿಂದ 12 ಮತ್ತು ಟ್ಯಾಕಲ್‌ನಿಂದ 13 ಪಾಯಿಂಟ್ಸ್ ಸಂಗ್ರಹಿಸಿತು. ಇದು 10 ಪಂದ್ಯಗಳಲ್ಲಿ ಪುಣೇರಿ ತಂಡಕ್ಕೆ 9ನೇ ಜಯ.

ಮೊದಲಾರ್ಧದಲ್ಲಿ 12–11 ಅಂಕಗಳಿಂದ ಮುನ್ನಡೆಯಲ್ಲಿದ್ದ ಪುಣೇರಿ ತಂಡವು ಉತ್ತರಾರ್ಧದಲ್ಲೂ ಪ್ರಾಬಲ್ಯ ಮುಂದುವರಿಸಿತು.

ತಮಿಳ್ ಪರ ಸಾಗರ್ 11 ಮತ್ತು ನರೇಂದ್ರ ಹೋಶಿಯಾರ್ 4 ಅಂಕ ಸಂಪಾದಿಸಿದರು. ತಲೈವಾಸ್ ತಂಡ 14 ಅಂಕ ಗಳಿಸಿ 11ನೇ ಸ್ಥಾನದಲ್ಲಿದೆ.

ಹರಿಯಾಣ ಸ್ಟೀಲರ್ಸ್ ಇನ್ನೊಂದು ಪಂದ್ಯದಲ್ಲಿ ಬೆಂಗಾಲ್ ವಾರಿಯರ್ಸ್ ಮೇಲೆ 41–35 ಪಾಯಿಂಟ್ಸ್ ಅಂತರದ ಜಯ ಗಳಿಸಿತು. ಹರಿಯಾಣ ಪರ ಚಂದ್ರನ್ ರಂಜಿತ್ ಮತ್ತು ಶಿವಂ ಪಟಾರೆ ತಲಾ 7 ಪಾಯಿಂಟ್ಸ್ ಕಲೆ ಹಾಕಿದರು.

ಇಂದಿನ ಪಂದ್ಯ: ಬೆಂಗಳೂರು ಬುಲ್ಸ್–ಪಟ್ನಾ ಪೈರೇಟ್ಸ್, (ರಾತ್ರಿ 8), ಯು ಮುಂಬಾ– ಡೆಲ್ಲಿ ದಬಂಗ್ (ರಾತ್ರಿ 9)

ರಿಬಾಕಿನಾಗೆ ಬ್ರಿಸ್ಬೇನ್ ಕಿರೀಟ

ಬ್ರಿಸ್ಬೇನ್ (ಎಎಫ್‌ಪಿ): ಅಗ್ರ ಶ್ರೇಯಾಂಕದ ಅರಿನಾ ಸಬಲೆಂಕಾ ಅವರನ್ನು 6-0, 6-3ರಿಂದ ಮಣಿಸಿದ ಎಲೆನಾ ರಿಬಾಕಿನಾ (ಕಜಕಸ್ತಾನ) ಬ್ರಿಸ್ಬೇನ್ ಇಂಟರ್‌ನ್ಯಾಷನಲ್ ಟೆನಿಸ್ ಟೂರ್ನಿ ಪ್ರಶಸ್ತಿಯನ್ನು ಗೆದ್ದರು. ಇದು ಅವರ ವೃತ್ತಿಜೀವನದ ಆರನೇ ಪ್ರಶಸ್ತಿ.

ನಾಲ್ಕನೇ ಶ್ರೇಯಾಂಕದ ರಿಬಾಕಿನಾ ವಿರುದ್ಧ ತನ್ನ ಹಿಂದಿನ ಏಳು ಪಂದ್ಯಗಳಲ್ಲಿ ಐದನ್ನು ಗೆದ್ದಿದ್ದ ಸಬಲೆಂಕಾ ಇಲ್ಲಿ ಮುಗ್ಗರಿಸಿದರು.

ಗ್ರಿಗೊರ್ ಡಿಮಿಟ್ರೋವ್‌ಗೆ ಪ್ರಶಸ್ತಿ: ಪುರುಷರ ಫೈನಲ್ ಪಂದ್ಯದಲ್ಲಿ 2ನೇ ಶ್ರೇಯಾಂಕದ ಗ್ರಿಗರ್ ಡಿಮಿಟ್ರೋವ್ (ಬಲ್ಗೇರಿಯಾ) ಅಗ್ರ ಶ್ರೇಯಾಂಕದ ಹೋಲ್ಗರ್ ರೂನ್ ಅವರನ್ನು 7-6 (5), 6-4 ಸೆಟ್‌ಗಳಿಂದ ಸೋಲಿಸಿದರು. 14ನೇ ಶ್ರೇಯಾಂಕದ ಡಿಮಿಟ್ರೋವ್‌ಗೆ ಇದು ವೃತ್ತಿಜೀವನದ 9ನೇ ಪ್ರಶಸ್ತಿ.

ಆಸ್ಟ್ರೇಲಿಯಾ ಓಪನ್: ನಡಾಲ್ ಅಲಭ್ಯ

ಮೆಲ್ಬರ್ನ್, ಆಸ್ಟ್ರೇಲಿಯಾ (ಎಎಫ್‌ಪಿ) :ಸ್ಪೇನ್‌ನ ರಫೆಲ್ ನಡಾಲ್ ಅವರು ಒಂದು ವರ್ಷದ ಬಳಿಕ ಬ್ರಿಸ್ಬೇನ್ ಇಂಟರ್‌ನ್ಯಾಷನಲ್ ಟೂರ್ನಿಯ ಮೂಲಕ ಟೆನಿಸ್‌ಗೆ ಪುನರಾಗಮನ ಮಾಡಿದ್ದರು. ಆದರೆ ಅವರು ಈಗ ಮತ್ತೆ ಗಾಯದ ಸಮಸ್ಯೆಯಿಂದಾಗಿ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

ಕ್ರಾಸ್‌ಕಂಟ್ರಿ: ಧಾರವಾಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಆತಿಥೇಯ ಧಾರವಾಡ ತಂಡವು ಇಲ್ಲಿನ ವಿದ್ಯಾನಗರದಲ್ಲಿ ಭಾನುವಾರ ಆಯೋಜಿಸಿದ್ದ 58ನೇ ಕರ್ನಾಟಕ ರಾಜ್ಯ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿತು.

ಧಾರವಾಡ ಜಿಲ್ಲಾ ಅಥ್ಲೆಟಿಕ್ ಸಂಸ್ಥೆ ಹಾಗೂ ಚೈತನ್ಯ ಸ್ಪೋರ್ಟ್ಸ್ ಫೌಂಡೇಷನ್ ಆಶ್ರಯದಲ್ಲಿ ನಡೆದ ಓಟದಲ್ಲಿ ಧಾರವಾಡದ ಕ್ರೀಡಾಪಟುಗಳು 16 ವರ್ಷದೊಳಗಿನ ಬಾಲಕರ ಹಾಗೂ ಬಾಲಕಿಯರ 2 ಕಿ.ಮೀ ಓಟ (ಕ್ರಮವಾಗಿ 29, 24 ಪಾಯಿಂಟ್ಸ್), 18 ವರ್ಷದೊಳಗಿನ ಬಾಲಕಿಯರ 4 ಕಿ.ಮೀ ಓಟ (33 ಪಾಯಿಂಟ್ಸ್) ಹಾಗೂ ಮಹಿಳೆಯರ 10 ಕಿ.ಮೀ ಓಟದಲ್ಲಿ (39 ಪಾಯಿಂಟ್ಸ್) ಜಯಿಸಿದರು.

18 ವರ್ಷದೊಳಗಿನ ಬಾಲಕರ 6 ಕಿ.ಮೀ. ಓಟದಲ್ಲಿ ಬೆಳಗಾವಿ (31 ಪಾಯಿಂಟ್ಸ್), 20 ವರ್ಷದಗೊಳಗಿನವರ ಬಾಲಕರ 8 ಕಿ.ಮೀ. ಓಟ, ಬಾಲಕಿಯರ 6 ಕಿ.ಮೀ. ಓಟ, ಪುರುಷರ 10 ಕಿ.ಮೀ. ಓಟದಲ್ಲಿ ಬೆಂಗಳೂರು ನಗರ (ಕ್ರಮವಾಗಿ 35, 1, 17 ಪಾಯಿಂಟ್ಸ್) ಟ್ರೋಫಿ ಜಯಿಸಿದವು.

ಒಟ್ಟು ಎಂಟು ವಿಭಾಗಗಳಲ್ಲಿ ತಲಾ ಆರು ವಿಜೇತರಿಗೆ ಪ್ರಶಸ್ತಿ ವಿತರಿಸಿ, ಜುಲೈ 15ರಂದು ಬಿಹಾರದ ಗಯಾದಲ್ಲಿ ನಡೆಯುವ ರಾಷ್ಟ್ರೀಯ ಕ್ರಾಸ್‌ಕಂಟ್ರಿ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸುವ ಕರ್ನಾಟಕ ತಂಡಕ್ಕೆ ಆಯ್ಕೆ ಮಾಡಲಾಯಿತು. ಅಂತರರಾಷ್ಟ್ರೀಯ ಅಥ್ಲೀಟ್‌ಗಳಾದ ಅಶ್ವಿನಿ ಅಕ್ಕುಂಜಿ, ಬಿಂದುರಾಣಿ, ವಿಲಾಸ್ ನೀಲಗುಂದ್, ಕುಸ್ತಿಪಟು ಅಶೋಕ್ ಗದಿಗೆಪ್ಪ ಏಣಗಿ ಅವರು ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಕೂಚ್ ಬಿಹಾರ್ ಟ್ರೋಫಿ: ಹಾರ್ದಿಕ್ ಶತಕ

ಕರ್ನಾಟಕ ಗೆಲುವಿಗೆ ಸುಲಭ ಗುರಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಆತಿಥೇಯ ಕರ್ನಾಟಕ ತಂಡವು ಇಲ್ಲಿ ನಡೆಯುತ್ತಿರುವ ತಮಿಳುನಾಡು ವಿರುದ್ಧದ ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಗೆಲುವಿನ ಸನಿಹದಲ್ಲಿದೆ. ಸೋಮವಾರ ಬೆಳಿಗ್ಗೆ 11 ರನ್‌ಗಳ ಅತಿ ಸುಲಭ ಗುರಿಯನ್ನು ಮುಟ್ಟಿ ಫೈನಲ್‌ಗೆ ಲಗ್ಗೆ ಇಡಲು ಆತಿಥೇಯ ಬಳಗ ಸಿದ್ಧವಾಗಿದೆ.

ಹಾರ್ದಿಕ್ ರಾಜ್ (100, 189 ಎಸೆತ, 4x12, 6x1) ಶತಕ ಹಾಗೂ ಅಗಸ್ತ್ಯ ರಾಜು(52ಕ್ಕೆ 4) ಅಮೋಘ ಬೌಲಿಂಗ್ ನೆರವಿನಿಂದ ರಾಜ್ಯ ತಂಡವು ಗೆಲುವಿನ ಸನಿಹ ಬಂದು ನಿಂತಿದೆ. ಧೀರಜ್ ಗೌಡ ಕೂಡ ನಾಲ್ಕು ವಿಕೆಟ್ ಗಳಿಸಿ ತಮಿಳುನಾಡು ಬ್ಯಾಟರ್‌ಗಳನ್ನು ಕಟ್ಟಿಹಾಕಿದರು.

ಎರಡನೇ ದಿನದಾಟವಾದ ಶನಿವಾರದ ಅಂತ್ಯಕ್ಕೆ 7 ವಿಕೆಟ್‌ಗಳಿಗೆ 360 ರನ್ ಗಳಿಸಿದ್ದ ಕರ್ನಾಟಕ, ಭಾನುವಾರ 129.3 ಓವರ್‌ಗಳಲ್ಲಿ 418 ರನ್‌ಗಳಿಗೆ ಆಲೌಟ್ ಆಯಿತು. ಯುವರಾಜ್ ಅರೋರಾ (51, 138 ಎಸೆತ, 4x8 ಬೌಂಡರಿ) ಅರ್ಧಶತಕ ಬಾರಿಸಿ, 292 ರನ್‌ಗಳ ಮುನ್ನಡೆ ಗಳಿಸಲು ನೆರವಾದರು.



ಶತಕ ಸಿಡಿಸಿದ ಕರ್ನಾಟಕ ತಂಡದ ಹಾರ್ದಿಕ್ ರಾಜ್

ಎರಡನೇ ಇನ್ನಿಂಗ್ಸ್‌ನಲ್ಲಿ ತಮಿಳುನಾಡು 70.5 ಓವರ್‌ಗಳಲ್ಲಿ 302 ರನ್‌ಗಳಿಗೆ ಆಲೌಟ್ ಆಯಿತು. ಕೆಟಿಎ ಮಾಧವ ಪ್ರಸಾದ್ (118, 141 ಎಸೆತ, 4x11, 6x1) ಶತಕ ಮತ್ತು ಎಸ್.ಶ್ರೇಣಿಕ್ (73, 94 ಎಸೆತ, 4x6, 1x6) ಅರ್ಧಶತಕ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ತಮಿಳುನಾಡು ಮೊದಲ ಇನಿಂಗ್ಸ್: 54.5 ಓವರ್‌ಗಳಲ್ಲಿ 126; ಕರ್ನಾಟಕ: 129.3 ಓವರ್‌ಗಳಲ್ಲಿ 418 (ಹಾರ್ದಿಕ್ ರಾಜ್ 100, ಯುವರಾಜ್ ಅರೋರಾ 51, ಪಿ.ವಿಘ್ನೇಷ್ 121ಕ್ಕೆ 4) ಎರಡನೇ ಇನಿಂಗ್ಸ್: ತಮಿಳುನಾಡು 70.5 ಓವರ್‌ಗಳಲ್ಲಿ 302 (ಎಸ್.ಶ್ರೇಣಿಕ್ 73, ಕೆಟಿಎ ಮಾಧವ ಪ್ರಸಾದ್ 118, ಸಿದ್ಧಾರ್ಥ 33, ಅಗಸ್ತ್ಯ ರಾಜು 52ಕ್ಕೆ 4, ಧೀರಜ್ ಗೌಡ 94ಕ್ಕೆ 4)

ರಾಜ್ಯ ಮಾಸ್ಟರ್ಸ್ ಅಥ್ಲೆಟಿಕ್ಸ್: ಯೋಗೇಂದ್ರಗೆ ಚಿನ್ನ



ಬೆಂಗಳೂರು: ಮೈಸೂರಿನ ಎಂ.ಯೋಗೇಂದ್ರ ಅವರು ಹೊಸಕೋಟೆಯ ಬಿ. ಚನ್ನಬೈರೇಗೌಡ ಕ್ರೀಡಾಂಗಣದಲ್ಲಿ ಭಾನುವಾರ ಮುಕ್ತಾಯ ಗೊಂಡ ಕರ್ನಾಟಕ ರಾಜ್ಯ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ 60 ವರ್ಷ ಮೇಲಿನ ವಿಭಾಗದಲ್ಲಿ 5 ಸಾವಿರ ಮೀಟರ್ಸ್ ಮತ್ತು 10 ಸಾವಿರ ಮೀಟರ್ಸ್ ಓಟದಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ.

ಫೆಬ್ರುವರಿ ತಿಂಗಳಲ್ಲಿ ಪುಣೆಯಲ್ಲಿ ನಡೆಯುವ ರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಅವರು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ. ಯೋಗೇಂದ್ರ ಅವರು ಮೈಸೂರು ಅಥ್ಲೆಟಿಕ್ ಕ್ಲಬ್ ಕಾರ್ಯದರ್ಶಿಯೂ ಆಗಿದ್ದಾರೆ.

ಸಂಕ್ಷಿಪ್ತ ಸುದ್ದಿ

ಇರಾನ್: ನೀತಿ ಸಂಹಿತೆ ಉಲ್ಲಂಘನೆಗೆ 74 ಚಾಟಿ ಏಟು

ತೆಹ್ರಾನ್ (ಎಎಫ್‌ಪಿ): ಮಹಿಳೆಯೊಬ್ಬರು ಸಾರ್ವಜನಿಕ ನೀತಿ ಸಂಹಿತೆ ಉಲ್ಲಂಘಿಸಿದ್ದಕ್ಕಾಗಿ ಅವರಿಗೆ 74 ಬಾರಿ ಚಾಟಿ ಏಟು ನೀಡುವಂತೆ ಮತ್ತು ವಸ್ತ್ರದಿಂದ ತಲೆಯನ್ನು ಮುಚ್ಚಿಕೊಳ್ಳದ ಕಾರಣಕ್ಕೆ 25 ಡಾಲರ್ (₹2079) ದಂಡ ವಿಧಿಸಿ ಎಂದು ಇರಾನ್‌ನ ಕೋರ್ಟ್ ಆದೇಶ ನೀಡಿದೆ.

ಅಪರಾಧಿ ರೋಯಾ ಹೆಶ್ಮತಿ ಅವರು ತೆಹ್ರಾನ್‌ನ ಸಾರ್ವಜನಿಕ ಪ್ರದೇಶಗಳಲ್ಲಿ ನೀತಿ ಸಂಹಿತೆಗಳಿಗೆ ಅಗೌರವ ತೋರಿದ್ದಾರೆ ಎಂದು ನ್ಯಾಯಾಂಗದ ‘ಮಿಜಾನ್’ ಆನ್‌ಲೈನ್ ವೆಬ್‌ಸೈಟ್ ಹೇಳಿದೆ. ಇರಾನ್‌ಗಳಲ್ಲಿ ಮಹಿಳೆಯರು ಕುತ್ತಿಗೆ ಮತ್ತು ತಲೆಯನ್ನು ಮುಚ್ಚುವಂತೆ ವಸ್ತ್ರ ಧರಿಸುವುದು ಕಡ್ಡಾಯ.

‘ಹೆಡ್ ಸ್ಕಾರ್ಫ್ ಧರಿಸದ ಫೋಟೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡ ಆರೋಪದ ಮೇಲೆ ಹೆಶ್ಮತಿ ಅವರನ್ನು ಕಳೆದ ಏಪ್ರಿಲ್‌ನಲ್ಲಿ ಬಂಧಿಸಲಾಗಿದೆ’ ಎಂದು ಅವರ ಪರ ವಕೀಲರು ತಿಳಿಸಿದ್ದಾರೆ.

ದಾಳಿ ಹೊಣೆ ಹೊತ್ತ ಐಎಸ್

ಇಸ್ಲಾಮಾಬಾದ್ (ಎಪಿ): ಅಫ್ಗಾನಿಸ್ತಾನ ರಾಜಧಾನಿಯಲ್ಲಿ ಶನಿವಾರ ಮಿನಿ ಬಸ್ ಸ್ಫೋಟಗೊಂಡು ಕನಿಷ್ಠ ಇಬ್ಬರು ಮೃತಪಟ್ಟಿದ್ದು, ಇಸ್ಲಾಮಿಕ್ ಸ್ಟೇಟ್ ಗ್ರೂಪ್ ದಾಳಿಯ ಹೊಣೆಯನ್ನು ಹೊತ್ತಿದೆ.

ದಸ್ತಿ ಬರ್ಚಿಯಲ್ಲಿ ನಡೆದ ಸ್ಫೋಟದಲ್ಲಿ 14 ಮಂದಿ ಗಾಯಗೊಂಡಿದ್ದರು ಎಂದು ಪೊಲೀಸ್ ವಕ್ತಾರರು ತಿಳಿಸಿದ್ದಾರೆ.

‘ಶಿಯಾ ಮುಸ್ಲಿಮರಿದ್ದ ಬಸ್‌ನಲ್ಲಿ ಸ್ಫೋಟಕ ಸಾಧನಗಳನ್ನು ಇಟ್ಟು ದಾಳಿ ನಡೆಸಲಾಯಿತು’ ಎಂದು ಸುನ್ನಿ ಭಯೋತ್ಪಾದಕ ಗುಂಪು ಹೇಳಿಕೆಯಲ್ಲಿ ತಿಳಿಸಿದೆ.

ಭೂಕಂಪ: 5 ದಿನದ ಬಳಿಕ ಅವಶೇಷದಡಿ ವೃದ್ಧೆ ರಕ್ಷಣೆ

ಸುಜು (ಜಪಾನ್) (ಎಎಫ್‌ಪಿ): ಜಪಾನ್‌ನಲ್ಲಿ ಸಂಭವಿಸಿದ ಭೂಕಂಪದ ಪರಿಣಾಮ ಅವಶೇಷಗಳಡಿಯಲ್ಲಿ ಸಿಲುಕಿದ್ದ 90 ವರ್ಷದ ವೃದ್ಧೆಯನ್ನು ಐದು ದಿನಗಳ ಬಳಿಕ ರಕ್ಷಣೆ ಮಾಡಲಾಗಿದೆ.

‘ಸುಜು ನಗರದಲ್ಲಿ ಕುಸಿದ ಮನೆಯೊಂದರ ಅವಶೇಷಗಳಡಿಯಲ್ಲಿ ಈ ವೃದ್ಧೆ ಇದ್ದರು. ಅವರನ್ನು ರಕ್ಷಣೆ ಮಾಡಿದ ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಸರ್ಕಾರಿ ಸ್ವಾಮ್ಯದ ಸುದ್ದಿ ಸಂಸ್ಥೆ ಎನ್‌ಎಚ್‌ಕೆ ವರದಿ ಮಾಡಿದೆ.

ಆದರೆ, ವಿಪರೀತ ಹಿಮಪಾತ ಮತ್ತು ಮಳೆ ಬೀಳುತ್ತಿರುವ ಹಿನ್ನೆಲೆಯಲ್ಲಿ ಭಾನುವಾರದ ರಕ್ಷಣಾ ಕಾರ್ಯಾಚರಣೆಗೆ ತೊಡಕುಂಟಾಗಿದೆ.

‘ಜನವರಿ 1ರಂದು ಸಂಭವಿಸಿದ ಭೂಕಂಪದಿಂದಾಗಿ ಕನಿಷ್ಠ 128 ಮಂದಿ ಮೃತಪಟ್ಟಿದ್ದಾರೆ. 195 ಮಂದಿ ನಾಪತ್ತೆಯಾಗಿದ್ದಾರೆ ಎಂದು ವರದಿಯಾಗಿದೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

ಹಮಾಸ್‌ನ ಸೇನಾ ಮೂಲಸೌಕರ್ಯ ನೆಲಸಮ: ಸೇನೆ

ಉತ್ತರ ಆಯ್ತು, ದಕ್ಷಿಣ ಗಾಜಾದತ್ತ ಇಸ್ರೇಲ್ ಚಿತ್ತ

ಜೆರುಸಲೇಂ (ಎಪಿ): ಹಮಾಸ್ ಬಂಡುಕೋರರು ಮತ್ತು ಇಸ್ರೇಲ್ ಸೇನೆ ನಡುವಿನ ಸಂಘರ್ಷವು ಭಾನುವಾರ ನಾಲ್ಕನೇ ತಿಂಗಳಿಗೆ ಕಾಲಿಟ್ಟಿತು. ಹಮಾಸ್‌ನ ಸೇನಾ ಮೂಲಸೌಕರ್ಯಗಳನ್ನು ನೆಲಸಮಗೊಳಿಸುವ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ ಎಂದು ಹೇಳಿರುವ ಇಸ್ರೇಲ್, ಉತ್ತರ ಗಾಜಾ ಮೇಲಿನ ದಾಳಿಯನ್ನು ಮುಕ್ತಾಯಗೊಳಿಸುವ ಸುಳಿವು ನೀಡಿದೆ.

ಈ ಕುರಿತು ಮಾತನಾಡಿದ ಇಸ್ರೇಲ್ ಸೇನಾ ಪಡೆಯ ವಕ್ತಾರ ರಿಯರ್ ಅಡ್ಮಿರಲ್ ಡೇನಿಯಲ್ ಹಗೇರಿ ಅವರು, ‘ಇಸ್ರೇಲ್–ಗಾಜಾ ಗಡಿಯಲ್ಲಿ ಭದ್ರತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ನಮ್ಮ ಪಡೆಗಳು ಯುದ್ಧವನ್ನು ಮುಂದುವರಿಸಲಿವೆ. ಜೊತೆಗೆ ಗಡಿಯಲ್ಲಿ ಬೇಲಿ ಹಾಕುವ ಮೂಲಕ ಕೇಂದ್ರ ಮತ್ತು ದಕ್ಷಿಣ ಗಾಜಾ ಗುರಿಯಾಗಿಸಿ ಕಾರ್ಯಾಚರಣೆ ಮುಂದುವರಿಸಲಿವೆ’ ಎಂದಿದ್ದಾರೆ.

ಇಸ್ರೇಲ್ ದಾಳಿಗೆ 31 ಮಂದಿ ಸಾವು

ಇಸ್ರೇಲ್ ಸೇನೆಯು ಶನಿವಾರ ತಡರಾತ್ರಿ ಮತ್ತು ಭಾನುವಾರ ಹಮಾಸ್ ಬಂಡುಕೋರರನ್ನು ಗುರಿಯಾಗಿಸಿಕೊಂಡು ನಡೆಸಿದ ವೈಮಾನಿಕ ದಾಳಿಗಳಲ್ಲಿ ಒಟ್ಟಾರೆ 31 ಮಂದಿ ಮೃಪಟ್ಟಿದ್ದಾರೆ.

ಶನಿವಾರ ತಡರಾತ್ರಿ ಖಾನ್ ಯೂನಿಸ್ ನಗರದಲ್ಲಿ ನಡೆದ ವೈಮಾನಿಕ ದಾಳಿಯಲ್ಲಿ 12 ಮಕ್ಕಳು ಸೇರಿದಂತೆ 18 ಮಂದಿ ಮೃತಪಟ್ಟಿದ್ದು, ಅವರನ್ನು ಭಾನುವಾರ ನಾಸ್ಸೆರ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ದಾಳಿಯಲ್ಲಿ ಇಲ್ಲಿನ ನಿರಾಶ್ರಿತರ ಕೇಂದ್ರದಲ್ಲಿದ್ದ 50ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಖಾನ್ ಯೂನಿಸ್ ಮತ್ತು ರಫಾ ಪ್ರದೇಶದ ದಕ್ಷಿಣ ನಗರದಲ್ಲಿ ನಡೆದ ಮತ್ತೊಂದು ವೈಮಾನಿಕ ದಾಳಿಯಲ್ಲಿ ಕನಿಷ್ಠ ಏಳು ಮಂದಿ ಬಲಿಯಾಗಿದ್ದು, ಅವರನ್ನು ಹತ್ತಿರದ ಯುರೋಪಿಯನ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಸೋಸಿಯೇಟೆಡ್ ಪ್ರೆಸ್‌ನ ಪತ್ರಕರ್ತರೊಬ್ಬರು ಮಾಹಿತಿ ನೀಡಿದ್ದಾರೆ.

ಆಕ್ರಮಿತ ವೆಸ್ಟ್ ಬ್ಯಾಂಕ್‌ನಲ್ಲಿ ನಡೆದ ದಾಳಿಯಲ್ಲಿ ಆರು ಮಂದಿ ಪ್ಯಾಲೆಸ್ಟೀನ್ ಪ್ರಜೆಗಳು ಸೇರಿದಂತೆ 8 ಮಂದಿ ಮೃತಪಟ್ಟಿದ್ದಾರೆ.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರು, ಇಸ್ರೇಲ್ ಭೇಟಿ ನೀಡುವ ಮುನ್ನವೇ ಇಸ್ರೇಲ್ ಸೇನೆಯ ಈ ಹೇಳಿಕೆ ಹೊರಬಿದ್ದಿದೆ.

ಇಬ್ಬರು ಪತ್ರಕರ್ತರ ಸಾವು: ಪ್ಯಾಲೆಸ್ಟೀನ್ ಪ್ರದೇಶದ ಮೇಲೆ ಇಸ್ರೇಲ್ ಪಡೆಗಳು ನಡೆಸಿರುವ ವೈಮಾನಿಕ ದಾಳಿಯಲ್ಲಿ ಇಬ್ಬರು ಪತ್ರಕರ್ತರು ಮೃತಪಟ್ಟಿದ್ದಾರೆ ಎಂದು ಹಮಾಸ್‌ನ ಆರೋಗ್ಯ ಸಚಿವಾಲಯ ತಿಳಿಸಿದೆ.

ಎಎಫ್‌ಪಿ ಸುದ್ದಿ ಸಂಸ್ಥೆಯ ವಿಡಿಯೋ ಸ್ಟ್ರಿಂಜರ್ ಮುಸ್ತಫಾ ತುರಿಯಾ ಮತ್ತು ‘ಅಲ್ ಜಜೀರಾ’ ಟಿ.ವಿ ವಾಹಿನಿಯ ಪತ್ರಕರ್ತ ಹಮ್ಜಾ ವಾಯೆಲ್ ದಹ್‌ದೌಹ್ ಮೃತಪಟ್ಟವರು.

ರಫಾದಲ್ಲಿ ಇಸ್ರೇಲ್ ದಾಳಿಯಿಂದ ಹಾನಿಗೀಡಾಗಿದ್ದ ಮನೆಯೊಂದರ ವಿಡಿಯೊ ಚಿತ್ರೀಕರಿಸಿ ಭಾನುವಾರ ಕಾರಿನಲ್ಲಿ ಮರಳುತ್ತಿದ್ದಾಗ ಇವರ ಮೇಲೆ ವಾಯು ದಾಳಿ ನಡೆದಿದೆ ಎಂದು ಸಚಿವಾಲಯ ತಿಳಿಸಿದೆ.

ಹಮ್ಜಾ ಅವರ ತಂದೆ ವಾಯೆಲ್ ಅಲ್ ದಹ್‌ದೌಹ್ ಅವರು ‘ಅಲ್ ಜಜೀರಾ’ದ ಬ್ಯುರೊ ಮುಖ್ಯಸ್ಥರಾಗಿದ್ದು, ಇಸ್ರೇಲ್‌ನ ವೈಮಾನಿಕ ದಾಳಿಯಲ್ಲಿ ಈಚೆಗೆ ಗಾಯಗೊಂಡಿದ್ದರು. ವಾಯೆಲ್ ಅವರ ಪತ್ನಿ ಹಾಗೂ ಇತರ ಇಬ್ಬರು ಮಕ್ಕಳು ದಾಳಿಯಲ್ಲಿ ಮೃತಪಟ್ಟಿದ್ದರು.

ಚುನಾವಣೆ ಸ್ಪರ್ಧೆಗೆ ಖುರೇಷಿ ಅನರ್ಹ

ಲಾಹೋರ್ (ಪಿಟಿಐ): ‘ಪಾಕಿಸ್ತಾನದ ತೆಹ್ರೀಕ್–ಎ–ಇನ್ಸಾಫ್ ಪಕ್ಷದ ಹಿರಿಯ ಉಪಾಧ್ಯಕ್ಷ ಶಾಹ್ ಮಹಮೂದ್ ಖುರೇಷಿ ಚುನಾವಣೆಯಲ್ಲಿ ಅರ್ಹರಲ್ಲ ಎಂದು ಪಾಕಿಸ್ತಾನದ ಚುನಾವಣಾ ಮೇಲ್ಮನವಿ ನ್ಯಾಯಮಂಡಳಿ ಹೇಳಿದೆ’ ಎಂದು ದಿ ನ್ಯೂಸ್ ಇಂಟರ್‌ನ್ಯಾಷನಲ್ ಭಾನುವಾರ ವರದಿ ಮಾಡಿವೆ.

‘ತಮ್ಮ ನಾಮಪತ್ರವನ್ನು ತಿರಸ್ಕಾರ ಮಾಡಿದ್ದನ್ನು ಪ್ರಶ್ನಿಸಿ ಖುರೇಷಿ ಅವರು ಸಲ್ಲಿಸಿದ್ದ ಮನವಿಯನ್ನು ಚುನಾವಣಾ ಮೇಲ್ಮನವಿ ನ್ಯಾಯಮಂಡಳಿ ಶನಿವಾರ ತಿರಸ್ಕರಿಸಿದೆ’ ಎಂದು ಅದು ಹೇಳಿದೆ.

ಸಿಂಧ್‌ನ ಉಮರ್‌ಕೋಟ್ ನಗರದ ಎನ್‌ಎ–214 ಕ್ಷೇತ್ರದಿಂದ ಸ್ಪರ್ಧಿಸಲು ಖುರೇಷಿ ಅವರು ಈಗಾಗಲೇ ಅನುಮತಿ ಪಡೆದಿದ್ದರು. ಆದರೆ, ನ್ಯಾಯಮಂಡಳಿಯ ನಿರ್ಧಾರದಿಂದ ಖುರೇಷಿ ಅವರಿಗೆ ಸ್ಪರ್ಧಿಸಲು ಸಾಧ್ಯವಿಲ್ಲದಂತಾಗಿದೆ. ಪ್ರಸ್ತುತ, ಖುರೇಷಿ ಅವರು ಅಧಿಕೃತ ರಹಸ್ಯ ಕಾಯ್ದೆ ಉಲ್ಲಂಘನೆ ಆರೋಪ ಕುರಿತ ಪ್ರಕರಣದಕ್ಕೆ (ಸೈಫರ್) ಸಂಬಂಧಿಸಿದಂತೆ ಜೈಲಿನಲ್ಲಿದ್ದಾರೆ.